ಕನ್ನಡ

# ಬಾಲಭಾರತಿ

ನಾಲ್ಕನೆಯ ಇಯತ್ತೆ



# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಸರಕಾರದ ಅನುಮತಿ ಕ್ರಮಾಂಕ : ಪ್ರಾಶಿಸಂ/೨೦೧೪-೧೫/೨೯೯/ಮಂಜೂರಿ/ಡ-೫೦೫/೧೦೬೩
ದಿನಾಂಕ : ೧೮.೨.೨೦೧೪

ನಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R. Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವ Q.R. Codeದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

# ಕನ್ನಡ ಬಾಲಭಾರತಿ

## ನಾಲ್ಕನೆಯ ಇಯತ್ತೆ



ಹೆಸರು : ......................................

ಶಾಲೆ : ........................................

ಇಯತ್ತೆ : ............. ವಿಭಾಗ : ............

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ,
ಪುಣೆ – ೪೧೧ ೦೦೪.

ಪ್ರಥಮಾವೃತ್ತಿ : ೨೦೧೪
ಪುನರ್ಮುದ್ರಣ : ೨೦೨೧

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-೪

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತಗೊಳಿಸಬಾರದು.

| | |
|---|---|
| ಕನ್ನಡ ಭಾಷಾ ಸಮಿತಿ : | ಶ್ರೀ. ಶಿವಬಾಳ ಕೆ. ಗೋಲಿ, ಅಧ್ಯಕ್ಷ<br>ಶ್ರೀ. ರಾಜೇಂದ್ರ ಡಿ. ಪವಾರ, ಸದಸ್ಯ<br>ಶ್ರೀ. ಸಂಗೊಂಡಾ ಸಿ. ಮಾಳಿ, ಸದಸ್ಯ<br>ಶ್ರೀ. ಹಣಮಂತ ಎಮ್. ಕುಂಭಾರ, ಸದಸ್ಯ<br>ಶ್ರೀಮತಿ. ಜಯದೇವಿ ಆಯ್. ಉಕ್ಕಲಿ, ಸದಸ್ಯೆ<br>ಡಾ. ಸದಾನಂದ ಎಂ. ಬಿಳ್ಳೂರ, ಸದಸ್ಯ-ಸಚಿವರು |
| ಕನ್ನಡ ಕಾರ್ಯಗಟ ಸದಸ್ಯರು : | ಶ್ರೀ. ಜಿ. ಡಿ. ಮೋರೆ<br>ಶ್ರೀ. ಬಿ. ಎಸ್. ಕಾಪಸೆ<br>ಶ್ರೀ. ಟಿ. ವ್ಹಿ. ಸದಾನಂದ<br>ಶ್ರೀಮತಿ. ಶರ್ಮಿಳಾ ಎಸ್. ಶೆಟ್ಟಿ<br>ಶ್ರೀಮತಿ. ಜಯಶ್ರೀ ಎಸ್. ಸ್ವಾಮಿ<br>ಶ್ರೀ. ಶ್ರೀಶೈಲ ಜಿ. ಅವಟಿ |
| ಸಂಯೋಜನ ಪ್ರಮುಖ : | ಡಾ. ಸದಾನಂದ ಎಂ. ಬಿಳ್ಳೂರ, ವಿಶೇಷಾಧಿಕಾರಿಗಳು ಕನ್ನಡ ಪಾಠ್ಯಪುಸ್ತಕ ಮಂಡಳ, 'ಬಾಲಭಾರತಿ', ಪುಣೆ-೪<br>ಶ್ರೀ. ಆರ್. ಎಮ್. ಗಣಾಚಾರಿ, ವಿಷಯ ಸಹಾಯಕ ಕನ್ನಡ |
| ಚಿತ್ರಕಾರ : | ಶ್ರೀ. ಕಿಶೋರ ಗಿರಧಾರಿ |
| ಮುಖಪುಟ : | ಶ್ರೀ. ಸುಹಾಸ ಜಗತಾಪ |
| ಅಕ್ಷರ ಜೋಡಣೆ : | ಪಾಠ್ಯಪುಸ್ತಕ ಮಂಡಳ, ಪುಣೆ-೪ |
| ನಿರ್ಮಿತಿ : | ಶ್ರೀ. ಸಚ್ಚಿತಾನಂದ ಆಫಳೆ, ಮುಖ್ಯ ನಿರ್ಮಿತಿ ಅಧಿಕಾರಿ<br>ಶ್ರೀ. ಸಚಿನ ಮೆಹತಾ, ನಿರ್ಮಿತಿ ಅಧಿಕಾರಿ<br>ಶ್ರೀ. ನಿತಿನ ವಾಣಿ, ನಿರ್ಮಿತಿ ಸಹಾಯಕ |
| ಕಾಗದ : | ೭೦ ಜಿ. ಎಸ್. ಎಮ್. ಕ್ರಿಮವೋವ್ಹ್ |
| ಮುದ್ರಣಾದೇಶ : | N/PB/2021-22/4,000 |
| ಮುದ್ರಕ : | M/S SHARP INDUSTRIES, RAIGAD |
| ಪ್ರಕಾಶಕ : | ಶ್ರೀ. ವಿವೇಕ ಗೋಸಾವಿ, ನಿಯಂತ್ರಕ<br>ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪ್ರಭಾದೇವಿ, ಮುಂಬಯಿ-೨೫. |

# ಭಾರತದ ಸಂವಿಧಾನ

## ಪೀಠಿಕೆ

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ**
**ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು
ಹಾಗೂ ಅದರ ಸಮಸ್ತ ನಾಗರಿಕರಿಗೆ :
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ
ಮತ್ತು ಉಪಾಸನಾ **ಸ್ವಾತಂತ್ರ್ಯ;**
ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**
ನಿಶ್ಚಿತವಾಗಿ ದೊರೆಯುವಂತೆ ಮಾಡಲು
ಮತ್ತು ವ್ಯಕ್ತಿಗೌರವವನ್ನು
ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು
ಆಶ್ವಾಸನೆ ನೀಡುವ **ಬಂಧುತ್ವವನ್ನು**
ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;
**ನಮ್ಮ ಸಂವಿಧಾನ ಸಭೆಯಲ್ಲಿ**
ಇಂದು ದಿನಾಂಕ ಇಪ್ಪತ್ತಾರನೆಯ ನವ್ಹೆಂಬರ, ೧೯೪೯ ನೆಯ ಇಸವಿ
**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ**
**ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

‘ಬಾಲಕರ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಅಧಿಕಾರ ಅಧಿನಿಯಮ-೨೦೦೯’ ಮತ್ತು ‘ರಾಷ್ಟ್ರೀಯ ಶೈಕ್ಷಣಿಕ ರೂಪರೇಷೆ - ೨೦೦೫’ ಇವುಗಳನ್ನು ಮುಂದಿಟ್ಟುಕೊಂಡು ರಾಜ್ಯದಲ್ಲಿ ‘ಪ್ರಾಥಮಿಕ ಶಿಕ್ಷಣ ಅಭ್ಯಾಸಕ್ರಮ - ೨೦೧೨’ನ್ನು ಸಿದ್ಧಪಡಿಸಲಾಯಿತು. ಈ ಸರಕಾರಮಾನ್ಯ ಅಭ್ಯಾಸಕ್ರಮದ ಮೇಲೆ ಆಧಾರಿತವಾದ ಕನ್ನಡ ವಿಷಯದ ಒಂದನೆಯ ಇಯತ್ತೆಯಿಂದ ಎಂಟನೆಯ ಇಯತ್ತೆಯವರೆಗಿನ ಹೊಸ ಬಾಲಭಾರತಿ ಪುಸ್ತಕಮಾಲೆಯನ್ನು ೨೦೧೩-೧೪ ಈ ಶೈಕ್ಷಣಿಕ ವರ್ಷದಿಂದ ಹಂತ ಹಂತವಾಗಿ ಪಾಠ್ಯಪುಸ್ತಕ ಮಂಡಳವು ಪ್ರಕಾಶನ ಮಾಡುತ್ತಿದೆ. ಈ ಪುಸ್ತಕಮಾಲೆಯಲ್ಲಿಯ ನಾಲ್ಕನೆಯ ಇಯತ್ತೆಯ ಪುಸ್ತಕವನ್ನು ತಮ್ಮ ಕೈಯಲ್ಲಿಡಲು ನಮಗೆ ಆನಂದವೆನಿಸುತ್ತದೆ.

ಪ್ರಸ್ತುತ ಪುಸ್ತಕದಲ್ಲಿ ಕೃತಿಪ್ರಧಾನ ಹಾಗೂ ಜ್ಞಾನರಚನಾವಾದದ ಮೇಲೆ ಹೆಚ್ಚು ಒತ್ತು ಕೊಡಲಾಗಿದ್ದು ಮಕ್ಕಳ ವಯೋಮಾನ ಮತ್ತು ಭಾವವಿಶ್ವಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳಿಗೆ ಪೂರಕವೆನಿಸುವಂತಹ ಗದ್ಯ-ಪದ್ಯಗಳನ್ನು ಇಲ್ಲಿ ಸಮಾವೇಶ ಮಾಡಲಾಗಿದೆ. ಅವರ ಭಾಷಾ ಶಿಕ್ಷಣವು ಮನೋರಂಜಕವೂ ಮತ್ತು ಆನಂದದಾಯಿಯೂ ಆಗಲೆಂದು ವಿವಿಧ ಭಾಷಾ ಆಟಗಳು, ನೀತಿಬೋಧಕ ಕಥೆ/ಕವಿತೆಗಳನ್ನು ಕೊಡಲಾಗಿದೆ. ಆಯಾ ಪಾಠಕ್ಕೆ ಯೋಗ್ಯವಾದ, ಬಣ್ಣ ಬಣ್ಣದ ಚಿತ್ರಗಳನ್ನು ಉಪಯೋಗಿಸಲಾಗಿದೆ. ಇವುಗಳ ಅಭ್ಯಾಸ ಚೆನ್ನಾಗಿ ಆಗಬೇಕೆಂಬ ಅಪೇಕ್ಷೆ ಇದೆ.

ಶಿಕ್ಷಕರಿಗೆ ಪ್ರಭಾವಶಾಲಿಯಾಗಿ ಅಧ್ಯಾಪನ ಮಾಡಲು ಬರಬೇಕೆಂದು ಪಠ್ಯಪುಸ್ತಕದ ರಚನೆಯನ್ನು ವೈಶಿಷ್ಟ್ಯಪೂರ್ಣವಾಗಿ ಮಾಡಲಾಗಿದೆ. ಪುಸ್ತಕದೊಳಗಿನ ಪಾಠಾಂಶವನ್ನು ಕಲಿಸುತ್ತಿರುವಾಗ ಯಾವ ರೀತಿ ಕಾಳಜಿ ವಹಿಸಬೇಕು ಎಂಬ ಸೂಚನೆಯನ್ನು ಆಯಾ ಪುಟದಲ್ಲಿ ಕೊಡಲಾಗಿದೆ. ಅದರ ಉಪಯೋಗ ಚೆನ್ನಾಗಿ ಆಗಬೇಕೆಂಬ ಅಪೇಕ್ಷೆ ಇದೆ.

ಕನ್ನಡ ಭಾಷಾ ಸಮಿತಿ, ಕಾರ್ಯಗಟ ಸದಸ್ಯರು ಹಾಗೂ ಚಿತ್ರಕಾರ ಇವರ ಪ್ರಾಮಾಣಿಕವಾದ ಪರಿಶ್ರಮದಿಂದ ಈ ಪುಸ್ತಕವು ಸಿದ್ಧವಾಗಿದೆ. ಈ ಪಠ್ಯಪುಸ್ತಕವು ದೋಷರಹಿತ ಮತ್ತು ಉತ್ತಮ ಗುಣಮಟ್ಟದ್ದು ಆಗಬೇಕೆಂಬ ಉದ್ದೇಶದಿಂದ ರಾಜ್ಯದ ವಿವಿಧ ಭಾಗಗಳಿಂದ ಆಯ್ದ ಪ್ರಾಥಮಿಕ ಶಿಕ್ಷಕರಿಂದ ಮತ್ತು ತಜ್ಞರಿಂದ ಈ ಪುಸ್ತಕದ ಸಮೀಕ್ಷಣೆಯನ್ನು ಮಾಡಿಸಲಾಗಿದೆ. ಸಮೀಕ್ಷಕರ ಸೂಚನೆ ಹಾಗೂ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಕನ್ನಡ ಭಾಷಾ ಸಮಿತಿಯು ಪುಸ್ತಕಕ್ಕೆ ಅಂತಿಮ ಸ್ವರೂಪವನ್ನು ಕೊಟ್ಟಿದೆ.

ಕನ್ನಡ ಭಾಷಾ ಸಮಿತಿ ಹಾಗೂ ಕಾರ್ಯಗಟ ಸದಸ್ಯರು, ಸಂಬಂಧಿತ ಸಮೀಕ್ಷಕರು, ತಜ್ಞರು, ಚಿತ್ರಕಾರ ಇವರೆಲ್ಲರಿಗೆ ಮಂಡಳವು ಮನಃಪೂರ್ವಕವಾಗಿ ಆಭಾರಿಯಾಗಿದೆ. ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪಾಲಕರು ಈ ಪುಸ್ತಕವನ್ನು ಸ್ವಾಗತಿಸುವರೆಂದು ಆಶಿಸಿದ್ದೇವೆ.

**(ಚಂ. ರಾ. ಬೋರಕರ)**

**ಸಂಚಾಲಕ**

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ

ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

ಪುಣೆ

ದಿನಾಂಕ : ೨೦.೦೩.೨೦೧೮

# ನಾಲ್ಕನೆಯ ಇಯತ್ತೆ - ಕನ್ನಡ ಅಧ್ಯಯನ ನಿಷ್ಪತ್ತಿಗಳು

## ಅಧ್ಯಯನದಲ್ಲಿ ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆಗಳು

**ಎಲ್ಲ ವಿದ್ಯಾರ್ಥಿಗಳಿಗೆ (ಬೇರೆ ಬೇರೆ ರೂಪದಲ್ಲಿ ಸಕ್ಷಮ ಮಕ್ಕಳು ಸಹಿತ) ವೈಯಕ್ತಿಕ ಅಥವಾ ಸಾಮೂಹಿಕ ಸ್ವರೂಪದಲ್ಲಿ ಪ್ರೋತ್ಸಾಹನೆ ನೀಡಬೇಕು. ಕಾರಣ ಅವರಿಗೆ-**

- ವಿವಿಧ ವಿಷಯಗಳು, ಪರಿಸ್ಥಿತಿ, ಘಟನೆಗಳು, ಅನುಭವಗಳು, ಕಥೆ, ಕವಿತೆ ಇತ್ಯಾದಿ ಸ್ವಂತ ಪದ್ಧತಿಯಿಂದ ಮತ್ತು ತಮ್ಮ ಭಾಷೆಯಲ್ಲಿ ಹೇಳುವರು/ಪ್ರಶ್ನೆ ಕೇಳುವದು ಹಾಗೂ ಅದರಲ್ಲಿ ಹೆಚ್ಚಳ ಮಾಡುವದು ಇವೆಲ್ಲವುಗಳಿಗೆ ಅವಕಾಶ ಕೊಡಬೇಕು.
- ವಾಚನಕಟ್ಟೆ/ಗ್ರಂಥಾಲಯದಲ್ಲಿ ಮಕ್ಕಳಿಗೆ ಸ್ತರಗಳನುಸಾರವಾಗಿ ಬೇರೆ ಬೇರೆ ಭಾಷೆಗಳ (ಮಕ್ಕಳ ಸ್ವಂತದ ಭಾಷೆ/ಇತರ ಭಾಷೆಯಲ್ಲಿಯ) ಮನೋರಂಜಕ ಸಾಹಿತ್ಯ ಉದಾ:ಬಾಲಸಾಹಿತ್ಯ, ಬಾಲಪತ್ರಿಕೆ, ಫಲಕ, ದೃಕ್‌ಶ್ರಾವ್ಯ ಸಾಹಿತ್ಯ ಉಪಲಬ್ಧ ಮಾಡಿಕೊಡಬೇಕು.
- ಬೇರೆ ಬೇರೆ ಕಥೆ, ಕವಿತೆ, ಫಲಕ ಇತ್ಯಾದಿ ತಿಳಿದುಕೊಂಡು ಓದುವುದು, ತಿಳಿಸುವುದು ಅದರ ಮೇಲೆ ತಮ್ಮ ಪ್ರತಿಕ್ರಿಯೆ ಕೊಡುವುದು, ಚರ್ಚೆ ಮಾಡುವುದು. ಪ್ರಶ್ನೆ ವಿಚಾರಿಸುವುದಕ್ಕೆ ಅವಕಾಶ ಕೊಡಬೇಕು.
- ವಿವಿಧ ಉದ್ದೇಶಗಳನ್ನು ಗಮನದಲ್ಲಿರಿಸಿಕೊಂಡು ವಿವಿಧ ಸಂಗತಿಗಳಿಗೆ ಯೋಗ್ಯ ಸ್ಥಾನ ನೀಡುವ ಅವಕಾಶ ಇರಬೇಕು. ಉದಾ: ಯಾವುದೊಂದು ಘಟನೆ ಅಥವಾ ಪಾತ್ರಗಳ ಕುರಿತು ತಮ್ಮ ಪ್ರತಿಕ್ರಿಯೆ, ಅಭಿಪ್ರಾಯ, ತರ್ಕ ಮಂಡನೆ, ವಿಶ್ಲೇಷಣ ಮಾಡುವದು ಇತ್ಯಾದಿ.
- ಕಥೆ, ಕವಿತೆ ಇತ್ಯಾದಿ ಪ್ರಕಟವಾಚನ ಮಾಡುವುದು ಕೇಳಿ ಮತ್ತು ಓದಿದ, ನೋಡಿದ ಕಥೆ ತಮ್ಮ ಭಾಷೆಯಲ್ಲಿ ಹೇಳುವದು ಮತ್ತು ಬರೆಯುವದು (ಭಾಷಿಕ ಮತ್ತು ಸಾಂಕೇತಿಕ ಸ್ವರೂಪದಲ್ಲಿ) ಈ ಅವಕಾಶಗಳನ್ನು ಮತ್ತು ಅದಕ್ಕೆ ಪ್ರೋತ್ಸಾಹನೆ ಕೊಡಬೇಕು.
- ಅವಶ್ಯಕತೆಯನುಸಾರ ಮತ್ತು ಸಂದರ್ಭಾನುಸಾರ ತಮ್ಮ ಭಾಷೆ ತಿಳಿದುಕೊಳ್ಳುವದು (ಹೊಸ ಶಬ್ದ/ವಾಕ್ಯ ಇತ್ಯಾದಿ) ಮತ್ತು ಅವುಗಳನ್ನು ಬಳಸಲು ಅವಕಾಶ ಕೊಡಬೇಕು.
- ಪರಸ್ಪರರು ಬರೆದ ಕಥೆಗಳನ್ನು ಕೇಳುವದು, ಓದುವದು ಮತ್ತು ಅವುಗಳನ್ನು ಕುರಿತು ಅಭಿಪ್ರಾಯಗಳನ್ನು ಕೊಡುವುದು, ಅದರಲ್ಲಿ ತಮ್ಮ ವಿಚಾರಗಳನ್ನು ಕೂಡಿಸಿ ವಿವಿಧ ಪ್ರಕಾರದಿಂದ ಬರೆಯಲು ಅವಕಾಶ ನೀಡಬೇಕು.
- ತಮ್ಮ ಪದ್ಧತಿಯಿಂದ/ಸೃಜನಾತ್ಮಕ ಅಭಿವ್ಯಕ್ತಿ (ಮೌಖಿಕ, ಲಿಖಿತ ಮತ್ತು ಸಾಂಕೇತಿಕ ಸ್ವರೂಪದಲ್ಲಿ) ಮಾಡುವ ಸ್ವಾತಂತ್ರ್ಯ ನೀಡಬೇಕು.
- ಸುತ್ತುಮುತ್ತಲಿನ ನಡೆಯುವ ಕ್ರಿಯೆಗಳು/ಘಟನೆಗಳು (ಉದಾ: ನನ್ನ ಮನೆಯ ಮಾಳಿಗೆಯಿಂದ ಸೂರ್ಯ ಏಕೆ ಕಾಣಿಸುವದಿಲ್ಲ? ಎದುರಿನ ಗಿಡದ ಮೇಲೆ ಕುಳಿತಿರುವ ಗುಬ್ಬಿ ಎಲ್ಲಿಗೆ ಹೊರಟು ಹೋಯಿತು?) ಇಂಥ ಪ್ರಶ್ನೆಗಳನ್ನು ಕೇಳುವದು, ಸಹ ಅಧ್ಯಾಯ ಚರ್ಚೆ ಮಾಡಲು ಅವಕಾಶ ಒದಗಿಸಬೇಕು.
- ವರ್ಗದಲ್ಲಿಯ ತಮ್ಮ ಗೆಳೆಯರಿಂದ ಆಡುಭಾಷೆಯ ನಿರೀಕ್ಷಣೆ ಮಾಡುವ ಅವಕಾಶ ಕೊಡಬೇಕು. ಉದಾ: ಮಾವಿನ ಹಣ್ಣು , ಹೋಳಿಗೆ, ಗಿಳಿ ಇತ್ಯಾದಿ ಶಬ್ದಗಳಿಗೆ ಅವರವರ ಭಾಷೆಯಲ್ಲಿ ಏನು ಅನ್ನುವನು, ಇದನ್ನು ತಿಳಿದುಕೊಳ್ಳುವ ಅವಕಾಶ ನೀಡಬೇಕು.
- ಆಶಯದ ಸಂದರ್ಭದಿಂದ ಉಪಯೋಗಿಸಲು ಬರುವ ಭಾಷೆಯ ಸೂಕ್ಷ್ಮತೆ ಮತ್ತು ನಿಯಮ ಬದ್ಧ ಮಂಡನೆ ಮತ್ತು ಅದರ ಬಳಕೆ ಮಾಡುವ ಅವಕಾಶ ಕೊಡಬೇಕು.
- ಇತರ ವಿಷಯಗಳು, ವ್ಯವಸಾಯ, ಕಲೆ ಇತ್ಯಾದಿ (ಉದಾ. ಗಣಿತ, ವಿಜ್ಞಾನ, ಸಾಮಾಜಿಕ ಅಭ್ಯಾಸ, ನೃತ್ಯಕಲೆ, ಚಿಕಿತ್ಸೆ ಇತ್ಯಾದಿ) ಇವುಗಳಲ್ಲಿ ಬರುವ ಶಬ್ದಗಳು ತಿಳಿಯುವ ಮತ್ತು ಅವುಗಳ ಸಂದರ್ಭಾನುಸಾರ ಬಳಕೆ ಮಾಡುವ ಅವಕಾಶ ಇರಬೇಕು.
- ಪಠ್ಯಪುಸ್ತಕ ಮತ್ತು ಅದಕ್ಕೆ ಸಂಬಂಧಿತ ಇತರ ಸಾಹಿತ್ಯಗಳಲ್ಲಿರುವ ನೈಸರ್ಗಿಕ, ಸಾಮಾಜಿಕ ಮತ್ತು ಸಂವೇದನಶೀಲ ಅಂಶಗಳನ್ನು ತಿಳಿದುಕೊಂಡು ಅವುಗಳನ್ನು ಕುರಿತು ಚರ್ಚಿಸಲು ಅವಕಾಶ ಕೊಡಬೇಕು.

## ಅಧ್ಯಯನ ನಿಷ್ಪತ್ತಿಗಳು

**ಅಧ್ಯಯನಾರ್ಥಿಗಳು**

04.06.01 ಇತರರು ಹೇಳಿದ ಕಥೆಗಳನ್ನು ಗಮನವಿಟ್ಟು ಕೇಳುವನು ಹಾಗೂ ಅವುಗಳನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸುವನು, ಅವುಗಳನ್ನು ಕುರಿತು ಪ್ರಶ್ನೆಗಳನ್ನು ಕೇಳುವನು.

04.06.02 ಆಲಿಸಿದ ಸಾಹಿತ್ಯ ಪ್ರಕಾರಗಳಲ್ಲಿಯ ವಿಷಯ, ಘಟನೆ, ಚಿತ್ರ, ಪಾತ್ರ, ಶೀರ್ಷಿಕೆ ಇವುಗಳನ್ನು ಮಾತುಕತೆಯಾಡುವನು, ಚರ್ಚೆ ಮಾಡುವನು, ಪ್ರಶ್ನೆಗಳನ್ನು ಕೇಳುವನು ತಮ್ಮ ಅಭಿಪ್ರಾಯ ವ್ಯಕ್ತಪಡಿಸುವನು, ತಮ್ಮ ಅಭಿಪ್ರಾಯ ಸರಿ ಹೇಗಿದೆ, ಎಂದು ತಿಳಿಸಲು ಅದರ ಹಿಂದಿನ ವಿಚಾರ ಹೇಳುವನು.

04.06.03 ಕಥೆ, ಕವಿತೆ ಅಥವಾ ಇತರ ಸಾಹಿತ್ಯದ ಬಗ್ಗೆ ಹೇಳುವಾಗ ಅವುಗಳಲ್ಲಿ ತಮ್ಮ ಸ್ವಂತದ ವಿಚಾರಗಳನ್ನು ಕೂಡಿಸುವನು.

04.06.04 ಸ್ವಂತದ ಅನಿಸಿಕೆಗಳನ್ನು ಹೇಳುವಾಗ ಭಾಷೆಯ ವಿವಿಧ ವೈಶಿಷ್ಟ್ಯಗಳನ್ನು ಸೂಕ್ಷ್ಮವಾಗಿ ಬಳಸುವನು.

04.06.05 ವಿವಿಧ ಪ್ರಕಾರದ ಸಾಹಿತ್ಯದಲ್ಲಿ (ಉದಾ:ವರ್ತಮಾನ ಪತ್ರಗಳಲ್ಲಿಯ ವಾರ್ತೆಯ ಶೀರ್ಷಿಕೆ, ಬಾಲಸಾಹಿತ್ಯ) ನೈಸರ್ಗಿಕ, ಸಾಮಾಜಿಕವಾಗಿ ಬಂದಿರುವ ಇತರ ಸಂಗತಿಗಳು ಇವುಗಳನ್ನು ಸಂವೇದನ ಶೀಲದಿಂದ ತಿಳಿದುಕೊಂಡು ಅವುಗಳನ್ನು ಚರ್ಚಿಸುವನು.

04.06.06 ಓದಿದ ವಿವರ ಮತ್ತು ದೈನಂದಿನ ಅನುಭವ ಇವೆರಡರ ಒಟ್ಟಾರೆ ಯೋಚನೆ ಮಾಡಿ, ಅದರಿಂದ ನಿರ್ಮಿತವಾದ ಸಂವೇದನೆ ಮತ್ತು ವಿಚಾರಗಳನ್ನು ಮೌಖಿಕ/ಲಿಖಿತ ಸ್ವರೂಪದಲ್ಲಿ ವ್ಯಕ್ತ ಪಡಿಸುವನು.

04.06.07 ಪಠ್ಯಪುಸ್ತಕದ ಹೊರತಾಗಿ ಇತರ ವಿವರಗಳ (ಬಾಲಸಾಹಿತ್ಯ, ವರ್ತಮಾನ ಪತ್ರಗಳಲ್ಲಿಯ ಮುಖ್ಯ ಶೀರ್ಷಿಕೆಗಳು, ಪ್ರಸಿದ್ಧಿ ಫಲಕ ಇತ್ಯಾದಿ) ವಾಚನ ತಿಳಿದುಕೊಂಡು ಮಾಡುವನು.

04.06.08 ಬೇರೆ ಬೇರೆ ಸಾಹಿತ್ಯರಚನೆಯಲ್ಲಿ ಬಂದಿರುವ ಹೊಸ ಶಬ್ದಗಳ ಅರ್ಥ ಸಂದರ್ಭದಿಂದ ತಿಳಿದುಕೊಳ್ಳುವನು.

04.06.09 ಓದಲು ಉತ್ಸುಕರಾಗಿರುವನು ಹಾಗೂ ವಾಚನಸ್ಥಳ/ಗ್ರಂಥಾಲಯದಿಂದ ತಮಗೆ ಇಷ್ಟವಿರುವ ಪುಸ್ತಕಗಳನ್ನು ಸ್ವತಃ ಆರಿಸುವನು ಹಾಗೂ ಅವುಗಳನ್ನು ಓದುವನು.

04.06.10 ಓದಿದ ರಚನೆಗಳಲ್ಲಿಯ ಮುಖ್ಯವಿಷಯ, ಘಟನೆ, ಚಿತ್ರ, ಪಾತ್ರ, ಶೀರ್ಷಿಕೆ ಇವುಗಳ ಬಗ್ಗೆ ಚರ್ಚೆ ಮಾಡುವನು, ಪ್ರಶ್ನೆಗಳನ್ನು ಕೇಳುವನು, ತಮ್ಮ ಅಭಿಪ್ರಾಯಗಳನ್ನು ಕೇಳುವನು, ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವನು.

04.06.11 ಸ್ತರಾನುಸಾರ ಇತರ ವಿಷಯ, ವ್ಯವಸಾಯ, ಕಲೆ ಇತ್ಯಾದಿ. (ಉದಾ:ಗಣಿತ, ವಿಜ್ಞಾನ, ಸಾಮಾಜಿಕ ಅಭ್ಯಾಸ, ನೃತ್ಯಕಲೆ, ಚಿಕಿತ್ಸೆ ಇತ್ಯಾದಿ) ಇವುಗಳಲ್ಲಿ ಬಳಸುವ ಶಬ್ದಸಂಗ್ರಹಗಳನ್ನು ತಿಳಿದುಕೊಳ್ಳುವನು.

04.06.12 ಭಾಷೆಯಲ್ಲಿಯ ವಿವಿಧ ಸೂಕ್ಷ್ಮತೆಗಳನ್ನು ಉದಾ: ಶಬ್ದಗಳ ಪುನರಾವೃತ್ತಿ, ಸರ್ವನಾಮ, ವಿಶೇಷಣ, ಲಿಂಗ, ವಚನ ಇತ್ಯಾದಿಗಳ ಬಗ್ಗೆ ಜಾಗರೂಕತೆಯಿಂದ ಲೇಖನ ಮಾಡುವನು.

04.06.13 ಯಾವದೊಂದು ವಿಷಯ ಕುರಿತು ಬರೆಯುವಾಗ ಶಬ್ದಗಳ ಸೂಕ್ಷ್ಮತೆಗಳು, ಅವುಗಳಲ್ಲಿ ವ್ಯತ್ಯಾಸ ತಿಳಿಯುವನು ಹಾಗೂ ಬರೆಯುವಾಗ ಶಬ್ದಗಳನ್ನು ಯೋಗ್ಯ ಬಳಕೆ ಮಾಡುವನು.

04.06.14 ವಿಶಿಷ್ಟ ಪರಿಸ್ಥಿತಿ ಮತ್ತು ಉದ್ದೇಶ (ಗಾಜಿನ ಫಲಕದ ಮೇಲೆ ಹಚ್ಚಲಾಗುವ ಸೂಚನೆಗಳು, ವಸ್ತುಗಳ ಸೂಚಿ, ಕವಿತೆ, ಕಥೆ, ಪತ್ರ ಇತ್ಯಾದಿ) ಗಮನಿಸಿ ಲೇಖನ ಮಾಡುವನು.

04.06.15 ಸ್ವಂತದ ಇಚ್ಛೆಯಿಂದ ಅಥವಾ ಶಿಕ್ಷಕರು ಕೊಟ್ಟ ಕೃತಿ ಅಂತರ್ಗತ ಲೇಖನ ಪ್ರಕ್ರಿಯೆ ತಿಳಿದುಕೊಳ್ಳುವನು, ಸ್ವಂತದ ಲೇಖನ ಪರಿಶೀಲಿಸಿಕೊಳ್ಳುವನು ಮತ್ತು ಲೇಖನದ ಉದ್ದೇಶ ಮತ್ತು ಓದುಗರ ಇವುಗಳಿಗನುಸಾರವಾಗಿ ಅದರಲ್ಲಿ ಬದಲಾವಣೆ ಮಾಡುವನು.

04.06.16 ಬೇರೆ ಬೇರೆ ಸಾಹಿತ್ಯಗಳಲ್ಲಿ ಬಂದ ಹೊಸ ಶಬ್ದಗಳ ಅರ್ಥ ತಿಳಿದುಕೊಂಡು ಅವುಗಳನ್ನು ತಮ್ಮ ಲೇಖನದಲ್ಲಿ ಬಳಕೆ ಮಾಡುವನು.

04.06.17 ವಿವಿಧ ಉದ್ದೇಶಗಳಿಗಾಗಿ ಲೇಖನ ಮಾಡುವಾಗ ಯೋಗ್ಯ ವಿರಾಮಚಿಹ್ನೆಗಳನ್ನು (ಪೂರ್ಣ ವಿರಾಮ, ಸ್ವಲ್ಪ ವಿರಾಮ, ಪ್ರಶ್ನೆಚಿಹ್ನೆ ಇತ್ಯಾದಿ) ತಿಳಿದುಕೊಂಡು ಬಳಸುವನು.

04.06.18 ತಮ್ಮ ಕಲ್ಪಕತೆಯನುಸಾರ ಕಥೆ, ಕವಿತೆ, ವರ್ಣನೆ ಇತ್ಯಾದಿಗಳನ್ನು ಬರೆಯುವಾಗ ಭಾಷೆಯ ಬಳಕೆ ಸೃಜನ ಶೀಲತೆಯಿಂದ ಮಾಡುವನು.

# ಪರಿವಿಡಿ


| ಅ. ಕ್ರ. | ಪಾಠಗಳು | ಕವಿ/ಲೇಖಕರು | ಪುಟ |
|---|---|---|---|
| ◆ | ಚಿಟ್ಟೆ (ಶ್ರವಣಗೀತೆ) | .......... | ೧ |
| ◆ | ಕಡಲ ತೀರ (ಸಂಭಾಷಣೆ) | .......... | ೨, ೩ |
| ◆ | ಇರುವೆ ಮತ್ತು ಪಾರಿವಾಳ (ಚಿತ್ರಕಥೆ) | .......... | ೪ |
| ೧) | ನನ್ನ ಬಯಕೆ (ಕವಿತೆ) | ........... | ೫ ರಿಂದ ೮ |
| ೨) | ಗೆಳೆತನ | ........... | ೯ ರಿಂದ ೧೩ |
| ೩) | ಗುಳ್ಳವ್ವನ ಪೂಜೆ | ಸಿಂಪಿ ಲಿಂಗಣ್ಣ | ೧೪ ರಿಂದ ೧೮ |
| ೪) | ಉಕ್ಕಿನ ಮನುಜ (ಕವಿತೆ) | ಎಂ. ಎಂ. ಸಂಗಣ್ಣವರ | ೧೯ ರಿಂದ ೨೧ |
| ೫) | ನಿಜವಾದ ಸಂಪತ್ತು | ........... | ೨೨ ರಿಂದ ೨೬ |
| ೬) | ಜ್ಞಾನ ವೃದ್ಧ | ಡಿ. ಎನ್. ಶ್ರೀನಾಥ್ | ೨೭ ರಿಂದ ೩೧ |
| ೭) | ಹಿತನುಡಿ (ಕವಿತೆ) | ವೆಂಕಟೇಶ ಹುಣಸೀಕಟ್ಟಿ | ೩೨ ರಿಂದ ೩೪ |
| ೮) | ಮಾ. ಸುಭಾಷರಾವ ಕನ್ಸೆ | ಬಿ. ಬೋರೇಗೌಡ | ೩೫ ರಿಂದ ೩೯ |
| ೯) | ದೀಪಗಳ ಮೇಲಾಟ | ........... | ೪೦ ರಿಂದ ೪೫ |
| ೧೦) | ದೇಶ ಕಟ್ಟೋಣ ಬಾ (ಕವಿತೆ) | ಜಯವಂತ ಕಾಡದೇವರ | ೪೬ ರಿಂದ ೪೯ |
| ೧೧) | ಅತಿ ಆಸೆ ಗತಿಗೇಡು | ಮ. ನಿ. ತೋಳನೂರ | ೫೦ ರಿಂದ ೫೪ |
| ೧೨) | ಚದುರಂಗ | ನಾರಾಯಣ ಶಾಸ್ತ್ರಿ | ೫೫ ರಿಂದ ೫೯ |
| ೧೩) | ಗೋವಿನ ಹಾಡು ಭಾಗ-೧ (ಕವಿತೆ) | .......... | ೬೦ ರಿಂದ ೬೪ |
| ೧೪) | ಬಸವಣ್ಣನವರು | .......... | ೬೫ ರಿಂದ ೬೯ |
| ೧೫) | ಸಂಸ್ಕಾರ | ಅನಂತ ಕಲ್ಲೋಳ | ೭೦ ರಿಂದ ೭೪ |
| ೧೬) | ಗೋವಿನ ಹಾಡು ಭಾಗ-೨ (ಕವಿತೆ) | ........... | ೭೫ ರಿಂದ ೭೮ |
| ೧೭) | ಪ್ರಥಮ ಚಿಕಿತ್ಸೆ | ........... | ೭೯ ರಿಂದ ೮೩ |
| ೧೮) | ಸಚಿನ ರಮೇಶ ತೆಂಡೂಲ್ಕರ | ........... | ೮೪ ರಿಂದ ೮೮ |

# ಚಿಟ್ಟೆ

ಹೂಗಳಲ್ಲಿ ಗಿಡಗಳಲ್ಲಿ
ಹಾರಿ ನಲಿವ ಚಿಟ್ಟೆ
ಎಂಥ ಚೆಂದ ನೀನು ಉಟ್ಟ
ಬಣ್ಣ ಬಣ್ಣ ಬಟ್ಟೆ.

ಅಲ್ಲಿ ಇಲ್ಲಿ ಜಿಗಿದು ಚಿಮ್ಮಿ
ಕೂತು ನಿಂತು ಕುಣಿದೆ,
ನಿನ್ನ ಹಿಡಿಯಲೆಂದು ಹಿಂದೆ
ಓಡಿ ನಾನು ದಣಿದೆ.

ಮೆಲ್ಲನೊಮ್ಮೆ ಹೆಜ್ಜೆ ಹಾಕಿ
ನಿನ್ನ ಮೈ ಮುಟ್ಟಿದೆ,
ತಟ್ಟನೆದ್ದು ಹಾರಿ ಬಿಟ್ಟೆ
ನಾನು ಕೈ ತಟ್ಟಿದೆ.

ಎಷ್ಟು ಮೃದು ನಿನ್ನ ರೆಕ್ಕೆ
ಒಳಗೆ ಪುಟ್ಟ ಮೈ,
ಹೀಗೆ ಇವೆ ನಮ್ಮ ಮನೆ
ಪುಟ್ಟ ಪಾಪು ಕೈ.

– ವನರಾಗ ಶರ್ಮಾ



**ಶಿಕ್ಷಕರಿಗೆ ಸೂಚನೆ :** ಈ ಕವಿತೆಯನ್ನು ಸಾಭಿನಯದೊಂದಿಗೆ ಮಕ್ಕಳಿಂದ ಹಾಡಿಸಿರಿ. ಶ್ರವಣ ಕೌಶಲವನ್ನು ಬೆಳೆಸಲು ಇಂತಹ ಬೇರೆ ಬೇರೆ ಕವಿತೆಗಳನ್ನು ಕಲಿಸಿರಿ.

# ಕಡಲ ತೀರ



ಮಾಧುರಿ : ಅಪ್ಪಾಜಿ, ಅಲ್ಲಿ ನೋಡಿ, ಅದೆಷ್ಟು ನೀರು ? ನನಗೆ ತುಂಬ ಆಶ್ಚರ್ಯವಾಗುತ್ತಿದೆ. ಈ ನೀರಿಗೆ ಕೊನೆಯೇ ಇಲ್ಲವೇನು ?

ತಂದೆ : ಮಾಧುರಿ, ಅದನ್ನೇ ಸಮುದ್ರವೆಂದು ಕರೆಯುವರು. ನಮ್ಮ ಪೃಥ್ವಿಯ ಮೇಲೆ ನೀರು, ಹಿಮ-ಗಿರಿ ಕಂದರಗಳಿವೆಯೆಂದು ನೀನು ಓದಿರುವಿ. ಈ ನೀರಿಗೆ ಕೊನೆ ಇದ್ದೇ ಇದೆ. ನಾವು ನೋಡುತ್ತಿರುವದು ಅರಬೀ ಸಮುದ್ರ. ಇಂಥ ಸಮುದ್ರಗಳು ಇನ್ನೂ ಇವೆ.

ಮಾಧುರಿ : ನಾನು ಸಮುದ್ರದ ಬಗ್ಗೆ ಪುಸ್ತಕದಲ್ಲಿ ಮಾತ್ರ ಓದಿದ್ದೆ. ಅಬ್ಬಾ! ಪ್ರತ್ಯಕ್ಷ ಕಂಡಾಗ ಅದೆಂಥ ಸೊಬಗು !

ತಂದೆ : ಮಾಧುರಿ, ಇದೋ ನೋಡು. ಇದು ಭಾರತದ ಹೆಬ್ಬಾಗಿಲು. ಇದನ್ನು ಎಲ್ಲರು 'ಗೇಟವೆ ಆಫ್ ಇಂಡಿಯಾ' ಎಂದು ಕರೆಯುವರು. ಇದು ಈ ಕಡಲ ತೀರದ ಕಣ್ಮಣಿಯೆಂದು ಇತಿಹಾಸದಲ್ಲಿ ಪ್ರಸಿದ್ಧವಿದೆ. ಇದೊಂದು ಪ್ರೇಕ್ಷಣೀಯ ಸ್ಥಳ.

ಮಾಧುರಿ : ಅಪ್ಪ ! ಅದೋ ಅಲ್ಲಿ ನೋಡಿ. ನೀರಿನಲ್ಲಿ ಮನೆಗಳೇ ತೇಲುತ್ತಿವೆಯಲ್ಲ !

ತಂದೆ : ಮಗು, ಅವು ತೇಲುತ್ತಿರುವ ಮನೆಗಳಲ್ಲ, ಹಡಗುಗಳು. ಅವು ವಿದೇಶಗಳಿಂದ ಬರುತ್ತವೆ. ಅವು ಇಲ್ಲಿಗೆ ಬಂದು ತಲುಪಲು ಬಹಳ ದಿನಗಳು ಬೇಕಾಗುತ್ತವೆ. ಪ್ರವಾಸಿಗರಿಗೆ ಎಲ್ಲ ತರಹದ ಸೌಲಭ್ಯಗಳು ಅದರಲ್ಲಿರುತ್ತವೆ.

ಮಾಧುರಿ : ಹೌದೇನು ?

ತಂದೆ : ಅದೋ ನೋಡು. ಅಲ್ಲಿ ಕಾಣುತ್ತಿವೆಯಲ್ಲ ! ಅವು ಸರಕು ಸಾಗಾಣಿಕೆಯ ಹಡಗುಗಳು. ಆ ಹಡಗುಗಳ ಮುಖಾಂತರ ದೇಶದ ಆಮದು-ರಫ್ತುಗಳು ನಡೆಯುತ್ತವೆ. ಇಲ್ಲಿ ಕಾಣುವ ಚಿಕ್ಕ ಚಿಕ್ಕ ದೋಣಿಗಳನ್ನು ನೋಡು. ಇವು ಜಲವಿಹಾರಕ್ಕಾಗಿ ಇರುವ ದೋಣಿಗಳು.



ಮಾಧುರಿ : ಅಪ್ಪಾಜಿ, ಅದೋ ನೋಡಿ ಆ ಎತ್ತರವಾದ ಕಂಬ. ಅದನ್ನು ಕಡಲ ತೀರದಲ್ಲಿ ಯಾಕೆ ನಿಲ್ಲಿಸಿದ್ದಾರೆ?

ತಂದೆ : ಮಗು, ಅದು 'ದೀಪಸ್ತಂಭ'. ಅತೀ ದೂರದಿಂದ ಈ ಬಂದರಿನತ್ತ ಬರುವ ನೌಕೆಗಳಿಗೆ ಅದೊಂದು ದಿಕ್ಸೂಚಿ. ಆ ಸ್ತಂಭದ ಮೇಲಿನ ದೀಪದಿಂದ ರಾತ್ರಿ ಹೊತ್ತಿನಲ್ಲಿ ನೌಕೆಗಳು ಈ ಬಂದರಿನ ಕಡೆಗೆ ಬರುವ ದಿಕ್ಕನ್ನು ತಿಳಿದುಕೊಳ್ಳುತ್ತವೆ.

ಮಾಧುರಿ : ಅಪ್ಪ! ಅಲ್ಲಿ ಬೇರೆ ಬೇರೆ ದೋಣಿಗಳು ಕಾಣುತ್ತಿವೆಯಲ್ಲ!

ತಂದೆ : ಹೌದು. ಅವು ಮೀನುಗಾರರ ದೋಣಿಗಳು. ಮೀನುಗಾರರು ಆ ದೋಣಿಗಳ ಮುಖಾಂತರ ಕಡಲ ತೀರದಲ್ಲಿ ವಿಹರಿಸಿ, ಮೀನುಗಳನ್ನು ಹಿಡಿಯುತ್ತಾರೆ. ಮೀನುಗಳು ನಮ್ಮ ಸಾಗರಸಂಪತ್ತು.

ಮಾಧುರಿ : ಮತ್ತೆ ಯಾವ ಯಾವ ಸಂಪತ್ತುಗಳು ಸಾಗರದಿಂದ ದೊರೆಯುತ್ತವೆ ?

ತಂದೆ : ಮುತ್ತು, ಶಂಖ, ಉಪ್ಪು ಮುಂತಾದವುಗಳು ಸಾಗರ ಸಂಪತ್ತುಗಳಾಗಿವೆ.

ಮಾಧುರಿ : ಅಪ್ಪ! ನಾವು ಈ ಸಾಗರದ ನೀರನ್ನು ಕುಡಿಯಬಹುದೇ ?

ತಂದೆ : ಸಾಗರದ ನೀರು ಉಪ್ಪಾಗಿರುವುದರಿಂದ ಅದನ್ನು ಕುಡಿಯಲಾಗದು.


ಮಾಧುರಿ : ಇಂದು ನಿಮ್ಮಿಂದ ನಾನು ಈ ಕಡಲ ತೀರ ಕುರಿತು ಬಹಳಷ್ಟು ಮಾಹಿತಿಯನ್ನು ತಿಳಿದುಕೊಂಡೆನು.

ತಂದೆ : ಮಾಧುರಿ, ಪ್ರತ್ಯಕ್ಷ ನೋಡಿ ತಿಳಿದುಕೊಂಡ ಜ್ಞಾನವು ನಿನ್ನಲ್ಲಿ ಸ್ಥಿರವಾಗಿ ಉಳಿಯುವುದು. ನೀನು ಬಲು ಜಾಣೆ. ಈ ಮಾಹಿತಿಯನ್ನು ನಿನ್ನ ಸಹಪಾಠಿಗಳಿಗೂ ತಿಳಿಸು.

ಮಾಧುರಿ : ಆಗಲಿ ಅಪ್ಪಾಜಿ.

**ಶಿಕ್ಷಕರಿಗೆ ಸೂಚನೆ :** ಈ ಸಂಭಾಷಣೆಯನ್ನು ಮಕ್ಕಳಿಗೆ ಹೇಳಿರಿ. ಇಂತಹ ಬೇರೆ ಬೇರೆ ಸಂಭಾಷಣೆಗಳನ್ನು ಮಕ್ಕಳಿಗೆ ಕಲಿಸಿ ಅವರಲ್ಲಿ ಮಾತನಾಡುವ ಕೌಶಲ ಬೆಳೆಸಿರಿ.

# ಇರುವೆ ಮತ್ತು ಪಾರಿವಾಳ



**ಶಿಕ್ಷಕರಿಗೆ ಸೂಚನೆ :** ಮೇಲಿನ ಚಿತ್ರಗಳ ಸಹಾಯದಿಂದ ಕಥೆಯನ್ನು ರಚಿಸಿ ಮಕ್ಕಳಿಗೆ ಹೇಳಿರಿ. ಮಕ್ಕಳಿಂದ ಪುನ: ಪುನ: ಹೇಳಿಸಿರಿ. ಈ ಕಥೆಯ ಕುರಿತು ಪ್ರಶ್ನೆ ಕೇಳುವಂತೆ ಮಕ್ಕಳಿಗೆ ಪ್ರೋತ್ಸಾಹಿಸಿರಿ.


# ೧. ನನ್ನ ಬಯಕೆ



ನಾನು ಶಾಲೆ ಕಲಿಯುವೆ
ದೇಶ ಪ್ರಗತಿಗೊಳಿಸುವೆ ||ಪ||
ನಾನು ವೈದ್ಯಳಾಗುವೆ
ರೋಗಿ ಸೇವೆ ಮಾಡುವೆ
ಮದ್ದು ಮಾತ್ರೆ ಕೊಡುವೆ
ರೋಗ ದೂರ ಮಾಡುವೆ ||೧||


ನಾನು ಪೋಲೀಸ ಆಗುವೆ
ಖಾಕಿ ಬಟ್ಟೆ ಧರಿಸುವೆ
ಕಳ್ಳರನ್ನು ಹಿಡಿಯುವೆ
ಜಗದಿ ಶಾಂತಿ ನೆಲೆಸುವೆ ||೨||





ನಾನು ಶಿಕ್ಷಕಿಯಾಗುವೆ
ಸದಾಚಾರದಿ ನಡೆಯುವೆ
ಮಕ್ಕಳೊಡನೆ ಬೆರೆಯುವೆ
ವಿದ್ಯೆಬುದ್ಧಿ ಕಲಿಸುವೆ ||೩||

ನಾನು ವಕೀಲನಾಗುವೆ
ಕಪ್ಪು ಕೋಟು ಧರಿಸುವೆ
ಸತ್ಯ ವಾದ ಮಾಡುವೆ
ನ್ಯಾಯಕ್ಕಾಗಿ ದುಡಿಯುವೆ ॥ ೪ ॥





ನಾನು ರೈತನಾಗುವೆ
ದವಸಧಾನ್ಯ ಬೆಳೆಯುವೆ
ಜಗಕೆ ಅನ್ನ ನೀಡುವೆ
ಜನರ ಸೇವೆ ಮಾಡುವೆ ॥ ೫ ॥

## ಶಬ್ದಗಳ ಅರ್ಥ

ವೈದ್ಯ – ಡಾಕ್ಟರ್ ; ಮದ್ದು – ಔಷಧಿ ; ಮಾತ್ರೆ – ಗುಳಿಗೆ ; ಸದಾಚಾರ – ಒಳ್ಳೆಯ ಆಚಾರ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.

ಅ) ಜಗದಲ್ಲಿ ಶಾಂತಿಯನ್ನು ನೆಲೆಸಲು ಯತ್ನಿಸುವವ ಯಾರು ?

______________________

ಆ) ನ್ಯಾಯಕ್ಕಾಗಿ ದುಡಿಯುವವ ಯಾರು ?

______________________

ಇ) ಜಗಕೆ ಅನ್ನವನ್ನು ನೀಡುವವನು ಯಾರು ?

______________________

ಪ್ರಶ್ನೆ ೨) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ವೈದ್ಯರ ಕಾರ್ಯಗಳನ್ನು ತಿಳಿಸಿರಿ.

______________________________

______________________________

ಆ) ಪೋಲೀಸರ ಉಡುಪಿನ ಬಗ್ಗೆ ಬರೆಯಿರಿ.

______________________________

______________________________

ಇ) ಮಗುವಿನ ಬಯಕೆಗಳು ಯಾವವು ?

______________________________

______________________________

ಪ್ರಶ್ನೆ ೩) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ.

ನಾನು ಶಿಕ್ಷಕಿಯಾಗುವೆ

...................................

...................................

........................ ಕಲಿಸುವೆ.

ಪ್ರಶ್ನೆ ೪) ಉದಾಹರಣೆಯಲ್ಲಿ ತೋರಿಸಿದಂತೆ ಕೆಳಗಿನ ಶಬ್ದ ಸಮೂಹಗಳಿಗೆ ಒಂದೇ ಶಬ್ದ ಬರೆಯಿರಿ.

ಉದಾ. : ದವಸ ಧಾನ್ಯ ಬೆಳೆಯುವವರು – ರೈತರು

ಅ) ಸತ್ಯವಾದ ಮಾಡುವವರು ........................

ಆ) ವಿದ್ಯೆ ಬುದ್ಧಿ ಕಲಿಸುವವರು ........................

ಇ) ಕಳ್ಳರನ್ನು ಹಿಡಿಯುವವರು .........................

ಈ) ರೋಗಿಯ ಸೇವೆ ಮಾಡುವವರು .................

## ಉಪಕ್ರಮ

೧) ಕೆಳಗೆ ಕೊಟ್ಟ ಚೌಕಟ್ಟಿನಲ್ಲಿಯ ಅಕ್ಷರಗಳಿಂದ ವೃತ್ತಿಗಳ ಹೆಸರು ಬರೆಯಿರಿ.

ಉದಾ. : ವೈದ್ಯ

| | | | |
|---|---|---|---|
| ಚಾ | ವ | ರೈ | ಕ್ಷ |
| ವೈ | ವಾ | ಶಿ | ಲ |
| ರ | ಪೋ | ಕಿ | ನಿ |
| ಕ | ಸ | ಕೀ | ದ್ಯ |
| ಮಾ | ತ | ಹ | ಲೀ |

______________

______________

______________

______________

______________

● ನುಡಿಮುತ್ತು ●

ಗುರಿ ಇಲ್ಲದ ಜೀವನ ಚುಕ್ಕಾಣಿಯಿಲ್ಲದ ಹಡಗಿನಂತೆ

ಇಂದಿನ ಬಾಲಕ ನಾಳಿನ ನಾಗರಿಕ

ATS652

### ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- ........... ನಮ್ಮ ರಾಷ್ಟ್ರದ ಬೆನ್ನೆಲುಬು ☐


  ೧) ವಕೀಲ ೨) ರೈತ ೩) ವೈದ್ಯ ೪) ಶಿಕ್ಷಕಿ

- ........... ರಾಷ್ಟ್ರಗೀತೆಯನ್ನು ಬರೆದರು. ☐

  ೧) ರವೀಂದ್ರನಾಥ ಟಾಗೋರ ೨) ಲೋಕಮಾನ್ಯ ಟಿಳಕ

  ೩) ಸರೋಜಿನಿದೇವಿ ನಾಯಡು ೪) ಬಂಕಿಮಚಂದ್ರ ಚಟರ್ಜಿ

# ೨. ಗೆಳೆತನ



ವಾರಣಾಸಿಯ ರಾಜನ ಅರಮನೆಯಲ್ಲಿ ಒಂದು ಪಟ್ಟದ ಆನೆ ಇತ್ತು. ರಾಜನಿಗೆ ತನ್ನ ಪಟ್ಟದ ಆನೆಯನ್ನು ಕಂಡರೆ ತುಂಬ ಪ್ರೀತಿ. ಆನೆಗೆ ಪ್ರತಿ ದಿವಸವೂ ದೊಡ್ಡ ದೊಡ್ಡ ಅನ್ನದ ಮುದ್ದೆಗಳನ್ನು ತಿನ್ನಿಸುತ್ತಿದ್ದರು. ಒಳ್ಳೆಯ ಆರೈಕೆ ಇದ್ದುದರಿಂದ ಅದು ಬಹಳ ದಷ್ಟಪುಷ್ಟವಾಗಿತ್ತು.

ಒಂದು ದಿವಸ ಪಟ್ಟದಾನೆಯ ಬಳಿಗೆ ನಾಯಿಯೊಂದು ಬಂದಿತು. ಅದಕ್ಕೆ ಸರಿಯಾಗಿ ಅನ್ನ ದೊರಕದೇ ಇದ್ದುದರಿಂದ ಬಡಕಲಾಗಿತ್ತು. ಹಸಿದ ನಾಯಿ ಆಶಾಭಾವದಿಂದ ತನಗೂ ಇಂತಹ ಅನ್ನ ದೊರೆತರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ಮನದಲ್ಲಿ ಅಂದುಕೊಂಡಿತು. ಆಹಾರವನ್ನು ತಿನ್ನುತ್ತಿದ್ದ ಆನೆಗೆ ಹಸಿವಿನಿಂದ ಕಂಗಾಲಾಗಿರುವ ನಾಯಿಯನ್ನು ನೋಡಿ ಕನಿಕರ ಬಂದಿತು. ತಾನು ತಿನ್ನುತ್ತಿರುವ ಒಂದೆರಡು ಅನ್ನದ ಮುದ್ದೆಗಳನ್ನು ನಾಯಿಯ ಕಡೆಗೆ ಸರಿಸಿತು. ಅಂತಹ ಸ್ವಾದಿಷ್ಟ ಅನ್ನವನ್ನು ಎಂದೂ ತಿನ್ನದ ನಾಯಿ ಒಂದು ಅಗಳೂ ಬಿಡದಂತೆ ಎಲ್ಲವನ್ನೂ ತಿಂದಿತು.

ನಾಯಿ ಪ್ರತಿ ದಿನವೂ ಬರುತ್ತಿತ್ತು. ಆನೆ ಅದಕ್ಕೆ ಅನ್ನವನ್ನು ಕೊಡುತ್ತಿತ್ತು. ನಾಯಿ ಅನ್ನವನ್ನು ತಿನ್ನುವಾಗ ಆನೆ ಪ್ರೀತಿಯಿಂದ ಅದರ ಬೆನ್ನು ಸವರುತ್ತಿತ್ತು. ನಾಯಿ ಪ್ರೀತಿಯಿಂದ ಆನೆಯ ಸೊಂಡಿಲನ್ನು ನೆಕ್ಕುತ್ತಿತ್ತು. ಅನ್ನವನ್ನು ತಿಂದಾದ ಮೇಲೆ ಒಂದು ಗಳಿಗೆ ಮೈಗೆ ಮೈ ತಾಗಿಸಿಕೊಂಡು ಮಲಗಿ ನಿದ್ರೆ ಮಾಡುತ್ತಿದ್ದವು. ಬೃಹದಾಕಾರದ ಆನೆಯೂ, ಅಲ್ಪಾಕಾರದ ನಾಯಿಯೂ ಆತ್ಮೀಯತೆಯಿಂದ ಆಟವಾಡುತ್ತಿದ್ದವು. ಬರಬರುತ್ತ ನಾಯಿ ಮತ್ತು ಆನೆಗಳ ನಡುವೆ ಗಾಢವಾದ ಸ್ನೇಹ ಬೆಳೆಯಿತು. ಅವು ಒಂದನ್ನೊಂದು ಅಗಲಿರದಂತಾದವು.

ಹೀಗೆ ಕೆಲವು ದಿವಸಗಳು ಕಳೆದ ಮೇಲೆ ಮಾವುತನ ಸ್ನೇಹಿತನೊಬ್ಬನು ಅಲ್ಲಿಗೆ ಬಂದನು. ಈ ದಷ್ಟಪುಷ್ಟವಾದ ನಾಯಿಯನ್ನು ನೋಡಿ ಅದನ್ನು ತನ್ನ ಮನೆಗೆ ಒಯ್ಯಬೇಕೆಂದು ನಿರ್ಧರಿಸಿದನು. ತನ್ನ ಗೆಳೆಯನ ಮನವೊಲಿಸಿ ನಾಯಿಯನ್ನು ತೆಗೆದುಕೊಂಡು ಹೋದನು. ಅದು ಎಲ್ಲಿಯಾದರೂ ತಪ್ಪಿಸಿಕೊಂಡು ಹೋದೀತೆಂದು ಕೊರಳಿಗೆ ಸರಪಳಿ ಬಿಗಿದು ಕಂಬಕ್ಕೆ ಕಟ್ಟಿ ಹಾಕಿದನು.

ಮರುದಿನ ಊಟದ ವೇಳೆಯಾದರೂ ನಾಯಿ ಬರಲಿಲ್ಲ. ಅದಕ್ಕೆ ಏನಾದರೂ ಕೇಡು ಆಗಿದೆ ಎಂದು ಆನೆಗೆ ಅನಿಸಿತು. ತನ್ನ ಸ್ನೇಹಿತ ಬಾರದ್ದನ್ನು ನೆನೆದು ಸಂಕಟಪಡತೊಡಗಿತು. ಮಾವುತನು ಮುಂದಿಟ್ಟ ಅನ್ನದ ಮುದ್ದೆಗಳನ್ನು ಮುಟ್ಟಲಿಲ್ಲ. ನಾಯಿ ಹೋದ ದಿಕ್ಕನ್ನೇ ನೋಡುತ್ತ ಧಾರಾಕಾರವಾಗಿ ಕಣ್ಣೀರು ಸುರಿಸುತ್ತ ನಿಂತುಬಿಟ್ಟಿತು. ಹೀಗೆ ಮೂರು ದಿವಸ ಹಗಲು ರಾತ್ರಿ ಪಟ್ಟದಾನೆ ಅನ್ನವನ್ನು ಮುಟ್ಟಲಿಲ್ಲ, ನೀರು ಕುಡಿಯಲಿಲ್ಲ, ಮಂಡಿಯೂರಿ ಮಲಗಲಿಲ್ಲ. ಸದಾ ಕಣ್ಣೀರು ಸುರಿಸುತ್ತ, ನಾಯಿ ಹೋದ ದಿಕ್ಕನ್ನೇ ನೋಡುತ್ತ ನಿಂತುಬಿಟ್ಟಿತು.

ಆನೆಯ ದುಸ್ಥಿತಿ ಕಂಡು ಹಿಡಿಯುವಲ್ಲಿ ರಾಜವೈದ್ಯರೂ ವಿಫಲರಾದರು. ತನ್ನ ಪ್ರೀತಿಯ ಪಟ್ಟದಾನೆಯ ದುಸ್ಥಿತಿಯನ್ನು ಕಂಡು ರಾಜನು ಮರುಗಿದನು. ಹೇಗಾದರೂ ಮಾಡಿ ಆನೆಯನ್ನು ಗುಣಪಡಿಸುವಂತೆ ಮಂತ್ರಿಗೆ ಆಜ್ಞೆ ಮಾಡಿದನು.

ಮಂತ್ರಿ ಬಹಳ ಚತುರನಿದ್ದನು. ಅವನು ಆನೆಯ ಸಂಕಟವನ್ನು ನೋಡಿ ಮರುಗಿದನು. ಸೂಕ್ಷ್ಮವಾಗಿ ಪರೀಕ್ಷಿಸಿದನು. ರಾಜವೈದ್ಯರಿಗೂ ಇದರ ಕಾರಣ ತಿಳಿಯಲಿಲ್ಲ, ಅಂದಮೇಲೆ ಇದಕ್ಕೆ ಮಾನಸಿಕ ರೋಗವಿರಬಹುದು ಎಂದು ಊಹೆ ಮಾಡಿದನು. ಒಂದೊಂದು ಸಲ ಕೆಲವು ಪ್ರಾಣಿಗಳೂ ಸಹ ಇತರ ಪ್ರಾಣಿಗಳೊಡನೆ ಸ್ನೇಹ ಬೆಳೆಸುತ್ತವೆ. ಹಾಗೇನಾದರೂ ಇರಬಹುದೇ ಎಂದು ಮಾವುತನನ್ನು ವಿಚಾರಿಸಿದನು. ಆಗ ಮಾವುತನು ಭಯದಿಂದ ನಡುಗುತ್ತ, ''ಹೌದು ಮಹಾ ಮಂತ್ರಿಗಳೇ, ಇಲ್ಲಿ ದಿನಾಲು ಒಂದು ನಾಯಿ ಬರುತ್ತಿತ್ತು. ಈಗ ಎರಡು ಮೂರು ದಿನಗಳಿಂದ ಅದು ಇಲ್ಲಿಗೆ ಬಂದಿಲ್ಲ.'' ಎಂದು ಹೇಳಿದನು. ಆನೆಯ ದುಸ್ಥಿತಿಯ ಕಾರಣವನ್ನು ಮಂತ್ರಿಯು ಬೇಗನೆ ಅರ್ಥ ಮಾಡಿಕೊಂಡನು. ಆದರೆ ನಾಯಿ ಎಲ್ಲಿದೆ ಎಂಬುದು ತಿಳಿದುಕೊಳ್ಳುವುದು ಕಠಿಣವಾಯಿತು.

ಮಾವುತನ ಬಳಿ ಇರುವ ನಾಯಿಯನ್ನು ಯಾರೋ ಕದ್ದುಕೊಂಡು ಹೋಗಿದ್ದಾರೆ. ನಾಳೆಯ ದಿವಸ ಎಲ್ಲರ ಮನೆಗಳನ್ನೂ ಶೋಧಿಸಲಾಗುತ್ತದೆ. ಯಾರ ಮನೆಯಲ್ಲಾದರೂ ಆ ನಾಯಿ ಕಂಡುಬಂದರೆ ಅವರನ್ನು ಕಳ್ಳರೆಂದು ತೀರ್ಮಾನಿಸಿ, ಕಠಿಣ ಶಿಕ್ಷೆ ವಿಧಿಸಲಾಗುವುದು. ಎಂದು ಡಂಗುರ ಸಾರಿದರು.

ಡಂಗುರದ ವಿಷಯವನ್ನು ಕೇಳಿ ಮಾವುತನ ಸ್ನೇಹಿತನು ಗಾಬರಿಯಾದನು. ಅವನು ತಕ್ಷಣ ನಾಯಿಯ ಕೊರಳಿಗೆ ಬಿಗಿದ ಸರಪಳಿಯನ್ನು ಬಿಚ್ಚಿ ಬಿಟ್ಟನು. ನಾಯಿ ನಾಗಾಲೋಟದಿಂದ ಓಡುತ್ತ ಆನೆಯ ಬಳಿಗೆ ಬಂದಿತು.

ತನ್ನ ಪ್ರಾಣ ಸ್ನೇಹಿತನು ಮರಳಿ ಬಂದುದನ್ನು ನೋಡಿ ಆನೆಗೆ ಬಹಳ ಆನಂದವಾಯಿತು. ಅದು ನಾಯಿಯನ್ನು ಸೊಂಡಿಲಿನಿಂದ ಎಳೆದು ತಬ್ಬಿಕೊಂಡಿತು. ನಾಯಿ ಆನೆಯ ಮೈಗೆ ಅಪ್ಪಿಕೊಂಡಿತು. ಅಗಲಿದ ಎರಡೂ ಜೀವಗಳು ಒಂದಾಗಿ ಆನಂದ ಬಾಷ್ಪ ಸುರಿಸಿದವು. ಈ ವಾರ್ತೆ ಅರಮನೆಗೆ ಮುಟ್ಟಿತು. ರಾಜನೂ ಓಡುತ್ತ ಬಂದನು. ಎರಡೂ ಪ್ರಾಣಿಗಳ ಗಾಢವಾದ ಸ್ನೇಹಾಲಿಂಗನವನ್ನು ಕಂಡು ಬೆರಗಾದನು. ನಾಯಿಯು ಆನೆಯ ಬಳಿಯಲ್ಲಿ ಇರಲಿ ಎಂದು ಮಾವುತನಿಗೆ ಆಜ್ಞೆ ಮಾಡಿದನು. ಮುಂದೆ ಆನೆ ಮತ್ತು ನಾಯಿ ಅನ್ಯೋನ್ಯವಾಗಿ ಬಾಳಿದವು.

## ಶಬ್ದಗಳ ಅರ್ಥ

ಬೃಹದಾಕಾರ - ದೊಡ್ಡ ಆಕಾರ ; ತಾಗಿಸಿ - ಅಂಟಿಸಿ ; ಬೆರಗಾಗು - ಅಚ್ಚರಿಯಾಗು ; ಅನ್ಯೋನ್ಯ - ಪ್ರೀತಿಯಿಂದ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.

ಅ) ಪಟ್ಟದಾನೆಯ ಲಾಯಕ್ಕೆ ಯಾರು ಬಂದರು ?

______________________________

ಆ) ನಾಯಿ ಏಕೆ ಬಡಕಲಾಗಿತ್ತು ?

______________________________

ಇ) ನಾಯಿ ಅನ್ನ ತಿನ್ನುವಾಗ ಏನು ಮಾಡುತ್ತಿತ್ತು ?

______________________________

ಈ) ನಾಯಿಯನ್ನು ಯಾರು ಒಯ್ದರು ?

______________________________

ಉ) ರಾಜನು ಮಂತ್ರಿಗೆ ಏನೆಂದು ಆಜ್ಞೆ ಮಾಡಿದನು ?

______________________________

ಪ್ರಶ್ನೆ ೨) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಆನೆಯು ತನ್ನ ಅನ್ನದ ಮುದ್ದೆಗಳನ್ನು ನಾಯಿಯ ಕಡೆಗೆ ಏಕೆ ಸರಿಸಿತು ?

______________________________

______________________________

ಆ) ಆನೆ ಮತ್ತು ನಾಯಿಯ ಸ್ನೇಹದ ಬಗ್ಗೆ ಬರೆಯಿರಿ ?

______________________________

______________________________

ಇ) ಆನೆ ಅನ್ನದ ಮುದ್ದೆಗಳನ್ನು ಏಕೆ ಮುಟ್ಟಲಿಲ್ಲ ?

______________________________

______________________________

ಈ) ಮಾವುತನು ಮಂತ್ರಿಗೆ ಏನೆಂದು ಉತ್ತರಿಸಿದನು ?

______________________________

______________________________

ಉ) ಮರಳಿ ಬಂದ ನಾಯಿಯನ್ನು ಕಂಡು ಆನೆಗೆ ಆದ ಸಂತೋಷವನ್ನು ವರ್ಣಿಸಿರಿ.

______________________________

______________________________

ಪ್ರಶ್ನೆ ೩) ಕೆಳಗಿನ ಬಿಟ್ಟ ಸ್ಥಳ ತುಂಬಿರಿ.

ಅ) ನಾಯಿ ಅನ್ನ ತಿನ್ನುವಾಗ ಆನೆ ಪ್ರೀತಿಯಿಂದ ಅದರ .......... ಸವರುತ್ತಿತ್ತು.

ಆ) ಆನೆಯ ............ ಕಂಡು ಹಿಡಿಯುವಲ್ಲಿ ರಾಜ ವೈದ್ಯರೂ ವಿಫಲರಾದರು.

ಇ) ........... ವಿಷಯವನ್ನು ಕೇಳಿ ಮಾವುತನ ಸ್ನೇಹಿತನು ಗಾಬರಿಯಾದನು.

ಈ) ಆನೆ ಮತ್ತು ನಾಯಿ ................ ಬಾಳಿದವು.

ಪ್ರಶ್ನೆ ೪) ಕೆಳಗಿನ ವಾಕ್ಯಗಳಲ್ಲಿ ವಿರಾಮ ಚಿಹ್ನೆಗಳನ್ನು ಗುರುತಿಸಿರಿ.

ಅ) ಶಂಕರ ಸುಂದರ ಮತ್ತು ಕೇಶವ ಮೂವರು ಗೆಳೆಯರು ಕೂಡಿಕೊಂಡು ಜಾತ್ರೆಗೆ ಹೋದರು

ಆ) ಅಬ್ಬಾ ತಾಜಮಹಲ ಅದೆಷ್ಟು ಸುಂದರವಾಗಿದೆ.

ಇ) ಆಕಾಶ ನೀನು ರಜೆಯಲ್ಲಿ ಅಜ್ಜಿಯ ಊರಿಗೆ ಹೋಗುವೆಯಾ

ಈ) ಅಬ್ಬಾ ಈ ಅಲ್ಪಾಯುಷಿಗಳಿಗೆ ಅದೆಂಥ ಆಲೋಚನೆ ಅದೆಂಥ ಅವಿವೇಕ

## ಉಪಕ್ರಮ

೧) ಜಿಂಕೆ, ಆಮೆ, ಕಾಗೆ ಮತ್ತು ಇಲಿ ಇವುಗಳ ಗೆಳೆತನದ ಕಥೆಯನ್ನು ಶಿಕ್ಷಕರಿಂದ / ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.

## • ನುಡಿಮುತ್ತು •

ಸ್ನೇಹ ಮತ್ತು ಪ್ರೀತಿ ಇವು ಜೀವನದ ಅಮೂಲ್ಯ ರತ್ನಗಳು

ಗುಣವರಿತು ಗೆಳೆತನ ಮಾಡು

## ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- ನಮ್ಮ ರಾಷ್ಟ್ರಪಕ್ಷಿ ಯಾವುದು ? [ ]

  ೧) ಗಿಳಿ ೨) ಹಂಸಪಕ್ಷಿ ೩) ಹದ್ದು ೪) ನವಿಲು

- ನಿನ್ನ ಹತ್ತಿರ ಎಷ್ಟು ರೂಪಾಯಿಗಳಿವೆ ? ಕೊಟ್ಟ ವಾಕ್ಯದಲ್ಲಿಯ ಚಿನ್ಹೆಯನ್ನು ಗುರುತಿಸಿರಿ. [ ]

  ೧) ಪ್ರಶ್ನಾರ್ಥಕ ೨) ಪೂರ್ಣವಿರಾಮ ೩) ಉದ್ಗಾರವಾಚಕ ೪) ಅಲ್ಪವಿರಾಮ

# ೩. ಗುಳ್ಳವ್ವನ ಪೂಜೆ



ಆಷಾಢ ಮಾಸದಲ್ಲಿ ಗಾಳಿಯು ಒಂದೇ ಸವನೆ ಬೀಸುವುದು. ಅದು ತಂಪಾಗಿರುವುದು. ಕ್ಷಣ ಕ್ಷಣಕ್ಕೂ ತುಂತುರ ಮಳೆ ಹನಿಗಳು ಸುರಿಯುವವು. ಅದರಿಂದ ಸಣ್ಣ ದೊಡ್ಡ ತಗ್ಗುಗಳೆಲ್ಲ ತುಂಬಿ ಹರಿದು ಎರಡೂ ದಂಡೆಗುಂಟ ಕೆಸರು ಚೆಲ್ಲಿ ಗಳಿಗೆಯಲ್ಲಿಯೇ ಇಳಿದು ಹೋಗುವವು. ಆ ಕೆಸರು ನೋಡಿದರೆ ಕೈ ಹಾಕಿ ಕೆದರಿ ತೆಗೆದುಕೊಳ್ಳಬೇಕೆಂದು ಯಾರಿಗಾದರೂ ಮನಸ್ಸಾಗುವುದು. ಕೈಗೆ ಸಿಕ್ಕ ಕೆಸರು ತೆಗೆದುಕೊಂಡಾಗ ಏನಾದರೊಂದು ಮೂರ್ತಿ ಮಾಡುವ ಕುತೂಹಲವು ಮಕ್ಕಳಲ್ಲಿ ತಾನಾಗಿಯೇ ಕಾಣಿಸಿಕೊಳ್ಳುವುದು. ಆ ಒಲವನ್ನು ಕಂಡು ಹಿರಿಯರು ಅದಕ್ಕೊಂದು ವ್ಯವಸ್ಥಿತವಾದ ಪದ್ಧತಿಯನ್ನು ಹಾಕಿಕೊಟ್ಟರು. ಅದೇ ಗುಳ್ಳವ್ವನ ಪೂಜೆ.

ಆಷಾಢಮಾಸದ ಪ್ರತಿ ಮಂಗಳವಾರ ಗುಳ್ಳವ್ವನ ಹಬ್ಬವನ್ನು ಆಚರಿಸುತ್ತಾರೆ. ಚಿಕ್ಕ ವಯಸ್ಸಿನ ಮಕ್ಕಳು ಏನಾದರೊಂದು ತಿನಿಸು ಕಟ್ಟಿಕೊಂಡು ಅರಲು ತರುವುದಕ್ಕೆ ಹಳ್ಳದ ಕಡೆಗೆ ಹೋಗುತ್ತಾರೆ. ಉತ್ತಮವಾದ ಅರಲನ್ನು ಕೆದರಿಕೊಂಡು ಅದನ್ನು ಚೆನ್ನಾಗಿ ಮಿದ್ದಿಕೊಂಡು ಒಂದು ಉಂಡೆ ಮಾಡಿ ತಿದ್ದಿ ತೀಡುತ್ತಾರೆ. ಅಲ್ಲಿಯೇ ಸಮೀಪದಲ್ಲಿ ಸಿಗುವ ನಾಲ್ಕು ಕಾಡು ಹೂಗಳನ್ನು ತಂದು ಆ ಅರಲಿನ ಮುದ್ದೆಗೆ ಸಿಕ್ಕಿಸುತ್ತಾರೆ. ಊದಿನ ಕಡ್ಡಿ ಬೆಳಗುತ್ತಾರೆ. ಆ ಬಳಿಕ ಮನೆಯಿಂದ ತಂದ ಚುರಮುರಿ, ಪುತಾಣಿ, ನೆಲಕಡಲೆ, ಬೆಲ್ಲ ಮೊದಲಾದ ತಿನಿಸನ್ನು ನೈವೇದ್ಯ ಮಾಡುತ್ತಾರೆ. ನಂತರ ಆ ನೈವೇದ್ಯವನ್ನು ತಿಂದು ನೀರು ಕುಡಿದರೆ ಅಲ್ಲಿಯ ಕೆಲಸ ಮುಗಿದಂತಾಗುವುದು. ನಂತರ ಆ ಅರಲನ್ನು ಹೊತ್ತುಕೊಂಡು ಹಾಡುತ್ತ ಮನೆಯ ಕಡೆಗೆ ಬರುವರು.

ಸಾಯಂಕಾಲವಾದೊಡನೆ ಹುಡುಗಿಯರು ನೆರೆಮನೆಯ ಗೆಳತಿಯರೊಡನೆ ಕೂಡಿಕೊಂಡು ಹಳ್ಳದಿಂದ ತಂದ ಅರಲಿನಿಂದ ಗುಳ್ಳವ್ವನನ್ನು ಅಂದರೆ ಬಸವಣ್ಣ, ಗೌರಿ, ಆನೆ, ನವಿಲು ಮುಂತಾದ

ಮೂರ್ತಿಗಳನ್ನು ಮಾಡತೊಡಗುವರು. ತಪ್ಪಿದಲ್ಲಿ ಮನೆಯೊಳಗಿನ ಅಕ್ಕ, ಅವ್ವ, ಅಜ್ಜಿಯರ ಸಹಾಯ ಪಡೆದುಕೊಳ್ಳುವರು. ಮಾಡಿದ ಮೂರ್ತಿ ಇನ್ನಷ್ಟು ಚೆಂದ ಕಾಣಲೆಂದು ಗುಲಗಂಜಿ, ಕುಸುಬೆ, ಜವೆ ಮೊದಲಾದವುಗಳನ್ನು ಉಪಯೋಗಿಸಿ ಗುಳ್ಳವ್ವನನ್ನು ಸಿಂಗರಿಸುವರು. ಎತ್ತಿನ ಕೊರಳಿಗೆ ಸುತ್ತಲೂ ಕುಸುಬೆ ಕಾಳುಗಳನ್ನು ಸಾಲಾಗಿ ಚುಚ್ಚಿ ಸರಗಂಟೆ ಮಾಡುವರು. ಅದರ ಬೆನ್ನ ಮೇಲೆ ಜೂಲಿಗೆ ಕಸೂತಿ ತೆಗೆದಂತೆ ಚಿತ್ರಿಸುವರು. ಬಸವಣ್ಣನ ಮೇಲೆ ನೆರಳು ಹಿಡಿಯಲೆಂದು ಅರಲಿನಿಂದ ಆಪ್ತಾಗಿರಿ ಮಾಡುವರು. ಜವೆ, ಗುಲಗಂಜಿಗಳಿಂದ ಅವುಗಳನ್ನು ಕುಸುರಿಸುವರು. ಇಷ್ಟು ಮುಗಿಯುವ ಹೊತ್ತಿಗೆ ದೀಪ ಹಚ್ಚುವ ವೇಳೆ ಆಗಿ ಬಿಡುವುದು.

ಅರಲಿನ ಮೂರ್ತಿಯು ಕೂಡುಮಣೆಯ ಮೇಲೆಯೇ ಸಿದ್ಧವಾಗುತ್ತದೆ. ಈ ಮಣೆಯನ್ನು ಅಡ್ಡಣಿಗೆಯ ಮೇಲಿರಿಸಿ ಮುಂದೆ ದೀಪ ಹಚ್ಚುತ್ತಾರೆ. ಗುಳ್ಳವ್ವನನ್ನು ವಿಭೂತಿ ಕುಂಕುಮಗಳಿಂದ ಅಲಂಕರಿಸುತ್ತಾರೆ. ಊದಿನಕಡ್ಡಿ ಬೆಳಗುತ್ತಾರೆ. ನೈವೇದ್ಯಕ್ಕೆಂದು ಶಾವಿಗೆ ಇಲ್ಲವೆ ಗವಲಿಯನ್ನಾಗಲಿ ಮಾಡುತ್ತಾರೆ. ಇಲ್ಲವಾದರೆ ಬೆಲ್ಲದ ಕಡುಬಿನಿಂದಲೂ ಗುಳ್ಳವ್ವನ ನೈವೇದ್ಯವಾಗುವುದು.



ನೆರೆಹೊರೆಯ ಮನೆಯೊಳಗೆ ಗೆಳತಿಯರು ಕುಳ್ಳಿರಿಸಿದ ಗುಳ್ಳವ್ವನ ಸಿಂಗಾರ ನೋಡುವುದಕ್ಕೆ ಹೊರಡಬೇಕಲ್ಲವೇ? ತಗಡಿನ ಹಣತೆಯಲ್ಲಿ ಕಡಲೆಬತ್ತಿ ದೀಪವನ್ನು ಹಚ್ಚಿಕೊಂಡು ಹಾಡುತ್ತ ನೆರೆಹೊರೆಯ ಮನೆಗಳಿಗೆ ಹೊರಡುವರು. ಗುಳ್ಳವ್ವನಿಗೆ ಆರತಿ ಮಾಡುತ್ತ ಹಾಡು ಹೇಳುವರು.

ಒಂದೊಂದು ಮನೆಯಲ್ಲಿ 'ಗೊಗ್ಗವ್ವ' ಎಂಬ ಗೊಂಬೆ ಮಾಡುತ್ತಾರೆ. ಅದರ ಬೆನ್ನಿನಲ್ಲಿ ಒಂದು ದಪ್ಪವಾದ ಕಡ್ಡಿ ಸಿಕ್ಕಿಸುತ್ತಾರೆ. ಅದನ್ನು ಹುರಿಯಿಂದ ನೇತು ಹಾಕುತ್ತಾರೆ. ಗೊಗ್ಗವ್ವನ ತಲೆಗೆ ಹಿಂಜಿದ ಅರಳೆ ಹೊಂದಿಸಿದ್ದರಿಂದ ಅದು ಮುದುಕಿಯ ಹಾಗೆ ಕಾಣುವುದು. ಗೊಗ್ಗವ್ವನ ಕೈಯಲ್ಲಿ ಸಣ್ಣ ಪಣತಿಯನ್ನು ಇಟ್ಟಿರುತ್ತಾರೆ. ದಾರವು ಹುರಿಗೊಳ್ಳುತ್ತಲೂ, ಸಡಿಲಾಗುತ್ತಲೂ ಇರುವುದರಿಂದ ಗೊಗ್ಗವ್ವನು ದೀಪದೊಡನೆ ತೂಗುಲೋಕದಲ್ಲಿ ಮೈಮರೆತಂತೆ ಕಾಣುತ್ತಾಳೆ. ಆ ಆಟವನ್ನು ನೋಡುತ್ತಾ ಚಿಕ್ಕ ಮಕ್ಕಳು ಬಹಳ ಸಂತೋಷಪಡುತ್ತಾರೆ.

ಇದೆಲ್ಲವೂ ಮಂಗಳವಾರದ ಕಾರ್ಯಕ್ರಮವಾಯಿತು. ಇನ್ನು ಮರುದಿನ ಬುಧವಾರ ಹುಡುಗಿಯರು ಗುಳ್ಳವ್ವನ ಮೈಮೇಲಿನ ಗುಲಗಂಜಿ ಆಭರಣಗಳನ್ನೆಲ್ಲ ತೆಗೆದಿಟ್ಟುಕೊಳ್ಳುವರು. ಮೂರ್ತಿಯುಳ್ಳ ಆ ಕೂಡುಮಣೆಯನ್ನೆ ಹಳ್ಳಕ್ಕೆ ಹೊತ್ತುಕೊಂಡು ಹೋಗುವರು. ಅಲ್ಲಿ ಗುಳ್ಳವ್ವನ ವಿಸರ್ಜನೆ ಮಾಡಿ ಆಕೆಯ ಸದ್ಗುಣಗಳನ್ನು ಕೊಂಡಾಡುವರು. ಜೊತೆಗೆ ಕಟ್ಟಿಕೊಂಡು ಬಂದ ಬುತ್ತಿಯನ್ನು ಹಳ್ಳದ ದಂಡೆಯಲ್ಲಿ ಕುಳಿತು ಊಟ ಮಾಡುವರು. ನಂತರ ಮನೆಯ ಹಾದಿ ಹಿಡಿಯುವರು. ದಾರಿಗುಂಟ ಹಾಡುತ್ತಲೇ ಮನೆ ತಲುಪುವರು.

ಇದೇ ರೀತಿ ನಾಲ್ಕು ಅಥವಾ ಐದು ಮಂಗಳವಾರ ವಿವಿಧ ಮೂರ್ತಿಗಳನ್ನು ಮಾಡಿ ಗುಳ್ಳವ್ವನೆಂದು ಪೂಜಿಸಿ ಹಬ್ಬದಂತೆ ಉಂಡು, ಉಟ್ಟು ಸಂತೋಷಪಡುವರು. ಅರಲಿನ ಕೈಕೆಲಸದ ಅಭ್ಯಾಸವು ಇದರಿಂದ ಅವರಿಗೆ ತಾನಾಗಿಯೇ ಸಾಧಿಸುವುದು. ಹುಡುಗಿಯರೊಡನೆ ಮನೆಯೊಳಗಿನ ಹಿರಿಯರು, ಕಿರಿಯರೂ ಸಹ ಈ ಗುಳ್ಳವ್ವನ ಸಡಗರ ಕಂಡು ಆನಂದಪಡುವರು.

– ಸಿಂಪಿ ಲಿಂಗಣ್ಣ

## ಶಬ್ದಗಳ ಅರ್ಥ

ಅರಲು – ಕೆಸರು ; ಕಸೂತಿ – ನಕ್ಷೆ ; ಅರಳೆ – ಹಿಂಜಿದ ಹತ್ತಿ

ವಿಶೇಷ ವಿಚಾರ : ಜವೆ – ಒಂದು ಬಗೆಯ ಧಾನ್ಯ ; ಗವಲಿ – ಪಾಯಸ ಮಾಡುವ ಶಾವಿಗೆಯಂತಹ ಒಂದು ಪದಾರ್ಥ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಗುಳ್ಳವ್ವನ ಪೂಜೆಯನ್ನು ಯಾವ ಮಾಸದಲ್ಲಿ ಮಾಡುವರು ?

___

___

ಆ) ಹುಡುಗಿಯರು ಅರಲು ತರುವುದಕ್ಕೆ ಎಲ್ಲಿಗೆ ಹೋಗುತ್ತಾರೆ ?

___

___

ಇ) ಹುಡುಗಿಯರು ಅರಲಿನಿಂದ ಯಾವ ಯಾವ ಮೂರ್ತಿಗಳನ್ನು ತಯಾರಿಸುತ್ತಾರೆ?

___

___

ಈ) ಗುಳ್ಳವ್ವನನ್ನು ಹೇಗೆ ಅಲಂಕರಿಸುತ್ತಾರೆ ?

______________________________

______________________________

ಉ) ಗುಳ್ಳವ್ವನ ನೈವೇದ್ಯಕ್ಕೆ ಏನು ಮಾಡುತ್ತಾರೆ ?

______________________________

______________________________

ಪ್ರಶ್ನೆ ೨) ಕೆಳಗಿನ ಬಿಟ್ಟ ಸ್ಥಳಗಳನ್ನು ತುಂಬಿರಿ.

ಅ) ಕ್ಷಣ ಕ್ಷಣಕ್ಕೂ ........... ಹನಿಗಳು ಬೀಳುವವು.

ಆ) ......... ಮಾಸದ ಪ್ರತಿ ಮಂಗಳವಾರ ಗುಳ್ಳವ್ವನ ಹಬ್ಬವನ್ನು ಆಚರಿಸುತ್ತಾರೆ.

ಇ) ಗೊಗ್ಗವ್ವನು ದೀಪದೊಡನೆ .......... ಮೈಮರೆತಂತೆ ಕಾಣುತ್ತಾಳೆ.

ಈ) ......... ಅಭ್ಯಾಸವು ಇದರಿಂದ ಅವರಿಗೆ ತಾನಾಗಿಯೇ ಸಾಧಿಸುವದು.

ಪ್ರಶ್ನೆ ೩) ಕೆಳಗಿನ ಶಬ್ದಗಳನ್ನು ವಾಕ್ಯದಲ್ಲಿ ಉಪಯೋಗಿಸಿರಿ.

ಅರಲು, ಗುಲಗಂಜಿ, ಅಲಂಕರಿಸು

## ಉಪಕ್ರಮ

೧) ಅರಲಿನಿಂದ ಬೇರೆ ಬೇರೆ ಪ್ರಕಾರದ ಪ್ರಾಣಿ, ಪಕ್ಷಿ ಮತ್ತು ಇತರ ಮಾದರಿಗಳನ್ನು ತಯಾರಿಸಿರಿ.

೨) ಕೆಳಗಿನ ಜಾನಪದ ಹಾಡನ್ನು ರಾಗಬದ್ಧವಾಗಿ ಹಾಡಿರಿ.

ಗುಳ್ಳವ್ವನ ಮಣ್ಣು ತರಲಿಲ್ಲ
ಗುಲಗಂಜಿ ಹಚ್ಚಿ ಆಡಲಿಲ್ಲ
ಸುಳ್ಳೇ ಬಂತಲ್ಲವ್ವ ನಾಗರಪಂಚಮಿ ।।ಸುವ್ವನಾರಿ।।

ದಪಾಟಿ-ಗಿಪಾಟಿ ಮಾಡಿಕೊಂಡು
ಎತ್ತಿನ ಮ್ಯಾಲ ಹೇರಿಕೊಂಡು
ಯಾವಾಗ ನೋಡಲೆವ್ವ ತಾಯಿ ಮಾರಿ ।।ಸುವ್ವನಾರಿ।।

ರೊಟ್ಟಿ-ಗಿಟ್ಟಿ ಮಾಡಿಕೊಂಡು
ಒಂಟಿಮ್ಯಾಲ ಹೇರಿಕೊಂಡು
ಯಾವಾಗ ನೋಡಲೆವ್ವ ತಂದೆ ಮಾರಿ ।।ಸುವ್ವಾರಿ।।

## ● ನುಡಿಮುತ್ತು ●

ಜನಪದ ಸಂಸ್ಕೃತಿಯು ಜನಜೀವನದ ಜೀವಾಳ

ಸಂಸ್ಕೃತಿಯ ಪರಿಚಯ ಜ್ಞಾನದ ಪರಿಚಯ

AUAX9A

## ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.


- ಚೈತ್ರ ಮಾಸದಲ್ಲಿ ಬರುವ ಹಬ್ಬ ಯಾವುದು ? ☐
  ೧) ದಸರಾ ೨) ಗಣೇಶ ಚತುರ್ಥಿ ೩) ನಾಗಪಂಚಮಿ ೪) ಯುಗಾದಿ
- ......... ದಿನವನ್ನು 'ಮಹಾರಾಷ್ಟ್ರ ದಿನ'ವೆಂದು ಆಚರಿಸುತ್ತಾರೆ. ☐
  ೧) ೫ ಜೂನ ೨) ೧ ಮೇ ೩) ೧೫ ಅಗಷ್ಟ ೪) ೨೧ ಮೇ

### ಗಮನಿಸಿರಿ

**ನಾಮಪದ :** ಯಾವುದೊಂದು ವ್ಯಕ್ತಿ, ವಸ್ತು, ಸ್ಥಳ, ಪ್ರಾಣಿ, ಪಕ್ಷಿ, ಭಾವನೆ ಮತ್ತು ಉದ್ಯೋಗಗಳ ಹೆಸರನ್ನು ಸೂಚಿಸುವ ಪದಕ್ಕೆ 'ನಾಮಪದ'ವೆನ್ನುವರು.

ಉದಾ. : ೧) ರಾಮನು ಜಾಣ ಬಾಲಕ.
೨) ಪಂಢರಪುರವು ಒಂದು ಪುಣ್ಯಕ್ಷೇತ್ರವಾಗಿದೆ.
೩) ಹುಲಿ ನಮ್ಮ ರಾಷ್ಟ್ರೀಯ ಪ್ರಾಣಿಯಾಗಿದೆ.
೪) ಸರ್ಕಸನ್ನು ನೋಡಿದಾಗ ಮಕ್ಕಳಿಗೆ ಬಹಳ ಆನಂದವಾಯಿತು.
೫) ಬಡಿಗನು ಕಟ್ಟಿಗೆಯಿಂದ ಆಟಿಗೆಗಳನ್ನು ತಯಾರಿಸುತ್ತಾನೆ.

# ೪. ಉಕ್ಕಿನ ಮನುಜ



ಭಾರತ ಮಾತೆಯ
ಹೆಮ್ಮೆಯ ತನುಜ
ಸ್ನೇಹದಿ ಕರೆವರು
ಉಕ್ಕಿನ ಮನುಜ

ಎಲ್ಲರ ಗೆಲ್ಲುವ
ಮಾತಿನ ಮೋಡಿ
ಯತ್ನದಿ ಕಳಚಿತು
ಬಂಧನ ಬೇಡಿ

ಬಯಸಿದೆ ಅನುದಿನ
ದೇಶದ ಐಕ್ಯ
ಜನತೆಗೆ ನೀಡಲು
ಸಂತತ ಸೌಖ್ಯ

ವಜ್ರದ ತೆರದಲಿ
ನಿರ್ಣಯ ಮಾಡಿ
ಅರಸರ ಅಟ್ಟಲು
ಹೋದರು ಓಡಿ

ಭಾರತ ದೇಶದ
ನೆಚ್ಚಿನ ರತ್ನ
ದೇಶದ ಏಳ್ಗೆಗೆ
ಮಾಡಿದೆ ಯತ್ನ

ಎಲ್ಲರ ಮೆಚ್ಚಿನ
ವಲ್ಲಭ ಭಾಯಿ
ಜನುಮವ ನೀಡಲಿ
ಭಾರತ ತಾಯಿ

– ಎಂ. ಎಂ. ಸಂಗಣ್ಣವರ

## ಶಬ್ದಗಳ ಅರ್ಥ

ತನುಜ – ಮಗ ; ಯತ್ನ – ಪ್ರಯತ್ನ ; ಏಳ್ಗೆ – ಪ್ರಗತಿ ; ಅಟ್ಟು – ಹೊಡೆದೋಡಿಸು

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ವಲ್ಲಭಭಾಯಿಯವರನ್ನು ಸ್ನೇಹದಿಂದ ಏನೆಂದು ಕರೆಯುವರು ?

ಆ) ಅವರು ಅನುದಿನ ಏನನ್ನು ಬಯಸಿದರು ?

ಇ) ಅವರು ಯಾವ ತೆರದಲಿ ನಿರ್ಣಯ ಮಾಡುತ್ತಿದ್ದರು ?

ಈ) ಭಾರತ ದೇಶದ ನೆಚ್ಚಿನ ರತ್ನ ಯಾರು ?

ಪ್ರಶ್ನೆ ೨) ಬಿಟ್ಟ ಸ್ಥಳಗಳನ್ನು ತುಂಬಿರಿ.

ಅ) ಭಾರತ ಮಾತೆಯ ........ ತನುಜ.

ಆ) ಎಲ್ಲರ ಗೆಲ್ಲುವ .......... ಮೋಡಿ.

ಇ) ಜನತೆಗೆ ನೀಡಲು .......... ಸೌಖ್ಯ.

ಈ) ಜನುಮವ ನೀಡಲಿ ........ ತಾಯಿ.

## ಉಪಕ್ರಮ

ಚಂದ್ರಶೇಖರ ಆಝಾದ್ ಮತ್ತು ಭಗತ್‌ಸಿಂಗ ಇವರ ಜೀವನಚರಿತ್ರೆಯನ್ನು ಶಿಕ್ಷಕರಿಂದ/ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.

## • ನುಡಿಮುತ್ತು •

ಧೈರ್ಯದ ಸಹವಾಸ ಕಷ್ಟ, ಆದರೆ ಫಲ ಮಧುರ

ಸಾಧನೆ ವ್ಯಕ್ತಿತ್ವ ವಿಕಾಸಕ್ಕೆ ಪ್ರೇರಣೆ

## ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- ........... ಇವರು ಭಾರತದ ಪ್ರಧಾನಮಂತ್ರಿಯಾಗಿದ್ದರು. ☐

  ೧) ಲೋಕಮಾನ್ಯ ಟಿಳಕ ೨) ವಲ್ಲಭಭಾಯಿ ಪಟೇಲ

  ೩) ಲಾಲಬಹಾದ್ದೂರ ಶಾಸ್ತ್ರಿ ೪) ಗಾಂಧೀಜಿ

- ಕೆಳಗಿನ ಶಬ್ದಗಳಲ್ಲಿಯ ನಾಮಪದದ ಶಬ್ದ ಗುರುತಿಸಿರಿ. ☐

  ೧) ಅಕಬರ ೨) ಅವನು

  ೩) ನಾನು ೪) ಇವರು

# ೫. ನಿಜವಾದ ಸಂಪತ್ತು



ರತ್ನಪುರವೆಂಬ ರಾಜ್ಯವನ್ನು ರತ್ನಸೇನನೆಂಬ ದಯಾಳು, ನ್ಯಾಯಪ್ರಿಯ ರಾಜ ಆಳುತ್ತಿದ್ದನು. ಆತನ ರಾಜ್ಯದಲ್ಲಿ ನೆಮ್ಮದಿ ನೆಲೆಸಿತ್ತು.

ಕಾಲಕ್ರಮೇಣ ರತ್ನಸೇನ ವೃದ್ಧನಾದನು. ಮಗ ಚಂದ್ರಸೇನ ಸಕಲ ವಿದ್ಯಾಪಾರಂಗತನಾಗಿದ್ದು ರಾಜ್ಯಭಾರ ವಹಿಸಿಕೊಳ್ಳುವ ಮಟ್ಟಿಗೆ ಬೆಳೆದಿದ್ದನು. ರತ್ನಸೇನ ಮಗನನ್ನು ಸಿಂಹಾಸನದ ಮೇಲೆ ಕೂರಿಸಿ, ತಾನು ತಪಸ್ಸಿಗಾಗಿ ಅರಣ್ಯಕ್ಕೆ ಹೋದನು.

ಯುವಕ ಚಂದ್ರಸೇನ ರಾಜನಾದ ತಕ್ಷಣ ಗೆಳೆಯರು ಹೆಚ್ಚಾದರು. ರಾಜ ಪರಿವಾರ ದೊಡ್ಡದಾಯಿತು. ಸಭ್ಯತೆ ತಿಳಿಯದ, ದುರ್ವರ್ತನೆಗೆ ಹೆಸರಾದ ಸ್ನೇಹಿತರು ರಾಜನಿಗೆ ಒಂದೊಂದೇ ಚಟಗಳನ್ನು ಕಲಿಸಿದರು. ಇದರಿಂದಾಗಿ ಖಜಾನೆ ಖಾಲಿಯಾಗತೊಡಗಿತು. ರಾಜನು ಬೊಕ್ಕಸ ತುಂಬಿಸಿಕೊಳ್ಳಲು ಪ್ರಜೆಗಳ ಮೇಲೆ ಹಲವಾರು ತೆರಿಗೆ ವಿಧಿಸಿ, ಕೊಡದಿದ್ದವರನ್ನು ಹಿಂಸಿಸಿ ಹಣ ವಸೂಲು ಮಾಡಿಸುತ್ತಿದ್ದನು. ಹೀಗೆ ಎರಡು ವರ್ಷ ಕಳೆಯಿತು.

ಸುಭಿಕ್ಷವಾಗಿದ್ದ ರತ್ನಪುರವು ದಾರಿದ್ರ್ಯ, ರೋಗರುಜಿನಗಳಿಗೆ ತುತ್ತಾಯಿತು. ಜನ ಬಡತನದಿಂದ ನರಳ ತೊಡಗಿದರು. ತೆರಿಗೆ ಕಟ್ಟಲಾರದೆ ಹೊರ ರಾಜ್ಯದ ವ್ಯಾಪಾರಿಗಳು ವ್ಯಾಪಾರಕ್ಕೆ ಬರುತ್ತಿರಲಿಲ್ಲ. ರೈತರು ಗೋಳಾಡತೊಡಗಿದರು.

ಹೀಗಿರುವಾಗ ಸಾಧುವೊಬ್ಬ ಆ ರಾಜ್ಯಕ್ಕೆ ಬಂದನು. ಆತನ ಉದ್ದನೆಯ ಗಡ್ಡ, ಪ್ರಸನ್ನ ನೇತ್ರ, ಮೃದು ಧ್ವನಿ, ಮುಖದಲ್ಲಿನ ಸೌಮ್ಯ ಕಳೆ ಜನರನ್ನು ಆಕರ್ಷಿಸಿತು. ಪ್ರಜೆಗಳೆಲ್ಲ ಸಾಧುವಿನ ಬಳಿ ತಮ್ಮ

ದುಃಖ ತೋಡಿಕೊಂಡು, ಚಂದ್ರಸೇನನಿಂದ ತಮಗೆ ಬಂದ ದೌರ್ಭಾಗ್ಯವನ್ನು ಹೇಳಿಕೊಂಡರು. ಸಾಧು, ಮಹಾರಾಜನನ್ನು ಕಾಣಲು ಅರಮನೆಗೆ ಹೋದಾಗ ದ್ವಾರಪಾಲಕರು ಸಾಧುವನ್ನು ಅಡ್ಡಗಟ್ಟಿದರು. ಒಳಗೆ ಯಾರಿಗೂ ಪ್ರವೇಶವಿಲ್ಲವೆಂದು ಹೊರಗಟ್ಟಿದರು.

ಆಗ ಸಾಧು 'ನನ್ನ ಹತ್ತಿರ ಅಪೂರ್ವ ವಸ್ತುವೊಂದು ಇದೆ. ಅದನ್ನು ಮಹಾರಾಜರಿಗೆ ಕಾಣಿಕೆಯಾಗಿ ನೀಡಬೇಕೆಂದಿರುವೆ' ಎಂದಾಕ್ಷಣ ಅವರು ದಾರಿಬಿಟ್ಟರು. ಮಹಾರಾಜನಿಗೆ ಸುದ್ದಿ ಹೋಯಿತು.

ಚಂದ್ರಸೇನನು ಆಸೆಬುರುಕನಂತೆ ಓಡಿಬಂದು ಸಾಧುವನ್ನು ಅರಮನೆಯೊಳಗೆ ಕರೆದೊಯ್ದು ಸತ್ಕರಿಸಿದನು. 'ಮಹಾರಾಜ, ನಾನು ಕಾಡಿನಲ್ಲಿ ಸುತ್ತಾಡುತ್ತಿದ್ದಾಗ ನನಗೊಂದು ದೊಡ್ಡ ಖಜಾನೆ ಸಿಕ್ಕಿದೆ. ಅದರ ತುಂಬಾ ಬೆಲೆ ಕಟ್ಟಲಾಗದ ವಸ್ತುಗಳಿವೆ. ನಿಧಿಯ ಅವಶ್ಯಕತೆ ನಿನಗಿದೆ ಎಂದು ಗೊತ್ತು' ಎಂದ ಸಾಧು.

ಸಾಧುವಿನ ಮಾತಿನಿಂದ ಸಂತೋಷಗೊಂಡ ಚಂದ್ರಸೇನನು 'ಸ್ವಾಮಿ, ಬೇಗ ಹೇಳಿ ಎಲ್ಲಿದೆ ನಿಧಿ'? ಎಂದು ಆತುರಪಟ್ಟನು. ಈ ಮಾತಿಗೆ ಸಾಧು 'ನಿಮಗೆ ಆ ಖಜಾನೆ ಬೇಕು ಅಂದರೆ ನನ್ನ ಹಿಂದೆ ಕಾಡಿಗೆ ಬರಬೇಕಾಗುತ್ತದೆ. ನಾವು ಹೋಗುವ ದಾರಿಯಲ್ಲಿ ಬಡವರು, ನಿರ್ಗತಿಕರು, ರೋಗಿಗಳು, ಅಸಹಾಯಕ ವ್ಯಕ್ತಿಗಳು ಕಾಣಬಾರದು. ಹಾಗಿದ್ದರೆ ಮಾತ್ರ ಆ ಖಜಾನೆ ನಿಮ್ಮದಾಗುತ್ತದೆ. ಇಲ್ಲದಿದ್ದರೆ ಬರೀ ಹಾವು, ಚೇಳುಗಳು ತುಂಬಿರುತ್ತವೆ, ಎಚ್ಚರ' ಎಂದನು.

ಈ ಮಾತನ್ನು ಕೇಳಿ ರಾಜನ ಕೈಕಾಲು ತಣ್ಣಗಾದವು. 'ನನ್ನ ರಾಜ್ಯದಲ್ಲಿರುವವರೆಲ್ಲರೂ ಅಂಥವರೇ ಇದ್ದಾರೆ. ಅವರು ಕಾಣಿಸದ ಹಾಗೆ ಈ ಸಾಧುವನ್ನು ಯಾವ ದಾರಿಯಲ್ಲಿ ಕರೆದುಕೊಂಡು ಹೋಗುವದು ಎಂದು ಯೋಚಿಸತೊಡಗಿದನು. ಆಗ ಸಾಧು, ಮಹಾರಾಜ ನಾನು ಒಂದು ತಿಂಗಳ ಕಳೆದ ನಂತರ ಮತ್ತೆ ಬರುತ್ತೇನೆಂದು ಹೇಳಿ ಹೊರಟು ಹೋದನು.

ಚಂದ್ರಸೇನ ರಾಜನು ಮಂತ್ರಿಗಳೊಂದಿಗೆ ಸಮಾಲೋಚಿಸಿದನು. ಯಾವ ಕಷ್ಟವಾದರೂ ಸರಿ ಖಜಾನೆ ಖಾಲಿಯಾಗಬಾರದು ಎಂಬುದು ಅವನ ವಾದ. ಆಗ ಮುಖ್ಯ ಮಂತ್ರಿ ಹೇಳಿದನು, ''ಸ್ವಾಮಿ, ಇಂಥ ಅಪೂರ್ವ ನಿಧಿ ನಮಗೆ ಸಿಗುತ್ತದೆ ಅಂದರೆ ನಮ್ಮ ಖಜಾನೆಯನ್ನು ಸ್ವಲ್ಪ ಖಾಲಿ ಮಾಡಬೇಕು. ಈ ರೀತಿ ಖರ್ಚು ಮಾಡುವದರಲ್ಲಿ ತಪ್ಪೇನಿಲ್ಲ, ದೊಡ್ಡ ನಿಧಿ ನಮ್ಮದಾದ ನಂತರ ಮತ್ತೆ ಪ್ರಜೆಗಳ ಮೇಲೆ ತೆರಿಗೆ ಹೇರಿದರಾಯಿತು. ಆಗ ದುಪ್ಪಟ್ಟು ಹಣ ಬರುತ್ತದೆ. ಈ ಮಾತಿನಿಂದ ಚಂದ್ರಸೇನನ ಮನಸ್ಸಿನಲ್ಲಿ ದುರಾಸೆ ಹೆಡೆಯಾಡತೊಡಗಿತು. ಆಗ ರಾಜನು ರೈತರ ಮತ್ತು ವ್ಯಾಪಾರಿಗಳ ಮೇಲೆ ಹೇರಿದ ತೆರಿಗೆಯನ್ನು ಹಿಂದೆ ತೆಗೆದುಕೊಂಡನು. ಪ್ರಜೆಗಳಿಗೆ ಬೊಕ್ಕಸದಿಂದ ಹಣದ ಸಹಾಯ ಸಿಕ್ಕಿತು. ಎಲ್ಲ ರೀತಿಯ ಸುಧಾರಣೆಗಳಾದವು. ಇದರಿಂದ ಪ್ರಜೆಗಳಿಗೆ ಆಶ್ಚರ್ಯ ಮತ್ತು ಸಂತೋಷ ಒಟ್ಟಿಗೆ ಆದವು. ಹೀಗೆ ಒಂದೇ ತಿಂಗಳಲ್ಲಿ ರಾಜ್ಯದಲ್ಲೆಲ್ಲ ಸಂತೋಷ ತುಂಬಿ ತುಳುಕಿತು.

ಚಂದ್ರಸೇನನು ಸಾಧುವಿನ ದಾರಿ ಕಾಯತೊಡಗಿದನು. ಒಂದು ತಿಂಗಳ ನಂತರ ಸಾಧು ಬಂದನು. ಚಂದ್ರಸೇನನು ತನ್ನ ಮಂತ್ರಿಗಳೊಡನೆ ನಗರದ ಪ್ರದರ್ಶನಕ್ಕೆ ಹೋದನು. ಎಲ್ಲೆಡೆ ಸುಖ ಸಮೃದ್ಧಿ ತುಂಬಿ ತುಳುಕುತ್ತಿತ್ತು. ಸಾಧು ನಗರವನ್ನು ಸುತ್ತಿಕೊಂಡು ಅರಮನೆಗೆ ಬಂದನು. ಮಂತ್ರಿಗಳೆಲ್ಲ ಒಬ್ಬರ ಮುಖ ಒಬ್ಬರು ನೋಡತೊಡಗಿದರು. ಸ್ವಾಮಿ ಎಲ್ಲಿದೆ ಖಜಾನೆ ? ನೀವು ಹಿಂದೆ ಬಂದಾಗ ಖಜಾನೆ ತೋರಿಸುತ್ತೇನೆ ಎಂದು ಹೇಳಿದ್ದಿರಿ ಎಂದು ರಾಜನು ಕೇಳಿದನು. ರಾಜನ ಈ ಮಾತು ಕೇಳಿ ಸಾಧುವು ನಗತೊಡಗಿದನು. ಇದರಿಂದ ರಾಜ ಮತ್ತು ಮಂತ್ರಿ ಸಿಟ್ಟಿಗೆದ್ದರು.

ಆಗ ಸಾಧು ಹೇಳಿದನು, ಮಗು ಚಂದ್ರಸೇನ, ನನ್ನನ್ನು ಯಾರೆಂದು ತಿಳಿದುಕೊಂಡಿರುವಿ? ಸರಿಯಾಗಿ ನೋಡು. ನಾನು ನಿನ್ನ ತಂದೆ ರತ್ನಸೇನ. ನಿನಗೆ ಕೊಟ್ಟ ರಾಜ್ಯವನ್ನು ನೀನು ಹಾಳು ಮಾಡಿರುವಿ. ಪ್ರಜೆಗಳ ವಿಶ್ವಾಸ ಮತ್ತು ಸ್ನೇಹವನ್ನು ಹಣಕ್ಕಾಗಿ ಮಾರಿಕೊಂಡಿರುವಿ. ನಿನಗೆ ಅರಿವಿನ ಬೆಳಕನ್ನು ತೋರಿಸಲು ನಾನು ಹೀಗೆ ಮಾಡಬೇಕಾಯಿತು. ಪ್ರಜೆಗಳ ನೆಮ್ಮದಿ ರಾಜನ ಆಭರಣ. ಅವರ ವಿಶ್ವಾಸ, ಸ್ನೇಹ ಕಳೆದುಕೊಂಡರೆ ಆಪತ್ತು ಕಟ್ಟಿಟ್ಟ ಬುತ್ತಿ. ಆಗ ರಾಜ್ಯದಲ್ಲಿ ಅರಾಜಕತೆ, ದಾರಿದ್ರ್ಯ ತಾಂಡವವಾಡುತ್ತವೆ. ಈ ಸಮಯವನ್ನು ಹೊಂಚುಹಾಕಿ ಶತ್ರುದಾಳಿ ಆರಂಭವಾಗುತ್ತದೆ. ಆಗ ನಿನ್ನ ಖಜಾನೆಯಲ್ಲಿನ ಸಂಪತ್ತೆಲ್ಲ ಖಾಲಿಯಾಗುತ್ತದೆ.

ಅಪೂರ್ವ ನಿಧಿಯನ್ನು ಪಡೆಯುವ ಉದ್ದೇಶದಿಂದ ನೀನು ಒಂದು ತಿಂಗಳಿನಿಂದ ಜನರ ಸೇವೆ ಮಾಡುತ್ತಿರುವಿ. ಅವರ ಸುಖ ಸಂತೋಷಕ್ಕಾಗಿ ಪ್ರಯತ್ನ ಪಡುತ್ತಿರುವಿ. ಇದರಿಂದ ಪ್ರಜೆಗಳೆಲ್ಲ ಮತ್ತೆ ಸುಖಿಯಾಗಿದ್ದಾರೆ. ಅವರೆಲ್ಲ ನಿನ್ನ ಜಯಜಯಕಾರ ಮಾಡುತ್ತಾರೆ. ಪ್ರಜೆಗಳ ಪ್ರೀತಿ, ವಿಶ್ವಾಸದಿಂದ ತುಂಬಿದ ಅಮೂಲ್ಯ ಖಜಾನೆಯನ್ನು ನಿನಗೆ ತೋರಿಸಲು ಬಂದಿದ್ದೇನೆ. ಇದನ್ನು ನೀನು ಶ್ರದ್ಧಾಪೂರ್ವಕವಾಗಿ ಉಳಿಸಿಕೊಂಡರೆ ಅದೇ ದೊಡ್ಡ 'ಖಜಾನೆ' ಎಂದು ವಿವರಿಸಿದನು. ಇದನ್ನು ಕೇಳಿ ಚಂದ್ರಸೇನನಿಗೆ ತನ್ನ ತಪ್ಪಿನ ಅರಿವಾಯಿತು. ತನ್ನ ತಂದೆಯ ಕಾಲಿಗೆ ಬಿದ್ದು ಕ್ಷಮೆಯಾಚಿಸಿದನು. ಅಂದಿನಿಂದ ರತ್ನಪುರ ರಾಜ್ಯವು ಸುಖ ಸಮೃದ್ಧಿಯ ಶಿಖರವಾಯಿತು.

## ಶಬ್ದಗಳ ಅರ್ಥ

ವೃದ್ಧ – ಅಜ್ಜ, ಮುದುಕ ; ಬೊಕ್ಕಸ – ಖಜಾನೆ ; ಸುಭಿಕ್ಷ – ಸಮೃದ್ಧಿ; ನೇತ್ರ – ಕಣ್ಣು; ಮೃದು – ಮೆತ್ತನೆಯ ; ಆಕರ್ಷಕ – ಮನ ಸೆಳೆಯುವ ; ಅಪೂರ್ವ – ಅಪರೂಪವಾದ ; ನಿಧಿ – ಸಂಪತ್ತು; ಸಮಾಲೋಚನೆ – ವಿಚಾರ ವಿನಿಮಯ

## ಪಡೆನುಡಿ

ಕೈಕಾಲು ತಣ್ಣಗಾಗು – ಗಾಬರಿಯಾಗು ; ಹೆಡೆಯಾಡು – ಆಸೆಪಡು ; ಹೊಂಚುಹಾಕು – ಸಮಯ ಸಾಧಿಸು

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಖಜಾನೆ ಏಕೆ ಖಾಲಿಯಾಗತೊಡಗಿತು ?

______________________________

______________________________

ಆ) ರತ್ನಪುರ ರಾಜ್ಯಕ್ಕೆ ಯಾರು ಬಂದರು ?

______________________________

______________________________

ಇ) ಖಜಾನೆ ದೊರಕಬೇಕಾದರೆ ಯಾವ ನಿಯಮಗಳನ್ನು ಪಾಲಿಸಬೇಕಾಗಿತ್ತು ?

______________________________

______________________________

ಈ) ರಾಜನು ನಿಯಮಗಳನ್ನು ಹೇಗೆ ಪೂರ್ತಿಗೊಳಿಸಿದನು ?

______________________________

______________________________

ಉ) ರತ್ನಸೇನನು ತನ್ನ ಮಗನಿಗೆ ಹೇಳಿದ ಬುದ್ಧಿವಾದವೇನು ?

______________________________

______________________________

ಪ್ರಶ್ನೆ ೨) ಕೆಳಗಿನ ಬಿಟ್ಟಸ್ಥಳ ತುಂಬಿರಿ.

ಅ) ರತ್ನಸೇನ ರಾಜನ ಮಗನ ಹೆಸರು .............

ಆ) .......... ರತ್ನಪುರ ರಾಜ್ಯವು ದಾರಿದ್ರ್ಯ, ರೋಗರುಜಿನಗಳಿಗೆ ತುತ್ತಾಯಿತು.

ಇ) ನನ್ನ ಹತ್ತಿರ ............. ವಸ್ತುವೊಂದು ಇದೆ.

ಈ) ಪ್ರಜೆಗಳ ನೆಮ್ಮದಿ ರಾಜನ ...................

ಉ) .................. ತನ್ನ ತಪ್ಪಿನ ಅರಿವಾಯಿತು.

ಪ್ರಶ್ನೆ ೩) ಪಡೆನುಡಿಗಳನ್ನು ವಾಕ್ಯದಲ್ಲಿ ಬಳಸಿರಿ.

ಅ) ಕೈಕಾಲು ತಣ್ಣಗಾಗು ..................................................

ಆ) ಹೊಂಚುಹಾಕು ......................................................

ಪ್ರಶ್ನೆ ೪) ವಿರುದ್ಧಾರ್ಥಕ ಶಬ್ದ ಬರೆಯಿರಿ.

ಸುಭಿಕ್ಷ × 

ದೌರ್ಭಾಗ್ಯ × 

ಸಂತೋಷ × 

ಆಸೆ × 

ವಿಶ್ವಾಸ × 

ಪ್ರಶ್ನೆ ೫) ಸಮಾನಾರ್ಥಕ ಶಬ್ದ ಬರೆಯಿರಿ.

ರಾಜ = ......................

ಅರಣ್ಯ = ..................

ನೇತ್ರ = ......................

ನಿಧಿ = ......................

## ಉಪಕ್ರಮ

ನೀತಿಬೋಧಕ ಕಥೆಗಳನ್ನು ಶಿಕ್ಷಕರಿಂದ / ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.

## • ನುಡಿಮುತ್ತು •

ಅಟ್ಟ ಮೇಲೆ ಒಲೆ ಉರಿಯಿತು ಕೆಟ್ಟ ಮೇಲೆ ಬುದ್ಧಿ ಬಂತು

AUTPCK

## ಅರಿವೇ ಗುರು

## ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- ರಾಜ ಈ ಪದದ ಸಮಾನಾರ್ಥಕ ಶಬ್ದ ................ ☐

  ೧) ಸೇವಕ ೨) ಮಂತ್ರಿ ೩) ಅರಸ ೪) ಸೇನಾಪತಿ

- ........... ಭಾರತದ ಸಂವಿಧಾನದ ಶಿಲ್ಪಿ ☐

  ೧) ಡಾ. ಅಂಬೇಡ್ಕರ ೨) ಡಾ. ರಾಧಾಕೃಷ್ಣನ್

  ೩) ಡಾ. ಅಬ್ದುಲಕಲಾಮ ೪) ಡಾ. ರಾಜೇಂದ್ರ ಪ್ರಸಾದ

# ೬. ಜ್ಞಾನ ವೃದ್ಧೆ



ಒಂದು ಸಲ ಭೋಜರಾಜ ಮತ್ತು ಅವನ ಆಸ್ಥಾನ ಕವಿ ಕಾಳಿದಾಸ ವೇಷ ಬದಲಿಸಿಕೊಂಡು ಉಜ್ಜಯಿನಿಯ ಅರಮನೆಯಿಂದ ಹೊರಟರು. ಪ್ರಜೆಗಳ ಕಷ್ಟಸುಖ ತಿಳಿದುಕೊಳ್ಳಲು ದೂರ ದೂರ ಹಳ್ಳಿಗಳಿಗೆ ಹೋದರು. ದಾರಿ ತಪ್ಪಿತು. ಆಗ ಎದುರಿಗೆ ಒಂದು ಗುಡಿಸಲಲ್ಲಿ ಒಬ್ಬ ಅಜ್ಜಿ ಕಾಣಿಸಿದಳು.

ಇಬ್ಬರೂ ಅಜ್ಜಿಯ ಹತ್ತಿರ ಹೋಗಿ ಕೇಳಿದರು. ''ಅಜ್ಜಿ. ಈ ರಸ್ತೆ ಎಲ್ಲಿಗೆ ಹೋಗ್ತದೆ ?'' ವೃದ್ಧೆ ಇಬ್ಬರನ್ನೂ ತುಂಬಾ ಹೊತ್ತು ಗಮನಿಸಿ ಹೇಳಿದಳು. ''ಈ ರಸ್ತೆ ಎಲ್ಲಿಗೂ ಹೋಗುವುದಿಲ್ಲ, ಜನ ಇದರ ಮೇಲೆ ಹೋಗ್ತಾರೆ-ಬರ್ತಾರೆ. ನೀವ್ಯಾರು ?''

''ನಾವು ಯಾತ್ರಿಕರು'' ರಾಜ ಹೇಳಿದನು.

''ಪ್ರಪಂಚದಲ್ಲಿ ಇಬ್ಬರೇ ಯಾತ್ರಿಕರು. ಒಬ್ಬ ಸೂರ್ಯ, ಇನ್ನೊಬ್ಬ ಚಂದ್ರ. ನೀವು ಯಾತ್ರಿಕರಾಗಲು ಹೇಗೆ ಸಾಧ್ಯ ?''

''ನಾವು ಕ್ಷಣ ಭಂಗುರ ಮಾನವರು'' ಕವಿ ಸತರ್ಕವಾಗಿ ಹೇಳಿದನು.

''ಕ್ಷಣ ಭಂಗುರ ! ಪ್ರಪಂಚದಲ್ಲಿ ಎರಡೇ ವಸ್ತುಗಳು ಕ್ಷಣ ಭಂಗುರ. ಒಂದು ಯೌವನ, ಮತ್ತೊಂದು ಹಣ.''

ರಾಜ ಮತ್ತು ಕವಿ ಮನಸ್ಸಿನಲ್ಲಿಯೇ ಮುದುಕಿಯ ಪಾಂಡಿತ್ಯಕ್ಕೆ ತಲೆಬಾಗಿದರು. ಅದನ್ನು ತೋರ್ಪಡಿಸಿಕೊಳ್ಳಲಿಲ್ಲ, ಮತ್ತೆ ಕವಿ, ''ನಾವು ಸಹನಶೀಲರು'' ಎಂದನು.

ಅದಕ್ಕೆ ವೃದ್ಧೆ ''ಸಜ್ಜನರೇ ! ಪ್ರಪಂಚದಲ್ಲಿ ಸಹನಶೀಲರೂ ಇಬ್ಬರೇ. ಮೊದಲನೆಯವಳು ಭೂಮಿ, ಎರಡನೆಯವಳು ನಾರಿ'' ಎಂದಳು.

ಕವಿ ಹೆದರಿ ನಮ್ರತೆಯಿಂದ, ''ಅಜ್ಜಿ – ನಾವು ಪರದೇಶಿಗಳು'' ಎಂದನು.

''ಇದು ಸಾಧ್ಯವಿಲ್ಲ. ಪರದೇಶಿಗಳು ಇಬ್ಬರೇ, ಒಂದು ಜೀವನ, ಮತ್ತೊಂದು ವೃಕ್ಷಗಳ ಎಲೆಗಳು.'' ಭೋಜರಾಜ ಮತ್ತು ಕವಿ ವೃದ್ಧೆಯ ಎದುರು ತಮ್ಮ ಸೋಲನ್ನೊಪ್ಪಿಕೊಂಡರು.

ನಿಜ ಹೇಳಿ ನೀವ್ಯಾರು ? ಎಂದು ಕೇಳಿದಳು ಅಜ್ಜಿ.

ಭೋಜರಾಜ ಮತ್ತು ಕಾಳಿದಾಸರು ವೃದ್ಧೆಯ ಎದುರು ಮೌನವಾಗಿ ನಿಂತಿದ್ದರು. ಆಗ ವೃದ್ಧೆ ಮುಗುಳ್ನಗುತ್ತ ''ನಮಸ್ಕಾರ ಮಹಾರಾಜರೆ. ನೀವು ಭೋಜರಾಜ ಮತ್ತು ಇವರು ಕವಿರಾಜ ಇರುತ್ತೀರಿ ಅಲ್ಲವೆ ?'' ಎಂದಳು.

ಹೌದು ಇದು ಸತ್ಯ. ಅಜ್ಜಿ, ನಮ್ಮನ್ನು ಹೇಗೆ ಗುರುತಿಸಿದೆ ಎಂದು ರಾಜನು ಕೇಳಿದನು. ಮಹಾರಾಜರೇ ನಿಮ್ಮಿಬ್ಬರ ಪಾಂಡಿತ್ಯದ ಕೀರ್ತಿ ಎಲ್ಲೆಡೆಗೂ ಹರಡಿದೆ. ನಿಮ್ಮ ಪಾಂಡಿತ್ಯವನ್ನು ನಿಮ್ಮ ಪ್ರಶ್ನೆಗಳಲ್ಲಿಯೇ ಗುರುತಿಸಿದೆನು ಎಂದು ಅಂದಳು ಅಜ್ಜಿ. ರಾಜನಿಗೆ ಬಹಳ ಸಂತೋಷವಾಯಿತು. ಇಷ್ಟೊಂದು ಪಾಂಡಿತ್ಯವುಳ್ಳ ಪ್ರಜೆಗಳು ನಮ್ಮ ರಾಜ್ಯದಲ್ಲಿ ಇದ್ದಾರಲ್ಲಾ ಎಂದು ಹೆಮ್ಮೆಪಟ್ಟನು. ಅಜ್ಜಿ ನೀನು ಕೇವಲ ವಯೋವೃದ್ಧೆ ಅಷ್ಟೆ ಅಲ್ಲ, ಜ್ಞಾನ ವೃದ್ಧೆಯೂ ಇರುವಿ ಎಂದನು ರಾಜ.

ಅಜ್ಜಿಯು ಅವರನ್ನು ಚಾಪೆಯ ಮೇಲೆ ಕೂಡ್ರಿಸಿದಳು. ಹರವಿಯಿಂದ ತಣ್ಣೀರನ್ನೂ ಜೊತೆಗೆ ಕರಣಿ ಬೆಲ್ಲವನ್ನೂ ಕೊಟ್ಟಳು. ಅವರು ಬೆಲ್ಲವನ್ನು ಬಾಯಿಯಲ್ಲಿ ಹಾಕಿಕೊಂಡರು. ನೀರು ಕುಡಿದರು. ಹಣ್ಣುಗಳನ್ನು ತಿಂದರು. ಅಜ್ಜಿಯ ಅತಿಥಿ ಸತ್ಕಾರಕ್ಕೆ ಸಂತೃಪ್ತಗೊಂಡರು.

ನೋಡಿ ಈ ಕಡೆಯಿಂದ ನೇರವಾಗಿ ಹೋಗಿ ಮುಂದೆ ಸ್ವಲ್ಪ ದೂರದಲ್ಲಿ ಉಜ್ಜಯಿನಿ ನಗರಕ್ಕೆ ಹೋಗುವ ರಸ್ತೆ ಕಂಡು ಬರುತ್ತದೆ ಎಂದು ಅಜ್ಜಿ ಹೇಳಿದಳು.

ರಾಜ ಮತ್ತು ಕವಿ ಅಜ್ಜಿಯ ಹೇಳಿಕೆಯ ಪ್ರಕಾರ ಮುನ್ನಡೆದು ನಗರವನ್ನು ತಲುಪಿದರು.

– ಡಿ. ಎನ್. ಶ್ರೀನಾಥ್

## ಶಬ್ದಗಳ ಅರ್ಥ

ವೃದ್ಧೆ – ಅಜ್ಜಿ; ಕ್ಷಣ ಭಂಗುರ – ಸ್ವಲ್ಪಕಾಲ ಉಳಿಯುವ ; ಪಾಂಡಿತ್ಯ – ಬುದ್ಧಿವಂತಿಕೆ ; ತೋರ್ಪಡಿಸು – ತೋರಿಸು ; ನಾರಿ – ಸ್ತ್ರೀ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ರಾಜ ಮತ್ತು ಕವಿ ವೇಷ ಬದಲಿಸಿಕೊಂಡು ಎಲ್ಲಿಗೆ ಹೋದರು ?

______________________________

______________________________

ಆ) ಪ್ರಪಂಚದಲ್ಲಿರುವ ಯಾತ್ರಿಕರು ಯಾರು ?

______________________________

______________________________

ಇ) ಕ್ಷಣ ಭಂಗುರ ವಸ್ತುಗಳು ಯಾವವು ?

ಈ) ಯಾರನ್ನು ಸಹನಶೀಲರು ಎಂದು ಅಜ್ಜಿ ಹೇಳಿದಳು ?

ಉ) ಅಜ್ಜಿಯು ರಾಜ ಮತ್ತು ಕವಿಗಳನ್ನು ಯಾವ ಆಧಾರದಿಂದ ಗುರುತಿಸಿದಳು ?

ಪ್ರಶ್ನೆ ೨) ಕೆಳಗಿನ ಮಾತುಗಳನ್ನು ಯಾರು, ಯಾರಿಗೆ ಹೇಳಿದರು.

ಅ) ಈ ರಸ್ತೆ ಎಲ್ಲಿಗೂ ಹೋಗುವುದಿಲ್ಲ.

ಆ) ಅಜ್ಜಿ, ನಾವು ಪರದೇಶಿಗಳು.

ಇ) ಅಜ್ಜಿ, ನಮ್ಮನ್ನು ನೀನು ಹೇಗೆ ಗುರುತಿಸಿದೆ ?

ಈ) ನೋಡಿ, ಈ ಕಡೆಯಿಂದ ನೇರವಾಗಿ ಹೋಗಿ.

ಪ್ರಶ್ನೆ ೩) ಬಿಟ್ಟ ಸ್ಥಳಗಳನ್ನು ತುಂಬಿರಿ.

ಅ) ಒಂದು ಗುಡಿಸಲಲ್ಲಿ ಒಬ್ಬ............ ಕಾಣಿಸಿದಳು.

ಆ) ಮಹಾರಾಜರೆ, ನಿಮ್ಮಿಬ್ಬರ ............. ಕೀರ್ತಿ ಎಲ್ಲೆಡೆಗೂ ಹರಡಿದೆ.

ಇ) ಪಾಂಡಿತ್ಯವುಳ್ಳ ಪ್ರಜೆಗಳು ನಮ್ಮ ರಾಜ್ಯದಲ್ಲಿ ಇದ್ದಾರಲ್ಲಾ ಎಂದು ..........

ಈ) .......... ಅವರನ್ನು ಚಾಪೆಯ ಮೇಲೆ ಕುಳ್ಳಿರಿಸಿದಳು.

ಉ) ಅಜ್ಜಿಯ ............. ಸಂತೃಪ್ತಗೊಂಡರು.

ಪ್ರಶ್ನೆ ೪) ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ.

ಅ) ಕಷ್ಟ × ..........., ಆ) ಸತ್ಯ × ...........,

ಇ) ಕೀರ್ತಿ × ..........., ಈ) ತೃಪ್ತಿ × ...........,

ಉ) ಮುನ್ನಡೆ × ...........

ಪ್ರಶ್ನೆ ೫) ಉದಾಹರಣೆಯಲ್ಲಿ ತೋರಿಸಿದಂತೆ ಕೆಳಗಿನ ಶಬ್ದಗಳನ್ನು ಬರೆಯಿರಿ.

ಉದಾ. : ಯೋಗ್ಯ – ಅಯೋಗ್ಯ

ಅ) ಸಮಾನ .....................

ಆ) ಗೌರವ .....................

ಇ) ಧೀರ .....................

ಈ) ಶುಭ .....................

ಉ) ಪವಿತ್ರ .....................

## ಉಪಕ್ರಮ

೧) ಪಾಠಕ್ಕೆ ಅನುಸರಿಸಿ ಕೆಳಗಿನ ವಾಕ್ಯಗಳನ್ನು ಅನುಕ್ರಮವಾಗಿ ಬರೆಯಿರಿ.

ಅ) ಅಜ್ಜಿಯ ಹೇಳಿಕೆಯ ಪ್ರಕಾರ ಮುನ್ನಡೆದು ನಗರವನ್ನು ತಲುಪಿದರು.

ಆ) ಅವರನ್ನು ಚಾಪೆಯ ಮೇಲೆ ಕೂಡ್ರಿಸಿದಳು.

ಇ) ಅಜ್ಜಿ, ನಮ್ಮನ್ನು ಹೇಗೆ ಗುರುತಿಸಿದೆ ?

ಈ) ಉಜ್ಜಯಿನಿಯ ಅರಮನೆಯಿಂದ ಹೊರಟರು.

ಉ) ಅಜ್ಜಿ, ನಾವು ಪರದೇಶಿಗಳು.

೨) ಕವಿರತ್ನ ಕಾಳಿದಾಸನ ಜೀವನಚರಿತ್ರೆಯನ್ನು ಶಿಕ್ಷಕರಿಂದ / ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.

• ನುಡಿಮುತ್ತು •

ಅನುಭವವೇ ಬುದ್ಧಿವಂತಿಕೆಯ ಆಪ್ತ ಸ್ನೇಹಿತ

ಓದು ಒಕ್ಕಾಲು ಬುದ್ಧಿ ಮುಕ್ಕಾಲು

AV3KEB

## ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡದ ಸಾಹಿತಿ ☐

  ೧) ರಂ. ಶ್ರೀ. ಮುಗಳಿ　　೨) ಚಂದ್ರಶೇಖರ ಕಂಬಾರ

  ೩) ಕೆ. ಎಸ್. ನರಸಿಂಹಸ್ವಾಮಿ　　೪) ಜಿ. ಪಿ. ರಾಜರತ್ನಂ

- ಸ್ವದೇಶ ಈ ಶಬ್ದದ ವಿರುದ್ಧಾರ್ಥಕ ಶಬ್ದ ಯಾವುದು ? ☐

  ೧) ಸಂದೇಶ　　೨) ಆದೇಶ

  ೩) ಈದೇಶ　　೪) ವಿದೇಶ

### ಗಮನಿಸಿರಿ

**ಸರ್ವನಾಮ :** ನಾಮಪದದ ಬದಲಾಗಿ ಉಪಯೋಗಿಸುವ ಶಬ್ದಗಳಿಗೆ 'ಸರ್ವನಾಮ' ಎನ್ನುವರು.

ಉದಾ. : ನಾನು, ನೀನು, ಅವನು, ಅವಳು, ಅದು ಇತ್ಯಾದಿ

೧) ಸರಳೆಯು ಶಾಲೆಗೆ ಹೋಗುತ್ತಾಳೆ.
ಅವಳು ದಿನಾಲು ಅಭ್ಯಾಸ ಮಾಡುತ್ತಾಳೆ.

೨) ನೀನು ಏನು ಮಾಡುತ್ತಿರುವಿ ?

೩) ಆಕಳು ಹಾಲು ಕೊಡುತ್ತದೆ.
ಅದು ಹುಲ್ಲು ತಿನ್ನುತ್ತದೆ.

೪) ರಮೇಶನು ಚೆಂಡಿನಾಟ ಆಡುತ್ತಾನೆ.
ಅವನು ಸದೃಢ ಬಾಲಕನಾಗಿದ್ದಾನೆ.



# ೭. ಹಿತನುಡಿ



ಮಕ್ಕಳಿರಾ ಕೇಳಿರೊಂದು ಮುದ್ದು ಮಾತು
ನೀವು ಕಲಿಯಬೇಕಾದ ಬುದ್ಧಿಮಾತು ॥ ಪ ॥

ಸಕ್ಕರೆಯ ಕಡ್ಡಿಯಂಥ ಸವಿಯ ಮಾತು
ಎಲ್ಲರಿಗೂ ಹಿಡಿಸುವಂಥ ಪ್ರೀತಿ ಮಾತು
ಚೆನ್ನ ಚೆಲುವ ಕನ್ನಡದ ನೀತಿ ಮಾತು । ನನ್ನ
ತಾಯಿ ಕನ್ನಡಾಂಬೆ ನುಡಿಸಿದಂಥ ಮಾತು ॥ ೧ ॥

ಹೊತ್ತು ಮೀರಿ ಶಾಲೆಗೆಂದು ಬರಲುಬಾರದು । ನಮ್ಮ
ಸುತ್ತಮುತ್ತ ಇರುವ ಜನರ ತೆಗಳಬಾರದು
ಚಿತ್ತ ಕೆಡಿಸುವಂಥ ಮಾತು ಆಡಬಾರದು । ನಮ್ಮ
ಹೆತ್ತವರ ನುಡಿಗೆ ಎದುರು ನುಡಿಯಬಾರದು ॥ ೨ ॥

ಸತ್ಯವಂತ ಜನರ ಸ್ನೇಹ ತೊರೆಯಬಾರದು
ನಿತ್ಯ ನಿಯಮಗಳನು ತಪ್ಪಿ ನಡೆಯಬಾರದು
ಕೊಟ್ಟ ದಾನವನ್ನು ಮರಳಿ ಪಡೆಯಬಾರದು
ಕೆಟ್ಟ ಜನರ ದೂರವಿಡಲು ಮರೆಯಬಾರದು ॥ ೩ ॥

ಪರರ ಒಡವೆಗೆಂದೂ ಆಶೆ ಪಡಲುಬಾರದು
ಪರರ ಹಂಗಿನಲ್ಲಿ ಎಂದೂ ಬದುಕಬಾರದು
ನಿರುತ ದೇವ ಸ್ಮರಣೆಯನ್ನು ಬಿಡಲೆಬಾರದು
ಗುರುವು ಜ್ಞಾನದಾತ ಅವರ ಕೃಪೆಯ ಪಡೆವುದು ॥ ೪ ॥

– ವೆಂಕಟೇಶ ಹುಣಶೀಕಟ್ಟಿ

## ಶಬ್ದಗಳ ಅರ್ಥ

ಮುದ್ದು – ಪ್ರೀತಿ ; ಸ್ಮರಣೆ – ನೆನಪು ; ಬುದ್ಧಿ – ತಿಳುವಳಿಕೆ ; ಚಿತ್ತ – ಮನಸ್ಸು; ಹಂಗು – ಋಣ; ಪರರ – ಬೇರೆಯವರ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ನೀವು ಕಲಿಯಬೇಕಾದದ್ದು ಏನು ?

______________________________

______________________________

ಆ) ಸವಿ ಮಾತು ಹೇಗೆ ಇರುತ್ತದೆ ?

______________________________

______________________________

ಇ) ಹೊತ್ತು ಮೀರಿ ಎಲ್ಲಿಗೆ ಬರಬಾರದು ?

______________________________

______________________________

ಈ) ಎಂಥ ಮಾತು ಆಡಬಾರದು ?

______________________________

______________________________

ಉ) ಯಾರ ಕೃಪೆಯನ್ನು ಪಡೆಯಬೇಕು ?

______________________________

______________________________

ಪ್ರಶ್ನೆ ೨) ಕೆಳಗಿನ ಕವಿತೆಯ ಸಾಲುಗಳನ್ನು ಪೂರ್ಣ ಮಾಡಿರಿ.

ಪರರ ಒಡವೆಗೆಂದೂ ................


.....................................


.....................................

................. ಕೃಪೆಯ ಪಡೆವುದು.

## ಉಪಕ್ರಮ

ಕೆಳಗಿನ ಚಿತ್ರಗಳನ್ನು ನೋಡಿ ಐದು ಸಾಲು ಬರೆಯಿರಿ.





---

### ● ನುಡಿಮುತ್ತು ●

ಮೊದಲು ನೀವು ಒಳ್ಳೆಯವರಾಗದೆ ಇತರರನ್ನು ಸನ್ಮಾರ್ಗಕ್ಕೆ ತರಲು ಸಾಧ್ಯವಿಲ್ಲ

ನಾಲಿಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು

AVCGFV

### ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- ರಸ್ತೆಯಲ್ಲಿ ಹೋಗುವಾಗ ಬಾಳೆಹಣ್ಣಿನ ಸಿಪ್ಪೆ ಬಿದ್ದಿದೆ. ಆಗ ನೀನು ಏನು ಮಾಡುವಿ ?

  ೧) ನೋಡಿ ಹೋಗುವೆ　　೨) ಗೆಳೆಯನಿಗೆ ತಿಳಿಸುವೆ　　☐

  ೩) ಏನೂ ಮಾಡುವದಿಲ್ಲ　　೪) ಕಸದ ಡಬ್ಬಿಗೆ ಹಾಕುವೆ

- ಕೆಳಗಿನ ವಾಕ್ಯದಲ್ಲಿಯ ಸರ್ವನಾಮ ಗುರುತಿಸಿರಿ.

  ಮಕ್ಕಳು ಶಾಲೆಗೆ ಬಂದು ಅವರು ಪಾಠ ಓದಿದರು.　　☐

  ೧) ಮಕ್ಕಳು　　೨) ಅವರು

  ೩) ಪಾಠ　　೪) ಓದಿದರು

# ೮. ಮಾ. ಸುಭಾಷರಾವ ಕನ್ಸೆ



ಮಹಾರಾಷ್ಟ್ರದ ಸಾತಾರಾ ಜಿಲ್ಲೆಯಲ್ಲಿ ವಾಯಿ ಎಂಬುದು ತಾಲ್ಲೂಕು ಕೇಂದ್ರವಿದೆ. ವಾಯಿಯಲ್ಲಿ ಕಿಸಾನ್ ವೀರ್ ಮಹಾವಿದ್ಯಾಲಯವಿದೆ. ಸಾಹಸೀ ಬಾಲಕ ಸುಭಾಷ ಜಿ. ಕನ್ಸೆ ಆ ವಿದ್ಯಾಲಯದ ಹನ್ನೊಂದನೆಯ ತರಗತಿಯ ವಿದ್ಯಾರ್ಥಿ. ಈತನು ವಾಯಿ ತಾಲ್ಲೂಕಿನ ಭವಾಧಾನ ಗ್ರಾಮದವನು. ಶ್ರೀ ಚಿಟ್ಟಾಸ್‌ರಾವ ಕನ್ಸೆ ಮತ್ತು ಶ್ರೀಮತಿ ಅಂಜಿರಾ ಚಿಟ್ಟಾಸ್‌ರಾವ ಕನ್ಸೆ ದಂಪತಿಗಳ ಮಗನು.

ಭವಾಧಾನ್ ಗ್ರಾಮದಲ್ಲಿ ಚಿಟ್ಟಾಸರಾವರವರ ಮನೆಯ ಆವರಣದಲ್ಲಿ ಮನೆಯ ಉಪಯೋಗಕ್ಕೆ ನೀರನ್ನು ಪಡೆದುಕೊಳ್ಳುವುದಕ್ಕಾಗಿ ಒಂದು ಬಾವಿ ಇತ್ತು. ಅದರ ಸುತ್ತ ಕಡಿಮೆ ಎತ್ತರದ ಸುತ್ತುಗೋಡೆ ಇತ್ತು.

ದಿನಾಂಕ ೩೧.೦೫.೧೯೮೬ ರ ದಿನ ಸಾಯಂಕಾಲ ಮೂರು ಗಂಟೆಯ ಸಮಯ. ಚಿಟ್ಟಾಸ್ ರಾವ ಕನ್ಸೆಯವರ ನೆರೆಮನೆಯಲ್ಲಿ ವಿಕ್ರಾಂತ ಎಂಬ ಮಗು ಇತ್ತು. ವಿಕ್ರಾಂತನು ಆಟವಾಡಲು ಆಗಾಗ ಕನ್ಸೆಯವರ ಅಂಗಳದಲ್ಲಿ ಬರುತ್ತಿದ್ದನು. ಒಂದು ದಿನ ವಿಕ್ರಾಂತ ಮನೆಯ ಆವರಣದಲ್ಲಿ ಆಟವಾಡುತ್ತಿದ್ದನು. ಇದ್ದಕ್ಕಿದ್ದಂತೆಯೇ ಕೆಲವು ಬೀದಿ ನಾಯಿಗಳು ಮನೆಯ ಮುಂದೆ ಕಚ್ಚಾಡಲು ಪ್ರಾರಂಭಿಸಿದವು. ಅವು ಆವರಣದೊಳಕ್ಕೂ ಬಂದವು. ಅವು ಬೊಗಳುತ್ತಿದ್ದ ಶಬ್ದಕ್ಕೆ ಮಗು ವಿಕ್ರಾಂತ ಭಯಪಟ್ಟಿತು. ನಾಯಿಗಳು ಕಚ್ಚಾಡುತ್ತಾ ಕಚ್ಚಾಡುತ್ತಾ ಮಗುವಿದ್ದ ಕಡೆಗೆ ಹೋದವು. ಮಗುವಿಗೆ ಇನ್ನೂ ಭಯವಾಯಿತು. ಭಯದಿಂದ ಅದು ಜೋರಾಗಿ ಕಿರುಚಿಕೊಂಡಿತು. ನಾಯಿಗಳಿಂದ ತಪ್ಪಿಸಿಕೊಳ್ಳಲು ಬಾವಿಯ ಕಡೆಗೆ ಹೋಯಿತು. ಎತ್ತರವಿಲ್ಲದ ಸುತ್ತು ಗೋಡೆಯನ್ನು ಎಡವಿ ಬಾವಿಯಲ್ಲಿ ಬಿದ್ದುಬಿಟ್ಟಿತು.

ಮಗು ಚೀರಿದ್ದನ್ನು ಕೇಳಿ ಸುತ್ತಮುತ್ತಲಿನ ಜನ ಓಡಿ ಬಂದರು. ಬಾವಿಯ ಸುತ್ತ ಕೂಡಿದರು. ಮಗು ನೀರಿಗೆ ಬಿದ್ದಿರುವುದನ್ನು ಕಂಡರು. ಅದು ನಲವತ್ತು ಅಡಿಗಳಷ್ಟು ಆಳದ ಬಾವಿ. ಅದರಲ್ಲಿ ಹೆಚ್ಚು ನೀರಿತ್ತು, ಮಗು ಮುಳುಗಿ ಏಳುತ್ತಿತ್ತು. 'ಅದು ಪೂರ್ಣ ಮುಳುಗುವಷ್ಟರಲ್ಲಿ ಮಗುವನ್ನು ರಕ್ಷಿಸಬೇಕು. ಏನು ಮಾಡುವುದು ?' ಯೋಚಿಸುತ್ತಾ ನಿಂತರು, 'ಅಯ್ಯೋ !' ಎಂದರು.

ಯೋಚಿಸುತ್ತಾ ನಿಂತರೆ, ಅಯ್ಯೋ ಎಂದರೆ ಮಗು ಮೇಲಕ್ಕೆ ಬಂದೀತೇ ? ಜನರ ಮಧ್ಯೆ ಇದ್ದ ಸುಭಾಷ ತಕ್ಷಣವೇ ಮನೆಗೆ ಓಡಿದನು. ಹಗ್ಗ ತಂದನು. ಒಂದು ತುದಿಯನ್ನು ರಾಟೆಗೆ ಕಟ್ಟಿದನು, ಮತ್ತೊಂದು ತುದಿಯನ್ನು ಬಾವಿಯೊಳಗೆ ಇಳಿಬಿಟ್ಟನು. ಇಳಿಬಿಟ್ಟ ಹಗ್ಗವನ್ನು ಹಿಡಿದು ತಾನೇ ಬಾವಿಯೊಳಗೆ ಜಾರಿದನು. ಆದರೆ ಆ ಹಗ್ಗ ಬಾವಿಯ ನೀರನ್ನು ಮುಟ್ಟುವಷ್ಟು ಉದ್ದವಿರಲಿಲ್ಲ. ಇನ್ನೂ ಹದಿನೈದು ಅಡಿಗಳಷ್ಟು ಉದ್ದದಲ್ಲಿ ಕಡಿಮೆಯಿತ್ತು. ಮತ್ತೆ ಸಮಸ್ಯೆ ಎದುರಾಯಿತು. ಆಗಲೂ ಸುಭಾಷ ಯೋಚಿಸುತ್ತಾ ಸಮಯ ಕಳೆಯಲಿಲ್ಲ. ಮಗುವನ್ನು ಉಳಿಸಬೇಕೆಂಬ ತನ್ನ ನಿರ್ಧಾರವನ್ನು ಬದಲಾಯಿಸಲಿಲ್ಲ. ಹಗ್ಗದ ತುದಿಯಿಂದ ನೀರಿಗೆ ಧುಮುಕಿದನು. ಮುಳುಗುತ್ತಿದ್ದ ಮಗುವನ್ನು ಹಿಡಿದು ಮೇಲೆತ್ತಿದನು, ಅದು ಆಳವಾದ ಬಾವಿ, ನೀರು ಆಳವಾಗಿತ್ತು. ಕಾಲಿಗೆ ನೆಲ ಸಿಗುತ್ತಿರಲಿಲ್ಲ. ಆದ್ದರಿಂದ ಒಂದು ಕೈಯಿಂದ ಬಾವಿಯ ಗೋಡೆಯನ್ನು ಹಿಡಿದನು. ತನ್ನ ಹೆಗಲ ಮೇಲೆ ಮುಗ್ಧ ಮಗು ವಿಕ್ರಾಂತನನ್ನು ಹೊತ್ತುಕೊಂಡನು. ಮತ್ತೊಂದು ಕೈಯಿಂದ ಮಗುವನ್ನು ಹಿಡಿದುಕೊಳ್ಳಲೇಬೇಕಾಗಿತ್ತು. ಇಲ್ಲವಾದಲ್ಲಿ ಮಗು ಮತ್ತೆ ನೀರಿನಲ್ಲಿ ಬೀಳುವ ಸಂಭವವಿತ್ತು. ಗೋಡೆಯನ್ನು ಹಿಡಿದ ಕೈ ಆಗಾಗ್ಗೆ ಸೋತು ಹೋಗುತ್ತಿತ್ತು. ಮತ್ತೆ ಮತ್ತೆ ಕೈ ಬದಲಿಸಿ ಗೋಡೆ ಹಿಡಿದುಕೊಳ್ಳುತ್ತಿದ್ದನು. ನೀರು ಆಳವಾದ್ದರಿಂದ, ಮಗುವನ್ನು ಹೆಗಲ ಮೇಲೆ ಹೊತ್ತಿದ್ದರಿಂದ ಮುಳುಗುವಂತಾಗುತ್ತಿತ್ತು. ಪದೇ ಪದೇ ಸಹಾಯಕ್ಕಾಗಿ ಮೇಲಿರುವವರನ್ನು ಕೇಳಿಕೊಳ್ಳುತ್ತಿದ್ದನು. ಮೇಲಿದ್ದವರು ಉದ್ದನೆಯ ಹಗ್ಗಗಳನ್ನು, ಕಾಂಗಡಿಯನ್ನು (ಮರದ ತೊಟ್ಟಿಲು) ತಂದರು. ಹಗ್ಗಗಳಿಗೆ ಕಾಂಗಡಿ ಕಟ್ಟಿ ಬಾವಿಯಲ್ಲಿ ಇಳಿಸಿದರು. ಅದುವರೆಗೂ ಸುಭಾಷ ಕಷ್ಟವನ್ನು ಎದುರಿಸಿದನು. ಕಾಂಗಡಿ ತಲುಪಿದ ಕೂಡಲೇ ಅದರ ಒಳಗೆ ಮಗುವನ್ನು ಕೂಡ್ರಿಸಿ ಮೇಲಕ್ಕೆ ಕಳುಹಿಸಿದನು. ಸಮಾಧಾನದ ನಿಟ್ಟುಸಿರು ಬಿಟ್ಟನು.

ಮೇಲಿದ್ದ ಜನರು ಮೊದಲು ವಿಕ್ರಾಂತನನ್ನೂ, ಅನಂತರ ಸುಭಾಷನನ್ನೂ ಮೇಲೆಳೆದುಕೊಂಡರು. ಸುಭಾಷ ಮೇಲೆ ಬಂದಾಗ ತುಂಬಾ ಆಯಾಸಗೊಂಡಿದ್ದನು. ಅವನು ಅರ್ಧ ಗಂಟೆಯ ಕಾಲ ಸತತವಾಗಿ ಶ್ರಮಪಟ್ಟಿದ್ದನು. ಆತನ ತೋಳುಗಳು ತುಂಬಾ ನೋಯುತ್ತಿದ್ದವು. ಆದರೂ ತಾನೊಂದು ಮಗುವಿನ ಪ್ರಾಣ ಉಳಿಸಿದೆನೆಂಬ ತೃಪ್ತಿ ಅವನ ಮುಖದಲ್ಲಿ ಕಾಣುತ್ತಿತ್ತು.

ತನ್ನ ಪ್ರಾಣಕ್ಕೆ ಅಪಾಯವಾಗುವುದನ್ನೂ ಲೆಕ್ಕಿಸದೆ ಆಳವಾದ ನೀರಿದ್ದ ಬಾವಿಗೆ ಧುಮುಕಿ ತಮ್ಮ ಮಗುವನ್ನು ಬದುಕಿಸಿದ ಸುಭಾಷನನ್ನು ಮಗುವಿನ ತಾಯಿ-ತಂದೆಯರು ಬಾಯ್ತುಂಬ ಹೊಗಳಿದರು. ''ಬಹಳ ಕಾಲ ಸುಖವಾಗಿ ಬಾಳು'' ಎಂದು ಆತನನ್ನು ಹರಸಿದರು. ನೆರೆದಿದ್ದ ಜನ ಸುಭಾಷನ ಸಮಯಪ್ರಜ್ಞೆ, ಚಟುವಟಿಕೆ, ಜಾಣತನ ಹಾಗೂ ಧೈರ್ಯ ಸಾಹಸಗಳನ್ನು ಮೆಚ್ಚಿದರು. ಪತ್ರಿಕೆಗಳು ಸುಭಾಷನ ಸಾಹಸವನ್ನು ಪ್ರಶಂಸಿಸಿ ಬರೆದವು.

ಭಾರತದ ಮಕ್ಕಳ ಕಲ್ಯಾಣ ಮಂಡಳಿಯವರು ಈ ಬಾಲಕನ ಸಾಹಸವನ್ನು ಮೆಚ್ಚಿ 'ಸಾಹಸೀ ಬಾಲಕ ಪ್ರಶಸ್ತಿ'ಯನ್ನು ಕೊಟ್ಟರು.

– ಬಿ. ಬೋರೇಗೌಡ

## ಶಬ್ದಗಳ ಅರ್ಥ

ಕಿರುಚು – ಚೀರು, ಕೂಗು ; ತಕ್ಷಣ – ಕೂಡಲೇ ; ಅಪಾಯ – ತೊಂದರೆ ; ಧುಮುಕು – ಮೇಲಿನಿಂದ ಕೆಳಗೆ ಜಿಗಿಯುವುದು ; ಪ್ರಶಂಸೆ – ಹೊಗಳಿಕೆ ; ಸಾಹಸ – ಧೈರ್ಯ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.

ಅ) ಸುಭಾಷನು ಯಾವ ಶಾಲೆಯಲ್ಲಿ ಓದುತ್ತಿದ್ದನು ?

_______________

ಆ) ಸುಭಾಷನ ತಂದೆ–ತಾಯಿಯ ಹೆಸರು ಏನಿತ್ತು ?

_______________

ಇ) ಬಾವಿ ಎಲ್ಲಿ ಇತ್ತು ?

_______________

ಈ) ಬಾವಿಯ ಸುತ್ತ ಜನರು ಏಕೆ ನೆರೆದಿದ್ದರು ?

_______________

ಉ) ಸುಭಾಷನು ತಕ್ಷಣ ಏನು ತಂದನು ?

_______________

ಊ) ಸುಭಾಷನಿಗೆ ಸಾಹಸಿ ಪ್ರಶಸ್ತಿಯನ್ನು ಯಾರು ಕೊಟ್ಟರು ?

_______________

ಪ್ರಶ್ನೆ ೨) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಮಗು ಬಾವಿಯಲ್ಲಿ ಬೀಳಲು ಕಾರಣವೇನು ?

_______________

_______________

ಆ) ಸುಭಾಷನು ಮಗುವನ್ನು ಹೇಗೆ ಕಾಪಾಡಿದನು ?

______________________________________________

______________________________________________

ಇ) ನೆರೆದ ಜನರು ಯಾವ ರೀತಿ ಸುಭಾಷನನ್ನು ಹೊಗಳಿದರು ?

______________________________________________

______________________________________________

ಪ್ರಶ್ನೆ ೩) ಬಿಟ್ಟ ಸ್ಥಳ ತುಂಬಿರಿ.

ಅ) ಸಾತಾರಾ ಜಿಲ್ಲೆಯಲ್ಲಿ........ ಎಂಬುದು ತಾಲೂಕು ಕೇಂದ್ರವಿದೆ.

ಆ) ......... ಮನೆಯ ಆವರಣದಲ್ಲಿ ಆಟವಾಡುತ್ತಿದ್ದನು.

ಇ) ಹಗ್ಗಗಳಿಗೆ .......... ಕಟ್ಟಿ ಬಾವಿಯಲ್ಲಿ ಇಳಿಸಿದರು.

ಈ) ಪತ್ರಿಕೆಗಳು ಸುಭಾಷನ ............ ಪ್ರಶಂಸಿಸಿ ಬರೆದವು.

ಪ್ರಶ್ನೆ ೪) ಕೆಳಗಿನ ಹಸ್ತಲಿಖಿತ ಭಾಗವನ್ನು ಓದಿರಿ.

ತಮ್ಮ ಮಗುವನ್ನು ಬದುಕಿಸಿದ ಸುಭಾಷನನ್ನು ಮಗುವಿನ ತಾಯಿ-ತಂದೆಯರು ಬಾಯ್ತುಂಬ ಹೊಗಳಿದರು. "ಬಹಳ ಕಾಲ ಸುಖವಾಗಿ ಬಾಳು" ಎಂದು ಆತನನ್ನು ಹರಸಿದರು. ನೆರೆದಿದ್ದ ಜನ ಸುಭಾಷನ ಸಮಯಪ್ರಜ್ಞೆ, ಚಟುವಟಿಕೆ, ಜಾಣತನ ಹಾಗೂ ಧೈರ್ಯ ಸಾಹಸಗಳನ್ನು ಮೆಚ್ಚಿದರು. ಪತ್ರಿಕೆಗಳು ಸುಭಾಷನ ಸಾಹಸವನ್ನು ಪ್ರಶಂಸಿಸಿ ಬರೆದವು.

ಪ್ರಶ್ನೆ ೫) ಕೆಳಗಿನ ವಾಕ್ಯಗಳಲ್ಲಿ ನಾಮಪದ ಮತ್ತು ಸರ್ವನಾಮಗಳನ್ನು ಗುರುತಿಸಿರಿ.

ಅ) ಸುಭಾಷನು ಮಗುವಿನ ಪ್ರಾಣವನ್ನು ಕಾಪಾಡಿದನು. ______________

ಆ) ಅವನು ದಿನಾಲು ತಪ್ಪದೇ ವ್ಯಾಯಾಮ ಮಾಡುವನು. ______________

ಇ) ಸ್ವಾತಂತ್ರ್ಯ ಹಬ್ಬದ ದಿನ ನಮಗೆಲ್ಲ ಸಡಗರವೇ ಸಡಗರ. ______________

ಈ) ವನಭೋಜನಕ್ಕೆ ಹೋದಾಗ ಅವರು ಸಂತಸದಿ ನಲಿದರು. ______________

ಉ) ಸೀತೆಯು ಕವನ ಬರೆದಳು. ______________

## ಉಪಕ್ರಮ

೧) ವೃತ್ತಪತ್ರಿಕೆಯಲ್ಲಿ ಬರುವ ಬೇರೆ ಬೇರೆ ಸಾಹಸದ ಕಥೆಗಳನ್ನು ಸಂಗ್ರಹಿಸಿರಿ.

೨) ಗಗನಯಾತ್ರಿ ಕಲ್ಪನಾ ಚಾವ್ಲಾ ಮತ್ತು ಪರ್ವತಾರೋಹಿ ತೇನಸಿಂಗ ಇವರ ಸಾಹಸಗಳ ಬಗ್ಗೆ ಶಿಕ್ಷಕರಿಂದ / ಪಾಲಕರಿಂದ ತಿಳಿದುಕೊಳ್ಳಿರಿ.

### • ನುಡಿಮುತ್ತು •

ಆನಂದದಿಂದ ಬಾಳು. ಆದರೆ ಸಾಹಸಿಯಾಗಿ ಸಾವನ್ನೆದುರಿಸು

AVLCHI

### ಧೈರ್ಯಂ ಸರ್ವತ್ರ ಸಾಧನಂ

## ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- ಕೆಳಗಿನವರಲ್ಲಿ ವೀರಮಹಿಳೆ ಯಾರು ? ☐

  ೧) ಸರೋಜಿನಿ ನಾಯ್ಡು ೨) ಕಿತ್ತೂರ ಚೆನ್ನಮ್ಮ

  ೩) ಮದರ ತೆರೆಸಾ ೪) ಅಕ್ಕ ಮಹಾದೇವಿ

- ಹಿಂದುಗಳ ಪವಿತ್ರ ಗ್ರಂಥ ಯಾವುದು ? ☐

  ೧) ಭಗವದ್ಗೀತೆ ೨) ಕುರಾನ

  ೩) ಬೈಬಲ್ ೪) ಗ್ರಂಥಸಾಹೇಬ

### ಗಮನಿಸಿರಿ

**ವಿಶೇಷಣ :** ಯಾವುದೊಂದು ವಸ್ತು, ವ್ಯಕ್ತಿ ಮೊದಲಾದವುಗಳ ಗುಣ, ಬಣ್ಣ, ಗಾತ್ರ, ಆಕಾರ ಇವುಗಳನ್ನು ವರ್ಣಿಸುವ ಪದಗಳಿಗೆ 'ವಿಶೇಷಣ' ಎನ್ನುವರು.

ಒಳ್ಳೆಯ, ಕೆಂಪು, ದೊಡ್ಡ, ಅಗಲ, ಉದ್ದ ಇತ್ಯಾದಿ

ಉದಾ. : ೧) ಸಚಿನನು ಒಳ್ಳೆಯ ಹುಡುಗನಿರುವನು.

೨) ಗಿಳಿಯ ಚುಂಚು ಕೆಂಪಾಗಿದೆ.

೩) ಆಲದ ಮರವು ಬಹಳ ದೊಡ್ಡದಾಗಿದೆ.

೪) ಆಕಳ ಬಾಲ ಬಹಳ ಉದ್ದ ಇರುವದು.


೫) ಆ ಕೆರೆಯು ಅಗಲವಾಗಿದೆ.

# ೯. ದೀಪಗಳ ಮೇಲಾಟ

ಅಂದು ದೀಪಾವಳಿ. ಎಲ್ಲೆಡೆ ಸಾಲುದೀಪಗಳು ಕಂಗೊಳಿಸುತ್ತಿದ್ದವು. ಝುಗ-ಝುಗಿಸುವ ವಿದ್ಯುತ್ ದೀಪಗಳು ಎಲ್ಲರ ಮನ ಸೆಳೆಯುತ್ತಿದ್ದವು. ಮೇಣಬತ್ತಿಗಳು ಶಿಸ್ತಿನ ಸಿಪಾಯಿಗಳಂತೆ ಸಾಲಾಗಿ ನಿಂತಿದ್ದವು. ಬಣ್ಣಬಣ್ಣದ ಪಟಾಕಿಗಳಂತೂ ಮುಗಿಲೆತ್ತರಕ್ಕೆ ಸಿಡಿದು ಮನಸ್ಸಿಗೆ ಮುದ ನೀಡುತ್ತಿದ್ದವು. ಮದ್ದಿನ ಕುಳ್ಳೆಗಳಿಂದ ಕಾರಂಜಿಯಂತೆ ಬಣ್ಣ-ಬಣ್ಣದ ಬೆಳಕು ಸುರಿಯುತ್ತಿತ್ತು. ಬೀದಿ-ಬೀದಿಗಳಲ್ಲಿ ಬೆಳಕು ಹರಡಿತ್ತು.

ದೀಪಾವಳಿಯು ದೀಪಗಳ ಹಬ್ಬ. ವಿವಿಧ ದೀಪಗಳು ಒಟ್ಟಿಗೆ ಸೇರಿದುದರಿಂದ ಅವುಗಳಲ್ಲಿ ನಾನು ಹೆಚ್ಚು-ತಾನು ಹೆಚ್ಚು ಎಂಬ ಮೇಲಾಟ ಪ್ರಾರಂಭವಾಯಿತು.

(ಮೊದಲು ವಿದ್ಯುತ್ ದೀಪವು ಮೇಣಬತ್ತಿಯನ್ನು ಕೆಣಕಿ ಹೀಗೆ ನುಡಿಯಿತು.)



**ವಿದ್ಯುತ್ ದೀಪ :** ಏನು, ನಿಮ್ಮ ನಿಮ್ಮಲ್ಲಿ ಗುಸು-ಗುಸು ಎಂದು ಪಿಸುಗುಟ್ಟುತ್ತಿದ್ದೀರಿ ? ನಾನಿರುವಾಗ ನಿಮ್ಮನ್ನಾರು ಕೇಳುವವರು ? ನನ್ನ ಝುಗ-ಝುಗಿಸುವ ಬೆಳಕಿನ ಮುಂದೆ ನೀವು ಮುಗ್ಧ ಹಸುಳೆಗಳು. ನಿಮ್ಮದು ಅರಗಳಿಗೆಯ ಬದುಕು. ನಿಲ್ಲಿಸಿ ಆರ್ಭಟ !

**ಮೇಣಬತ್ತಿ :** ತಾಳು, ನಮ್ಮದು ಅರಗಳಿಗೆಯ ಬದುಕು ನಿಜ, ಆದರೆ ನಿನ್ನಂಥ ಅಹಂಕಾರ ನಮಗಿಲ್ಲ. ನಾವು ಪರೋಪಕಾರಿಗಳು. ಬದುಕಿನ ಕೊನೆಯ ಉಸಿರಿನವರೆಗೂ ಜನರಿಗೆ ಬೆಳಕು ಕೊಡುವವರು. ನಾವು ನಿಸ್ವಾರ್ಥಿಗಳೂ ಅಹುದು. ಅಂತೆಯೇ ಜನರು ನಮ್ಮನ್ನು ಪ್ರೀತಿಸುತ್ತಾರೆ.

**ವಿದ್ಯುತ್ ದೀಪ :** ಆಹಾ ... ನಿಸ್ವಾರ್ಥಿಗಳೇ, ನೀವು ನೆಲಕ್ಕುರುಳುವ ಸಮಯ ಬಂದಿತು. ಮುಗಿಸುವಿರಾ ಮಾತನ್ನು. ಅಬ್ಬಾ ! ಈ ಅಲ್ಪಾಯುಷಿಗಳಿಗೆ ಅದೆಂಥ ಆಲೋಚನೆ ? ಅದೆಂಥ ಅವಿವೇಕ !

**ಮೇಣಬತ್ತಿ :** ಎಲಾ, ಮೋಸದ ಮಂಕೆ ! ನಿನ್ನಲ್ಲಿ ಎಲ್ಲರಿಗೂ ಶಂಕೆ ! ನೀನು ಜನರಿಗೆ ಯಾವಾಗ ಕೈ ಕೊಡುತ್ತಿ ಎಂಬ ಭರವಸೆ ಇಲ್ಲ. ಕರೆಂಟ ಹೋದರೆ ನಿನ್ನನ್ನು ವೆಂಕಟರಮಣನೇ ಕಾಪಾಡಬೇಕು. ಅಧಿಕಾರ ಬಂದಾಗ ಅಹಂಕಾರ ಬಂದಂತೆ ಅರಚಿಕೊಳ್ಳಬೇಡ. ನಿನ್ನ ಮಾತು ಕೇಳಿದರೆ ಕತ್ತೆಗೆ ಕನಸಿನಲ್ಲಿ ಕೋಡು ಬಂದಂತೆಯೇ ಸರಿ.

**ವಿದ್ಯುತ್ ದೀಪ :** 'ಅಲ್ಪರ ಸಂಗ ಅಭಿಮಾನ ಭಂಗ' ಎಂಬಂತೆ ನಿಮ್ಮಂಥ ಅಲ್ಪರ ಜೊತೆಗೆ ನನ್ನದೇನು ಮಾತು ?

(ಎಂದು ವಿದ್ಯುತ್ ದೀಪ ಮೌನ ತಾಳುವುದು. ಅಷ್ಟರಲ್ಲಿ ದೇವರ ಮುಂದೆ ಉರಿಯುತ್ತಿರುವ ಪಣತಿಯು ವಿದ್ಯುತ್ ದೀಪವನ್ನು ಅಣಕಿಸಿ ನುಡಿಯುವುದು.)

**ಪಣತಿ :** ಆಯಿತೇ, ನಿನ್ನ ಮುಖಕ್ಕೆ ಮಂಗಳಾರತಿ. ಚಿಕ್ಕವರನ್ನು ಕೀಳೆಂದು ತಿಳಿಯಬೇಡ. ನಾನೂ ಚಿಕ್ಕವ. ಆದರೆ ನನ್ನ ಗುಣ ಬಹಳ ಶ್ರೇಷ್ಠ. ನಾನು ಏಕಾಗ್ರತೆಯಿಂದ ದೇವರ ಸೇವೆ ಮಾಡುವೆ. ನನ್ನ ಮೈಯನ್ನೇ ಸುಟ್ಟುಕೊಂಡು ಇತರರಿಗೆ ಬೆಳಕು ಕೊಡುವೆ. ನನ್ನ ತಾಳ್ಮೆಯ ತಪದಿಂದ ನಾನು ದೇವರಿಗೂ, ಮಾನವರಿಗೂ ಪ್ರಿಯನಾಗಿದ್ದೇನೆ. ಎಲ್ಲ ದೀಪಗಳಲ್ಲಿ ನನ್ನ ಘನತೆ-ಗೌರವ ದೊಡ್ಡದು.

**ವಿದ್ಯುತ್ ದೀಪ :** ಎಣ್ಣೆಯಾದೊಡನೆ ಕರಗುವ ಕುನ್ನಿಯೇ ನಿಲ್ಲಿಸು ನಿನ್ನ ಗೀತೋಪದೇಶ. ಯಾರ ಮುಂದೆ ಮಾತನಾಡುತ್ತಿರುವೆ ಎಂಬ ಅರಿವಿದೆಯಾ ನಿನಗೆ ? ನಾನೂ ದೇವರ ಸೇವಕನೇ. ಆತನ ಗುಡಿ-ಶಿಖರಗಳನ್ನೆಲ್ಲ ಅಲಂಕರಿಸುವೆ. ನನ್ನ ಮೋಹಕ್ಕೆ ಮಣಿಯದ ಮಾನವರೇ ಇಲ್ಲ. ಮಿಣಿ-ಮಿಣಿ ಮಿಣುಕುವ ಮರಿಯೇ ಇನ್ನಾದರೂ ಮುಚ್ಚಿಕೊಳ್ಳುವೆಯಾ ...


(ಅಷ್ಟರಲ್ಲಿ ಕರೆಂಟ ಹೋಗುತ್ತದೆ. ವಿದ್ಯುತ್ ದೀಪ ಆರುತ್ತದೆ. ಎಲ್ಲೆಡೆಯೂ ಕತ್ತಲೆ ಆವರಿಸುತ್ತದೆ. ಆಗ ಬ್ಯಾಟರಿ ಬೆಳಕು ಅಲ್ಲಲ್ಲಿ ಗೋಚರಿಸುತ್ತದೆ. ಆಗ ಬ್ಯಾಟರಿ ಹೀಗೆ ನುಡಿಯುತ್ತದೆ.)

**ಬ್ಯಾಟರಿ :** ಮುಗಿಯಿತೇ, ಈ ಅತಿರಥಿ-ಮಹಾರಥಿಗಳ ಆರ್ಭಟ ! ನನ್ನ ಬೆಲೆ ಬಲ್ಲವರೇ ಬಲ್ಲರು. ನಾನು ಸಮಯ ಬಂದಾಗ ಸಂಜೀವಿನಿ. ಉಸಿರಾಡುವ ತೊಂದರೆಗಾಗಿ ಬಳಸುವ ಆಕ್ಸಿಜನ್ ಸಿಲೆಂಡರಿನಂತೆ ನನ್ನ ಕಾರ್ಯ. ನಾನು ಗಾಳಿ, ಮಳೆ, ಚಳಿಗೆ ಅಂಜದ ದಿಟ್ಟನು. ನನ್ನದು ಅಳಿಲು ಸೇವೆಯಾದರೂ ಜನರಿಂದ ಅಪಾರ ಮೆಚ್ಚುಗೆ ಪಡೆದಿರುವೆ.

(ಹೀಗೆ ನುಡಿಯುತ್ತಿದ್ದಂತೆ ಬ್ಯಾಟರಿ ಆರುತ್ತದೆ. ಆಗ ಚಿಮಣಿ, ಕಂದೀಲು, ಲ್ಯಾಂಪಗಳಂತಹ ಸೀಮೆ ಎಣ್ಣೆಯ ದೀಪಗಳು ಮಿನುಗಲಾರಂಭಿಸುತ್ತವೆ. ಆಗ ಚಿಮಣಿಯು ಇತರ ಎಲ್ಲ ದೀಪಗಳನ್ನು ಕುರಿತು ಮಾತನಾಡುತ್ತದೆ.)

**ಚಿಮಣಿ :** ಸಾಕು ಮಾಡುತ್ತೀರಾ ನಿಮ್ಮ ಸರಣಿ ಸತ್ಯಾಗ್ರಹ ! ನಿಮ್ಮನ್ನು ನೀವೆ ಹೊಗಳಿಕೊಳ್ಳುವದು ಸರಿಯಲ್ಲ. ನಾನು ಬಡವರ ಬಂಧು, ದೀನರ ದೀಪವೆಂದೇ ನನ್ನ ಹೆಗ್ಗಳಿಕೆ. ನನ್ನದು ಅಲ್ಪ ಖರ್ಚು; ಅಪಾರ ಕೆಲಸ ; ಎಲ್ಲರ ಮನೆಯಲ್ಲೂ ವಾಸ ! ನನ್ನ ಬೆಳಕಿನಲ್ಲಿ ಓದಿದವರು ಇಂದು ದೇಶದ ಮಹಾನ್ ವ್ಯಕ್ತಿಗಳಾಗಿದ್ದಾರೆ. ಅವರು ಇಂದಿಗೂ ನನ್ನನ್ನು ನೆನಪಿಸಿಕೊಳ್ಳುತ್ತಾರೆ, ಅದರಿಂದ ನನ್ನ ಬದುಕು ಸಾರ್ಥಕ. ನಾನೇ ಬಲು ಶ್ರೇಷ್ಠ.

(ಹೀಗೆ ಚಿಮಣಿಯು ತನ್ನ ಪುರಾಣವನ್ನು ಹೇಳುತ್ತಿರುವಂತೆಯೇ ಬೆಳಗಾಗುವುದು. ಸೂರ್ಯನು ಬಾನಿಗೇರುವನು. ಆತನ ಪ್ರಖರವಾದ ಬೆಳಕಿನಲ್ಲಿ ಎಲ್ಲ ದೀಪಗಳು ಮಂಕಾಗಿ ಕಾಣುವವು. ಅವು ನಾಚಿಕೆಯಿಂದ ತಲೆ ತಗ್ಗಿಸುವವು. ಈ ದೀಪಗಳ ಕಡೆಗೆ ವ್ಯಂಗ್ಯ ನಗೆ ನಗುತ್ತ ಸೂರ್ಯನು ಹೀಗೆ ನುಡಿಯುವನು.)



**ಸೂರ್ಯ :** ಏಕೆ, ಸುಮ್ಮನಾಗಿಬಿಟ್ಟಿರಿ ? ಮುಗಿಯಿತೆ ನಿಮ್ಮ 'ನಾನೇ ಮಿಗಿಲು' ಎಂಬ ಮೇಲಾಟ. ಬಂಧುಗಳೇ, ನಾನೂ ನಿಮ್ಮ ಹಾಗೆ ಜನರಿಗೆ ಬೆಳಕು ಕೊಡುವವನು. ನಾನು ಇಡೀ ಸೃಷ್ಟಿಯನ್ನೇ ಬೆಳಗುತ್ತೇನೆ. ನನ್ನ ಪ್ರಕಾಶ ಕಿರಣಗಳಿಂದ ಜನರು ವಿದ್ಯುತ್ ನಿರ್ಮಿಸುತ್ತಾರೆ. ನಾನು ಸ್ವಯಂ ಪ್ರಕಾಶಕನೂ ಅಹುದು, ಶಕ್ತಿಯ ಮೂಲವೂ ಅಹುದು. ಹೀಗಿರುವಾಗ ನಾನೇ ಶ್ರೇಷ್ಠನೆಂದು ಎಂದಾದರೂ ಹೇಳಿಕೊಂಡಿದ್ದೇನೆಯೇ ? 'ನಮ್ಮನ್ನು ನಾವೇ ಹೊಗಳುವುದಕ್ಕಿಂತ ಇತರರು ನಮ್ಮನ್ನು ಹೊಗಳುವಂತಾಗಬೇಕು' ಆ ಗುಣವನ್ನು ನೀವೂ ಬೆಳೆಸಿಕೊಳ್ಳಿರಿ.

ಮಿತ್ರರೇ, ನಾನಿಲ್ಲದಾಗ ಈ ಸೃಷ್ಟಿಗೆ ನನ್ನ ಕೊರತೆಯನ್ನು ತುಂಬುವವರು ನೀವು. ನಿಮ್ಮನ್ನು ಕೀಳೆಂದು ನಾನು ಎಂದಿಗೂ ಭಾವಿಸಿಲ್ಲ. ಬಡವ-ಬಲ್ಲಿದ ; ಮೇಲು-ಕೀಳು ಎಂಬ ಭಾವನೆ ತಾಳದೇ ಎಲ್ಲರ ಮನೆ ಮನೆಗಳನ್ನು ನೀವು ಬೆಳಗುತ್ತೀರಿ. ನೀವು ಮಾನವರ ಹಿತೈಷಿಗಳು. ಈಗ ನೀವು ಒಬ್ಬರಿಗೊಬ್ಬರು ಅಸೂಯೆ ಪಡದೆ ಸ್ನೇಹ-ಸೌಜನ್ಯದಿಂದ ವರ್ತಿಸುವುದು ಮುಖ್ಯ. ಅದರಲ್ಲೇ ಇದೆ ಸೌಖ್ಯ !

(ಸೂರ್ಯನು ಹೇಳಿದ ಮಾತುಗಳಿಂದ ಎಲ್ಲ ದೀಪಗಳು ಪ್ರಭಾವಿತವಾಗಿ ಸ್ನೇಹದಿಂದ ಬಾಳತೊಡಗಿದವು.)

### ಶಬ್ದಗಳ ಅರ್ಥ

ಮುದ-ಆನಂದ ; ಹಸುಳೆ - ಮಗು ; ಅತಿರಥಿ - ಶೂರ ; ಸತ್ಯಾಗ್ರಹ - ಹೋರಾಟ

# ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಯಾವ ದೀಪದ ಬೆಳಕು ಝುಗ-ಝುಗಿಸುತ್ತದೆ ?

ಆ) ಮೇಣಬತ್ತಿಯು ಎಲ್ಲಿಯವರೆಗೆ ಬೆಳಕು ಕೊಡುವುದು ?

ಇ) ವಿದ್ಯುತ್ ದೀಪ ಯಾವಾಗ ಕೈಕೊಡುತ್ತದೆ ?

ಈ) ಯಾವ ದೀಪವು ಬಡವರ ಬಂಧುವಾಗಿದೆ ?

ಉ) ನಾವು ಯಾವ ಗುಣವನ್ನು ಬೆಳೆಸಿಕೊಳ್ಳಬೇಕೆಂದು ಸೂರ್ಯನು ಹೇಳುವನು ?

ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿ ವಾಕ್ಯ ಪೂರ್ಣಗೊಳಿಸಿರಿ.

ಅ) ಮೇಣಬತ್ತಿಗಳು ........... ಸಾಲಾಗಿ ನಿಂತಿದ್ದವು.

ಆ) ......... ಬಂದಾಗ ಅಹಂಕಾರ ಬಂದಂತೆ ಅರಚಿಕೊಳ್ಳಬೇಡ.

ಇ) 'ಅಲ್ಪರ ಸಂಗ .......... ಭಂಗ.'

ಈ) ನಾನು ಏಕಾಗ್ರತೆಯಿಂದ .......... ಸೇವೆ ಮಾಡುವೆನು.

ಉ) ನಾನು ಸಮಯ ಬಂದಾಗ ................

ಪ್ರಶ್ನೆ ೩) ಹೊಂದಿಸಿ ಬರೆಯಿರಿ.

| | |
|---|---|
| ಅ) ವಿದ್ಯುತ್ ದೀಪ | ೧) ಅರಗಳಿಗೆಯ ಬದುಕು |
| ಆ) ಬ್ಯಾಟರಿ | ೨) ಸ್ವಯಂ ಪ್ರಕಾಶಿತ |
| ಇ) ಚಿಮಣಿ | ೩) ಝಗ-ಝಗಿಸುವ ಬೆಳಕು |
| ಈ) ಮೇಣಬತ್ತಿ | ೪) ಅಳಿಲು ಸೇವೆ |
| ಉ) ಸೂರ್ಯ | ೫) ದೀನರ ದೀಪ |

ಪ್ರಶ್ನೆ ೪) ಕೆಳಗಿನ ಮಾತುಗಳನ್ನು ಯಾರು-ಯಾರಿಗೆ ಹೇಳಿದರು.

ಅ) ಅಬ್ಬಾ! ಈ ಅಲ್ಪಾಯುಷಿಗಳಿಗೆ ಅದೆಂಥ ಆಲೋಚನೆ ? ಅದೆಂಥ ಅವಿವೇಕ !

____________________

ಆ) ಆಯಿತೇ, ನಿನ್ನ ಮುಖಕ್ಕೆ ಮಂಗಳಾರತಿ.

____________________

ಇ) ನನ್ನ ಮೋಹಕ್ಕೆ ಮಣಿಯದ ಮಾನವರೇ ಇಲ್ಲ.

____________________

ಈ) ನನ್ನ ಬೆಲೆ ಬಲ್ಲವರೇ ಬಲ್ಲರು.

____________________

ಉ) ನಾನು ಇಡೀ ಸೃಷ್ಟಿಯನ್ನೇ ಬೆಳಗುತ್ತೇನೆ.

____________________

ಪ್ರಶ್ನೆ ೫) ಕೆಳಗಿನ ವಾಕ್ಯಗಳಲ್ಲಿಯ ವಿಶೇಷಣ ಗುರುತಿಸಿರಿ.

ಅ) ವಿಜಯನಗರ ಸಾಮ್ರಾಜ್ಯವು ವಿಶಾಲವಾಗಿತ್ತು.

ಆ) ಮಾವಿನ ಹಣ್ಣುಗಳು ಸಿಹಿಯಾಗಿರುತ್ತವೆ.

ಇ) ಕೋಗಿಲೆಯ ಕಂಠ ಮಧುರವಾಗಿದೆ.

ಈ) ಜಿರಾಫೆಯ ಕುತ್ತಿಗೆಯು ಉದ್ದವಾಗಿರುತ್ತದೆ.

ಉ) ವಿಮಲೆಯು ಬಿಳಿಮಲ್ಲಿಗೆ ಮುಡಿದಿದ್ದಳು.

## ಉಪಕ್ರಮ

೧) ನಿಮ್ಮ ಶಾಲೆಯ ವಿಶೇಷ ಸಮಾರಂಭಗಳಲ್ಲಿ ಈ ದೀಪಗಳ ಮೇಲಾಟವನ್ನು ಅಭಿನಯಿಸಿರಿ.

೨) ಈ ಪಾಠದಲ್ಲಿ ಬಂದಿರುವ ಗಾದೆಮಾತುಗಳನ್ನು ಬರೆಯಿರಿ.

ಅ) ____________________

ಆ) ____________________

ಇ) ____________________

## • ನುಡಿಮುತ್ತು •

ಒಳ್ಳೆಯವರ ಜೊತೆ ಇದಷ್ಟು ನಾವು ಒಳ್ಳೆಯವರಾಗುತ್ತೇವೆ.

AVV6J6

ದೀಪದಿಂದ ದೀಪ ಬೆಳಗಲಿ, ಎಲ್ಲರ ಮನ ಅರಳಲಿ

## ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- ಕೃಷ್ಣಾನದಿ – ಆಲಮಟ್ಟಿ, ಅದರಂತೆ ಭೀಮಾನದಿ ☐

  ೧) ಕೋಯನಾ ೨) ಜಾಯಕವಾಡ

  ೩) ಭಾಕ್ರಾನಾಂಗಲ ೪) ಉಜನಿ

- ಗುಂಪಿಗೆ ಸರಿ ಹೊಂದದ ಶಬ್ದ ಯಾವುದು ? ☐

  ೧) ಪಣತಿ ದೀಪ ೨) ಚಿಮಣಿ ದೀಪ

  ೩) ವಿದ್ಯುತ್ ದೀಪ ೪) ಸಮೆ ದೀಪ

# ೧೦. ದೇಶ ಕಟ್ಟೋಣ ಬಾ


ದುಡಿಯುವದರಲ್ಲಿ ಸಂತಸಪಟ್ಟು
ಪಡೆದುದರಲ್ಲಿ ತೃಪ್ತಿಯ ಪಟ್ಟು
ಅದರೊಳು ಉಳಿಸಿ ಪರರಿಗೆ ಕೊಟ್ಟು
ನೆರೆಹೊರೆಯವರಲ್ಲಿ ಪ್ರೀತಿಯನಿಟ್ಟು
ಕಟ್ಟೋಣ ಬಾ, ದೇಶ ಕಟ್ಟೋಣ ಬಾ.

ಸಾಲುಸಾಲಾಗಿ ಗಿಡಮರ ಬೆಳೆಸಿ
ಹಿತಮಿತವಾಗಿ ನೀರನು ಬಳಸಿ
ಲೆಕ್ಕಾಚಾರದಿ ವಿದ್ಯುತ್ ಉರಿಸಿ
ಪರಿಸರದುಳಿವಿಗೆ ಗಮನವ ಹರಿಸಿ
ಕಟ್ಟೋಣ ಬಾ, ದೇಶ ಕಟ್ಟೋಣ ಬಾ.

ಮಾತಾಪಿತರಿಗೆ ಅನುದಿನ ನಮಿಸಿ
ಗುರುಹಿರಿಯರಿಗೆ ಗೌರವ ಸಲ್ಲಿಸಿ
ವೈರ-ಮತ್ಸರ ಮನದಿಂದಳಿಸಿ
ಜನರೊಳು ಒಳ್ಳೆಯ ಹೆಸರನು ಗಳಿಸಿ
ಕಟ್ಟೋಣ ಬಾ, ದೇಶ ಕಟ್ಟೋಣ ಬಾ.

ರಾಷ್ಟ್ರಧ್ವಜವನು ಗಗನಕ್ಕೇರಿಸಿ
ಅಭಿಮಾನದಿ ಎಲ್ಲರೂ ವಂದಿಸಿ
ರಾಷ್ಟ್ರಗೀತೆ ಎಲ್ಲೆಡೆ ಮೊಳಗಿಸಿ
ರಾಷ್ಟ್ರ ರಕ್ಷಣೆಗೆ ತನುಮನ ಅರ್ಪಿಸಿ
ಕಟ್ಟೋಣ ಬಾ, ದೇಶ ಕಟ್ಟೋಣ ಬಾ.

– ಜಯವಂತ ಕಾಡದೇವರ



## ಶಬ್ದಗಳ ಅರ್ಥ

ತೃಪ್ತಿ – ಸಮಾಧಾನ ; ಅಭಿಮಾನ – ಹೆಮ್ಮೆ ; ಅನುದಿನ – ಪ್ರತಿದಿನ, ದಿನಾಲೂ ; ವಂದಿಸು – ನಮಸ್ಕಾರ ಮಾಡು ; ವೈರಿ – ಹಗೆ, ಶತ್ರು ; ಮತ್ಸರ – ಹೊಟ್ಟೆಕಿಚ್ಚು, ದ್ವೇಷ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಯಾವುದರಲ್ಲಿ ಸಂತಸ ಪಡಬೇಕು ?

________________________________

________________________________

ಆ) ವಿದ್ಯುತ್ತನ್ನು ಹೇಗೆ ಉರಿಸಬೇಕು ?

________________________________

________________________________

ಇ) ಅನುದಿನವು ಯಾರಿಗೆ ನಮಿಸಬೇಕು ?

________________________________

________________________________

ಈ) ಮನದಿಂದ ಏನನ್ನು ಅಳಿಸಬೇಕು ?

________________________________

________________________________

ಉ) ರಾಷ್ಟ್ರರಕ್ಷಣೆಗೆ ಯಾವುದನ್ನು ಅರ್ಪಿಸಬೇಕು ?

________________________________

________________________________

ಪ್ರಶ್ನೆ ೨) ಉದಾಹರಣೆಯಲ್ಲಿ ತೋರಿಸಿದಂತೆ ಕೆಳಗಿನ ಶಬ್ದಗಳನ್ನು ಬರೆಯಿರಿ.

ಉದಾ. : ಬೆಳೆಸಿ – ಬೆಳೆಸುವದು

ಉರಿಸಿ – ................., ಹರಿಸಿ – .................,

ವಂದಿಸಿ – ................., ಬಳಸಿ – .................,

ಮೊಳಗಿಸಿ – ................

ಪ್ರಶ್ನೆ ೩) ಪಾಠದಲ್ಲಿ ಬಂದಂತಹ ಜೋಡು ಶಬ್ದಗಳನ್ನು ಬರೆಯಿರಿ.

ಉದಾ. ನೆರೆ – ಹೊರೆ

ಗಿಡ – .................., ಮಾತಾ – ................,

ತನು – ................., ಹಿತ – ....................,

ಗುರು – ................

ಪ್ರಶ್ನೆ ೪) ಕೆಳಗಿನ ಪದ್ಯದ ಸಾಲುಗಳನ್ನು ಪೂರ್ಣಗೊಳಿಸಿರಿ.

ರಾಷ್ಟ್ರಧ್ವಜವನು ...............

...............................

...............................

...............................

ಕಟ್ಟೋಣ ಬಾ, ದೇಶ ಕಟ್ಟೋಣ ಬಾ.

ಪ್ರಶ್ನೆ ೫) ಈ ಕವಿತೆಯನ್ನು ಕಂಠಪಾಠ ಮಾಡಿರಿ.

## ಉಪಕ್ರಮ

೧) ನಿಮ್ಮ ಶಿಕ್ಷಕರ / ಪಾಲಕರ ಸಹಾಯದಿಂದ ದೇಶಪ್ರೇಮದ ಸುವಿಚಾರಗಳನ್ನು ಸಂಗ್ರಹಿಸಿ ಬರೆಯಿರಿ.

## • ನುಡಿಮುತ್ತು •

ಜನರನ್ನು ಒಲಿಸುವುದು ಸುಲಭ.

ಆದರೆ ಒಳ್ಳೆಯತನವನ್ನು ಗಳಿಸುವುದು ಕಷ್ಟ.

ದೇಶಸೇವೆಯೇ ಈಶಸೇವೆ

AH54KT

## ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- ರಾಷ್ಟ್ರಧ್ವಜದಲ್ಲಿ ಯಾವ ಚಕ್ರವಿದೆ ? ☐


  ೧) ಪರಮವೀರ ಚಕ್ರ ೨) ಅಶೋಕ ಚಕ್ರ

  ೩) ವೀರ ಚಕ್ರ ೪) ಯಾವುದು ಇಲ್ಲ

- ಸೀತೆ ಬಹಳ ಜಾಣೆ – ಈ ವಾಕ್ಯದಲ್ಲಿಯ ವಿಶೇಷಣ ಗುರುತಿಸಿ. ☐

  ೧) ಜಾಣೆ ೨) ಯಾವುದು ಇಲ್ಲ

  ೩) ಸೀತೆ ೪) ಬಹಳ



## ೧೧. ಅತಿ ಆಸೆ ಗತಿಗೇಡು



ಬಹಳ ವರ್ಷಗಳ ಹಿಂದೆ ವಿಕ್ರಮಾದಿತ್ಯ ಎಂಬ ಅರಸನಿದ್ದನು. ಅವನು ಬಹಳ ಪ್ರಾಮಾಣಿಕ, ನ್ಯಾಯಪ್ರಿಯ ಮತ್ತು ಪ್ರಜೆಗಳ ಶುಭಚಿಂತಕನಾಗಿದ್ದನು. ಅವನಿಗೆ ಯಾವಾಗಲೂ ತನ್ನ ಪ್ರಜೆಗಳ ಸುಖ-ದು:ಖಗಳ ಬಗೆಗೆ ಚಿಂತೆ ಇರುತ್ತಿತ್ತು. ತನ್ನ ಸಾಮ್ರಾಜ್ಯದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯ ಹಿತವನ್ನೇ ಆತ ಬಯಸುತ್ತಿದ್ದನು.

ಅರಸನು ಪ್ರಾಮಾಣಿಕನೂ ಚತುರನೂ ಆಗಿದ್ದನು. ತನ್ನ ಮಂತ್ರಿಯೊಡನೆ ವೇಷ ಬದಲಿಸಿ ಪಟ್ಟಣದಲ್ಲಿ ದಿನಾಲು ರಾತ್ರಿ ತಿರುಗಾಡಲು ಹೋಗುತ್ತಿದ್ದನು.

ಒಂದು ರಾತ್ರಿ ಒಂದು ಗುಡಿಸಲಲ್ಲಿ ವ್ಯಕ್ತಿಯೊಬ್ಬ ನರಳುವ ಶಬ್ದ ಕೇಳಿಸಿತು. ಇಬ್ಬರೂ ಗುಡಿಸಲಿನೊಳಗೆ ಹೋದರು. ಒಬ್ಬ ಹುಡುಗನು ಅವರನ್ನು ನೋಡುತ್ತಲೇ ಎದ್ದು ನಿಂತನು.

ಆಗ ಅರಸನು - 'ನಿನಗೇನು ತೊಂದರೆಯಾಗಿದೆ?' ಎಂದು ಕೇಳಿದನು. ಅದಕ್ಕೆ ಹುಡುಗನು, 'ಇವರು ನನ್ನ ತಂದೆ. ದಿನಾಲು ಕಷ್ಟಪಟ್ಟು ದುಡಿಯುತ್ತಾರೆ. ಅದರಿಂದಲೇ ನಮ್ಮ ಹೊಟ್ಟೆ ತುಂಬುತ್ತದೆ. ಈಗ ಇವರು ಒಂದು ವಾರದಿಂದ ಜ್ವರದಿಂದ ಬಳಲುತ್ತಿದ್ದಾರೆ. ಇಂದು ಮನೆಯಲ್ಲಿ ತಿನ್ನಲು, ಉಣ್ಣಲು ಏನೂ ಇಲ್ಲ ಮತ್ತು ಚಿಕಿತ್ಸೆಗಾಗಿ ದುಡ್ಡೂ ಇಲ್ಲ' ಎಂದು ಉತ್ತರಿಸಿದನು.

ಕೂಡಲೇ ಅರಸನು ಕೆಲವು ರೂಪಾಯಿಗಳನ್ನು ಹುಡುಗನ ಕೈಯಲ್ಲಿಟ್ಟು 'ಮಗೂ, ಇವುಗಳಿಂದ ಔಷಧ, ತಿನ್ನಲು, ಉಣ್ಣಲು ಸಾಮಾನು ಕೊಂಡುಕೋ' ಎಂದು ಹೇಳುತ್ತಾ ಗುಡಸಲಿನಿಂದ ಹೊರಗೆ ಬಂದನು. ಅರಸನು ಮಂತ್ರಿಗೆ 'ನಾಳೆ ನಾವು ಇದೆ ಗುಡಿಸಲಿಗೆ ಬಂದು ಸ್ವರ್ಣ ನಾಣ್ಯಗಳ ಚೀಲವನ್ನು ಕೊಡೋಣ. ಇವರ ಬಡತನವಾದರೂ ದೂರವಾಗಲಿ' ಎಂದು ನುಡಿದನು.

ಅರಸನು ಮಂತ್ರಿಗೆ ಹೇಳಿದ ಈ ಮಾತನ್ನು ನೆರೆಯವನು ಕೇಳಿಸಿಕೊಂಡನು. ಅವನು ಬಹಳೇ ಆಸೆಬುರುಕನಾಗಿದ್ದನು. ಸ್ವರ್ಣನಾಣ್ಯಗಳ ಚೀಲದ ಮಾತು ಅವನ ಬಾಯಲ್ಲಿ ನೀರೂರಿಸಿತು. ಅದಕ್ಕಾಗಿ ಆ ಸ್ವರ್ಣನಾಣ್ಯಗಳ ಚೀಲ ಪಡೆಯುವುದು ಹೇಗೆ ? ಎಂದು ವಿಚಾರ ಮಾಡಿದನು.

ಮರುದಿನ ಮುಂಜಾನೆ ಆ ಆಸೆಬುರುಕನು ಗುಡಿಸಲಿನಲ್ಲಿರುವ ಮುದುಕನ ಹತ್ತಿರ ಬಂದು 'ಅಜ್ಜ, ಈ ಗುಡಿಸಲನ್ನು ನನಗೆ ಮಾರಿದರೆ ನಿನಗೆ ಎರಡು ಸಾವಿರ ರೂಪಾಯಿಗಳನ್ನು ಕೊಡುವೆ' ಎಂದನು. ಅದಕ್ಕೆ ಮುದುಕನು ಏನೂ ಮಾತಾಡಲಿಲ್ಲ, ಆದರೆ ಆತನ ಮಗನು ಬುದ್ಧಿವಂತನಾಗಿದ್ದನು. ಅವನು ದರವನ್ನು ಹೆಚ್ಚಿಸುತ್ತಾ ನಡೆದನು.

ಕೊನೆಗೆ ದರ ಹೆಚ್ಚುತ್ತ ಹೆಚ್ಚುತ್ತ ೧೦ ಸಾವಿರ ರೂಪಾಯಿಗಳಿಗೆ ವ್ಯವಹಾರ ಮುಗಿಯಿತು. ಆಸೆಬುರುಕನು ಅವನಿಗೆ ೧೦ ಸಾವಿರ ರೂಪಾಯಿಗಳನ್ನು ಕೊಟ್ಟು ಗುಡಿಸಲನ್ನು ತನ್ನ ವಶಕ್ಕೆ ತೆಗೆದುಕೊಂಡನು. ರಾತ್ರಿ ಅರಸನು ಬರುವ ದಾರಿಯನ್ನೇ ನೋಡತೊಡಗಿದನು.

ರಾಜಾ ವಿಕ್ರಮಾದಿತ್ಯನಿಗೆ ಈ ಘಟನೆಯ ಸುದ್ದಿ ಗುಪ್ತಚಾರರಿಂದ ತಿಳಿಯಿತು. ರಾತ್ರಿಯಾಯಿತು. ಅರಸ ಮತ್ತು ಮಂತ್ರಿ ಅತ್ತ ಬಂದರು. ಅರಸನು ಮಂತ್ರಿಗೆ 'ಸ್ವರ್ಣ ನಾಣ್ಯಗಳ ಚೀಲ ತಂದಿದ್ದೀರಾ?' ಎಂದು ಕೇಳಿದನು.

ಆಗ ಮಂತ್ರಿಯು 'ಮಹಾರಾಜರೇ, ಈ ಅಜ್ಜನಿಗೆ ೧೦ ಸಾವಿರ ರೂಪಾಯಿಗಳು ಮುಂಜಾನೆಯೆ ದೊರೆತಿವೆ. ಅವನ ಬಡತನ ದೂರಾಗಲು ಮತ್ತು ಜೀವನ ಸಾಗಿಸಿಕೊಂಡು ಹೋಗಲು ಅಷ್ಟು ಸಾಕು' ಎಂದು ಹೇಳಿದನು.

ಅರಸನು ಹೌದೆಂದು ಮುಂದೆ ನಡೆದನು.

ಈ ಮಾತು ಕೇಳಿ ಆಸೆಬುರುಕನಿಗೆ ಕೈ ಕೈ ಹಿಚುಕಿಕೊಳ್ಳುವಂತಾಯಿತು.

– ಮ. ನಿ. ತೋಳನೂರ

## ಶಬ್ದಗಳ ಅರ್ಥ

ಪ್ರಾಮಾಣಿಕ – ನಂಬಲರ್ಹವಾದ ; ಶುಭಚಿಂತಕ – ಒಳ್ಳೆಯದನ್ನು ಬಯಸುವವ ; ಚತುರ – ಬುದ್ಧಿವಂತ ; ಸ್ವರ್ಣನಾಣ್ಯ – ಬಂಗಾರದ ನಾಣ್ಯ ; ಗುಪ್ತಚಾರ – ಗುಟ್ಟಾಗಿ ಸುದ್ದಿ ಮುಟ್ಟಿಸುವವ; ಚಿಕಿತ್ಸೆ – ಉಪಚಾರ

## ಪಡೆನುಡಿ

ಬಾಯಲ್ಲಿ ನೀರೂರು – ಅತಿಯಾಸೆಯಾಗು ; ಕೈ ಕೈ ಹಿಚುಕಿಕೊಳ್ಳು – ಪಶ್ಚಾತ್ತಾಪ ಪಡು

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ವಿಕ್ರಮಾದಿತ್ಯ ಅರಸನು ಯಾರ ಹಿತವನ್ನು ಬಯಸುತ್ತಿದ್ದನು ?

_______________

_______________

ಆ) ಅರಸನು ರಾತ್ರಿ ವೇಷ ಬದಲಿಸಿ ಎಲ್ಲಿಗೆ ಹೋಗುತ್ತಿದ್ದನು ?

_______________

_______________

ಇ) ನೆರೆಮನೆಯವನ ಬಾಯಲ್ಲಿ ಏಕೆ ನೀರೂರಿತು ?

ಈ) ರಾಜಾ ವಿಕ್ರಮಾದಿತ್ಯನಿಗೆ ಸುದ್ದಿಯನ್ನು ತಿಳಿಸಿದವರಾರು ?

ಉ) ಮಂತ್ರಿಯು ರಾಜನಿಗೆ ಏನೆಂದು ಹೇಳಿದನು ?

ಪ್ರಶ್ನೆ ೨) ಕೆಳಗಿನ ಮಾತುಗಳನ್ನು ಯಾರು, ಯಾರಿಗೆ ಹೇಳಿದರು.

ಅ) 'ನಿನಗೇನು ತೊಂದರೆಯಾಗಿದೆ ?'

ಆ) 'ಇವರ ಬಡತನವಾದರೂ ದೂರಾಗಲಿ'

ಇ) 'ಅಜ್ಜ, ಈ ಗುಡಿಸಲನ್ನು ನನಗೆ ಮಾರಿದರೆ ನಿನಗೆ ಎರಡು ಸಾವಿರ ರೂಪಾಯಿಗಳನ್ನು ಕೊಡುವೆ' ಎಂದನು.

ಈ) 'ಸ್ವರ್ಣ ನಾಣ್ಯಗಳ ಚೀಲ ತಂದಿದ್ದೀರಾ ?'

ಪ್ರಶ್ನೆ ೩) ಕೆಳಗಿನ ಶಬ್ದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.

ಬಯಸು, ಬಳಲು, ಆಸೆಬುರುಕ, ಗುಪ್ತಚಾರ

ಪ್ರಶ್ನೆ ೪) ಅಕ್ಷರಗಳನ್ನು ಸರಿಪಡಿಸಿ ಯೋಗ್ಯ ಶಬ್ದ ರಚಿಸಿರಿ.

ಅ) ನ ಳು ವ ರ - ....................

ಆ) ಕ ಪ್ರಾ ಣಿ ಮಾ - ................

ಇ) ಸೆ ಬು ಆ ಕ ರು - ...............

ಈ) ರ ವ್ಯ ಹಾ ವ - ..................

ಉ) ಚಾ ಗು ರ ಪ್ತ - ....................

## ಉಪಕ್ರಮ



ಈ ಮೇಲಿನ ಚಿತ್ರಕಥೆಯನ್ನು ಶಿಕ್ಷಕರಿಂದ / ಪಾಲಕರಿಂದ ತಿಳಿದುಕೊಳ್ಳಿರಿ.

### • ನುಡಿಮುತ್ತು •

ನಿರಾಸೆ ಕೆಲವರನ್ನು ಮಾತ್ರ ಹಾಳು ಮಾಡಿದರೆ,
ಅತಿ ಆಸೆ ಅನೇಕರನ್ನು ಹಾಳು ಮಾಡುತ್ತದೆ.

ಆಸೆಯು ದು:ಖಕ್ಕೆ ಮೂಲ

AHDZNG

## ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- 'ಆಸೆಯು ದು:ಖಕ್ಕೆ ಮೂಲ' ಎಂದು ಹೇಳಿದವರು ಯಾರು ? ☐

  ೧) ಬಸವಣ್ಣ　　೨) ಗೌತಮಬುದ್ಧ

  ೩) ಗುರುನಾನಕ　　೪) ಮಹಮ್ಮದ ಪೈಗಂಬರ

- ಕೆಳಗಿನವುಗಳಲ್ಲಿಯ ಕ್ರಿಯಾಪದದ ಶಬ್ದ ಗುರುತಿಸಿರಿ. ☐

  ೧) ಬರುತ್ತದೆ　　೨) ಇಂಪಾಗಿ

  ೩) ನಾನು　　೪) ಗೌರಿ

### ಗಮನಿಸಿರಿ

**ಕ್ರಿಯಾಪದ :** ಕ್ರಿಯೆಯನ್ನು ಸೂಚಿಸುವ ಪದಗಳಿಗೆ ಕ್ರಿಯಾಪದ ಎನ್ನುವರು.
ಹೋಗು, ಹಾಡು, ಕುಣಿ, ಮಾಡು ಇತ್ಯಾದಿ

ಉದಾ. : ೧) ಕುಮಾರನು ಶಾಲೆಗೆ ಹೋಗುತ್ತಾನೆ.


೨) ಶಾರದೆ ಇಂಪಾಗಿ ಹಾಡು ಹಾಡುತ್ತಾಳೆ.

೩) ನವಿಲು ಸುಂದರವಾಗಿ ಕುಣಿಯುತ್ತದೆ.

೪) ಗಿರಿಜೆಯು ಕಾಗದದಿಂದ ವಿಮಾನು ಮಾಡಿದಳು.



# ೧೨. ಚದುರಂಗ



ಚದುರಂಗ ಎಂದರೆ ಚೆಸ್. ಇದನ್ನು ಎರಡು ಕಾಲ್ಪನಿಕ ಸೈನ್ಯಗಳ ನಡುವೆ ನಡೆಯುವ ಯುದ್ಧದ ಆಟ ಎಂದು ಕರೆಯುವರು. ಚದುರಂಗದ ಮಣೆಯೇ ಒಂದು ಯುದ್ಧರಂಗ. ಅದರ ಕಾಯಿಗಳೇ ಸೈನ್ಯ. ಆ ಸೈನ್ಯದಲ್ಲಿ ರಾಜ, ಮಂತ್ರಿ, ಒಂಟೆ, ಕುದುರೆ, ಆನೆ ಮತ್ತು ಪದಾತಿಗಳು ಇರುತ್ತವೆ. ಈ ಕಾಲ್ಪನಿಕ ಯುದ್ಧವನ್ನು ನಡೆಸುವವರು ಇಬ್ಬರು ಆಟಗಾರರು. ಯಾವ ಸೈನ್ಯದ ರಾಜನು ಸೋಲುವನೋ ಆ ರಾಜನ ಕಡೆಯ ಆಟಗಾರ ಸೋತಂತೆ. ಇದು ಚದುರಂಗದ ಸ್ವರೂಪ.

ಚದುರಂಗ ಎಂದರೆ ನಾಲ್ಕು ಅಂಗಗಳು. ಅಂದರೆ ಸೈನ್ಯದ ನಾಲ್ಕು ಅಂಗಗಳಾದ ಒಂಟೆ, ಕುದುರೆ, ಆನೆ ಮತ್ತು ಪದಾತಿಗಳು. ಈ ಆಟವನ್ನು ಆಡಲು ಒಂದು ಹಾಸಲು ಬೇಕು. ಇದರಲ್ಲಿ ಉದ್ದವಾಗಿ ಎಂಟು ಮತ್ತು ಅಡ್ಡವಾಗಿ ಎಂಟು ಹೀಗೆ ಅರವತ್ತಾನ್ಲ್ಕು ಮನೆಗಳಿರುತ್ತವೆ. ಸರತಿಯಂತೆ ಒಂದು ಕಪ್ಪು ಮತ್ತು ಒಂದು ಬಿಳಿ ಮನೆಗಳು ಇರುತ್ತವೆ. ಬಿಳಿ ಕಾಯಿಗಳನ್ನು ಆಯ್ದುಕೊಂಡವನು ಆಟವನ್ನು ಪ್ರಾರಂಭಿಸಬೇಕು. ಆಟದಲ್ಲಿ ಪ್ರತಿಯೊಬ್ಬನ ಬಳಿ ಹದಿನಾರು ಕಾಯಿಗಳು ಇರುತ್ತವೆ. ಒಂದು ರಾಜ, ಒಂದು ಮಂತ್ರಿ, ಎರಡು ಒಂಟೆಗಳು, ಎರಡು ಕುದುರೆ, ಎರಡು ಆನೆಗಳು ಮತ್ತು ಎಂಟು ಪದಾತಿಗಳು ಇರುತ್ತವೆ.

ಕಾಯಿಗಳಲ್ಲೆಲ್ಲ ರಾಜನ ಪಾತ್ರವು ಅತ್ಯಂತ ಮುಖ್ಯವಾದುದು. ರಾಜನು ತಾನಿರುವ ಮನೆಯ ಸುತ್ತ-ಮುತ್ತ ಯಾವ ಮನೆಗೆ ಬೇಕಾದರೂ ಹೋಗಬಹುದು. ಆದರೆ ಒಂದು ಬಾರಿ ಒಂದು ಮನೆಗಿಂತ ಹೆಚ್ಚು ಹೋಗಲು ಬರುವಂತಿಲ್ಲ.

ರಾಜನ ನಂತರ ಪ್ರಮುಖ ಸ್ಥಾನವು ಮಂತ್ರಿಯದು. ಆಟದಲ್ಲಿ ಇದು ಅತ್ಯಂತ ಬಲಶಾಲಿಯಾದುದು. ಹಾಸಲಿನಲ್ಲಿ ಮಂತ್ರಿ ಇದ್ದನೆಂದರೆ ಆ ಆಟಗಾರನಿಗೆ ಸಾಕಷ್ಟು ಬಲವಿದ್ದಂತೆ. ಉದ್ದಕೆ, ಅಗಲಕ್ಕೆ, ಮೇಲಕ್ಕೆ, ಕೆಳಕ್ಕೆ ಯಾವುದೇ ಮೂಲೆಗೆ ಹೋಗಬಹುದು. ಎಷ್ಟು ಮನೆಗಳನ್ನಾದರೂ ದಾಟಿ ಹೋಗಬಹುದು. ಹಾಗೆ ಹೋಗುವಾಗ ಮಧ್ಯ ತನ್ನ ಯಾವುದೇ ಕಾಯಿ ಇದ್ದರೆ ಅಂಥ

ಸಂದರ್ಭದಲ್ಲಿ ಮಂತ್ರಿ ಅದರ ಹಿಂದಿನ ಮನೆಯವರೆಗೆ ಮಾತ್ರ ಹೋಗಬಲ್ಲನು. ಒಂಟೆಗಳು ಕೇವಲ ಮೂಲೆಯಿಂದ ಮೂಲೆಗೆ ಚಲಿಸುತ್ತವೆ. ಮಧ್ಯ ಕಾಯಿಗಳು ಅಡ್ಡ ಬರದಿದ್ದರೆ ಬೇಕಾದಷ್ಟು ದೂರ ಚಲಿಸಬಲ್ಲದು. ಆನೆಯು ತಾನಿರುವ ಮನೆಯಿಂದ ಉದ್ದವಾಗಿ ಅಥವಾ ಅಡ್ಡವಾಗಿ ಚಲಿಸುತ್ತದೆ.

ಚದುರಂಗದ ಆಟದಲ್ಲಿ ವಿಶಿಷ್ಟ ಚಲನ ಶಕ್ತಿಯನ್ನು ಹೊಂದಿರುವ ಕಾಯಿಗಳು ಎಂದರೆ ಕುದುರೆಗಳು. ಇವು ತಾವಿರುವ ಮನೆಯಿಂದ ನೇರವಾಗಿ ಎರಡು ಮತ್ತು ಪಕ್ಕಕ್ಕೆ ಒಂದು ಹೀಗೆ ಮೂರು ಮನೆ ದಾಟಬಲ್ಲವು. ತನ್ನ ಸುತ್ತ-ಮುತ್ತ ಯಾವ ದಿಕ್ಕಿನಲ್ಲಾದರೂ ಚಲಿಸಬಹುದು.

ಪ್ರತಿಯೊಂದು ಗುಂಪಿನಲ್ಲಿ ಎಂಟು ಪದಾತಿಗಳು ಇರುತ್ತವೆ. ಪದಾತಿ ಎಂದರೆ ಸೈನಿಕರು. ಒಂದು ಪದಾತಿ ತನ್ನ ಮುಂದಿನ ಖಾಲಿ ಇರುವ ಒಂದು ಮನೆಗೆ ಮಾತ್ರ ಚಲಿಸಬಲ್ಲದು. ಎದುರು ಪಂಗಡದ ಕಾಯಿಗಳನ್ನು ಉರುಳಿಸಲು ಒಂದು ಮನೆ ಪಕ್ಕದ ಮೂಲೆಗೆ ಚಲಿಸಬಲ್ಲದು. ಒಬ್ಬ ಆಟಗಾರನ ಪದಾತಿ ಚಲಿಸುತ್ತ ಎದುರಾಳಿ ಆಟಗಾರನ ಮೊದಲ ಸಾಲಿನ ಮನೆಗೆ ಹೋಗಿ ಕುಳಿತರೆ, ಅದರ ಬದಲು ಮಂತ್ರಿಯನ್ನೊ ಅಥವಾ ಇನ್ನಾವುದೊ ಬಲವನ್ನೊ ಅಂಥ ಆಟಗಾರನು ಪಡೆದುಕೊಳ್ಳುವನು.

ಶತ್ರು ರಾಜನಿಗೆ ಅಪಾಯವನ್ನು ತಂದೊಡ್ಡಿದ ಸಂದರ್ಭದಲ್ಲಿ ಅದನ್ನು ಸೂಚಿಸಲು ಚೆಕ್ (ತಡೆ ಬಂಧನ) ಎಂದು ಹೇಳಬೇಕು. ಆಗ ಎದುರಾಳಿ ತನ್ನ ಎಲ್ಲ ಉಪಾಯಗಳನ್ನೂ ಕೂಟ ರಚನೆಯ ಆಲೋಚನೆಗಳನ್ನು ಬದಿಗಿಟ್ಟು ತನ್ನ ರಾಜನನ್ನು ಉಳಿಸಿಕೊಳ್ಳಬೇಕು. ಅಂಥ ಸಂದರ್ಭದಲ್ಲಿ ತನ್ನ ರಾಜನನ್ನು ಬದಿಗೆ ಸರಿಸಿಯಾಗಲಿ ಅಥವಾ ಮಾರ್ಗ ಮಧ್ಯದಲ್ಲಿ ತಡೆಯನ್ನು ನಿರ್ಮಿಸಿಯಾಗಲಿ ತನ್ನ ರಾಜನನ್ನು ಉಳಿಸಿಕೊಳ್ಳಬೇಕು.

ಈ ರೀತಿಯಾಗಿ ಚದುರಂಗದಾಟವು ಬುದ್ಧಿಗೆ ಚಾಲನೆ ನೀಡುವ ಆಟವಾಗಿದೆ. ಮಕ್ಕಳ ಮನಸ್ಸಿಗೆ ಮುದ ನೀಡುತ್ತದೆ. ಇದರಿಂದ ಮಕ್ಕಳ ಆಲೋಚನಾಶಕ್ತಿ ವೃದ್ಧಿಯಾಗಿ ಅದರಲ್ಲಿ ಜ್ಞಾನ ರಚನೆಯ ವಿಧಾನ ನಿರ್ಮಾಣವಾಗುತ್ತದೆ. ಇದೊಂದು ಒಳಾಂಗಣ ಆಟ (ಇಂಡೋರ ಗೇಮ).

– ನಾರಾಯಣ ಶಾಸ್ತ್ರಿ

## ಶಬ್ದಗಳ ಅರ್ಥ

ಅಂಗ – ಭಾಗ ; ಹಾಸಲು – ಆಟದ ಮಣೆ ; ಸರತಿ – ಪಾಳಿ ; ಮುದ – ಆನಂದ; ವೃದ್ಧಿ – ಬೆಳವಣಿಗೆ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಚದುರಂಗ ಎಂದರೇನು ?

____________________

____________________

ಆ) ಚದುರಂಗದ ನಾಲ್ಕು ಅಂಗಗಳು ಯಾವವು ?

____________________

____________________

ಇ) ಹಾಸಲಿನಲ್ಲಿ ಮಂತ್ರಿ ಯಾವ ರೀತಿ ಚಲಿಸುತ್ತಾನೆ ?

______________________________

______________________________

ಈ) ಚದುರಂಗದಲ್ಲಿ ಪದಾತಿಯ ಪಾತ್ರವೇನು ?

______________________________

______________________________

ಉ) ಎದುರಾಳಿ ಚೆಕ್ ಎಂದಾಗ ಆಟಗಾರನು ತನ್ನ ರಾಜನನ್ನು ಯಾವ ರೀತಿ ಉಳಿಸಿಕೊಳ್ಳುವನು ?

______________________________

______________________________

ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿರಿ.

ಅ) ಚದುರಂಗದ ಮಣೆಯೇ ಒಂದು ...........

ಆ) ಕಾಯಿಗಳಲ್ಲೆಲ್ಲ........... ಪಾತ್ರವು ಅತ್ಯಂತ ಮಹತ್ವವಾದುದು.

ಇ) ............. ಎಂದರೆ ಸೈನಿಕರು.

ಈ) ಪ್ರತಿಯೊಂದು ಗುಂಪಿನಲ್ಲಿ........... ಪದಾತಿಗಳು ಇರುತ್ತವೆ.

ಉ) ಇದೊಂದು .......... ಆಟ.

ಪ್ರಶ್ನೆ ೩) ಸರಿ, ತಪ್ಪು ಹೇಳಿರಿ. ತಪ್ಪಿದ್ದರೆ ತಿದ್ದಿ ಬರೆಯಿರಿ.

ಅ) ಯಾವ ರಾಜನು ಸೋಲುವನೋ ಆ ಆಟಗಾರನು ಸೋತಂತೆ.

______________________________

ಆ) ಚದುರಂಗದಾಟದ ಹಾಸಲಿನಲ್ಲಿ ನಲವತ್ತಾರು ಮನೆಗಳಿರುತ್ತವೆ.

______________________________

ಇ) ಚದುರಂಗದಾಟದಲ್ಲಿ ವಿಶಿಷ್ಟ ಚಲನ ಶಕ್ತಿಯನ್ನು ಹೊಂದಿರುವ ಕಾಯಿ ಆನೆ.

______________________________

ಈ) ಆನೆಯು ಮೂಲೆಯಿಂದ ಮೂಲೆಗೆ ಚಲಿಸುತ್ತದೆ.

_______________________

ಉ) ಈ ಆಟವು ಮಕ್ಕಳ ಮನಸ್ಸಿಗೆ ಮುದ ನೀಡುತ್ತದೆ.

_______________________

ಪ್ರಶ್ನೆ ೪) ಕೆಳಗಿನ ವಾಕ್ಯಗಳಲ್ಲಿಯ ಕ್ರಿಯಾಪದ ಗುರುತಿಸಿರಿ.

ಅ) ಕನ್ನಡಿ ಲಕ ಲಕ ಹೊಳೆಯುತ್ತದೆ. _______________

ಆ) ಲತಾ ಇಂಪಾಗಿ ಹಾಡಿದಳು. _______________


ಇ) ಬೆಕ್ಕು ಹಾಲು ಕುಡಿಯಿತು. _______________

ಈ) ರೈತನು ಹೊಲದಲ್ಲಿ ರಾಶಿಯನ್ನು ಮಾಡಿದನು. _______________

ಉ) ಎಡಿಸನ್‌ರು ವಿದ್ಯುತ್ತನ್ನು ಶೋಧಿಸಿದರು. _______________

## ಉಪಕ್ರಮ

೧) ಚಿತ್ರದಲ್ಲಿ ತೋರಿಸಿರುವ ಹಾವು-ಏಣಿ ಆಟವನ್ನು ಶಿಕ್ಷಕರಿಂದ/ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ. ಬಿಡುವಿನ ಸಮಯದಲ್ಲಿ ಆಟ ಆಡಿರಿ.



## • ನುಡಿಮುತ್ತು •

ಅನುಭವಕ್ಕಿಂತಲೂ ಹಿರಿದಾದ ಸತ್ಯವಿಲ್ಲ

ಸಮಯಕ್ಕೊದಗುವ ಬುದ್ಧಿ, ನಿಜವಾದ ಬುದ್ಧಿ

AHMVP4

## ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- ಕ್ರೀಡಾಲೋಕದಲ್ಲಿ 'ಭಾರತ ರತ್ನ' ಪ್ರಶಸ್ತಿ ಪಡೆದ ಪ್ರಸಿದ್ಧ ಆಟಗಾರ ಯಾರು ? [ ]

  ೧) ಅಮರ್ತ್ಯಸೇನ  ೨) ಸಚಿನ ತೆಂಡೂಲ್ಕರ

  ೩) ಲಿಯಾಂಡರ ಪೇಸ್  ೪) ಕಪಿಲದೇವ

- 'ಕಿವಿಕಚ್ಚು' ಈ ಪಡೆನುಡಿಯ ಅರ್ಥ ಯಾವುದು ? [ ]

  ೧) ಚಾಡಿ ಹೇಳು  ೨) ಕಿವಿಕಡಿ

  ೩) ಕಿವಿಯಲ್ಲಿ ಹೇಳು  ೪) ಬುದ್ಧಿ ಹೇಳು

### ಗಮನಿಸಿರಿ

**ವಚನಗಳು :** ವ್ಯಕ್ತಿ, ವಸ್ತು ಮೊದಲಾದವುಗಳ ಸಂಖ್ಯೆ ಸೂಚಿಸುವ ಪದಗಳಿಗೆ ವಚನಗಳೆನ್ನುವರು. ವಚನಗಳಲ್ಲಿ ಏಕವಚನ ಮತ್ತು ಬಹುವಚನಗಳೆಂದು ಎರಡು ಪ್ರಕಾರಗಳಿವೆ.

**ಏಕವಚನ :** ಒಂದೇ ವಸ್ತು, ವ್ಯಕ್ತಿ, ಪ್ರಾಣಿ, ಪಕ್ಷಿ, ಸ್ಥಳ ಸೂಚಿಸುವ ಪದಕ್ಕೆ 'ಏಕವಚನ' ಎನ್ನುತ್ತಾರೆ.

ಉದಾ. : ರೈತ, ಕುದುರೆ, ಗುಬ್ಬಿ, ಭೀಮಾನದಿ, ಪಟ್ಟಣ ಇತ್ಯಾದಿ.


**ಬಹುವಚನ :** ಒಂದಕ್ಕಿಂತ ಹೆಚ್ಚು ವಸ್ತು, ವ್ಯಕ್ತಿ, ಪ್ರಾಣಿ, ಪಕ್ಷಿ, ಸ್ಥಳಗಳನ್ನು ಸೂಚಿಸುವ ಪದಗಳಿಗೆ 'ಬಹುವಚನ' ಎನ್ನುವರು.

ಉದಾ. : ಪುಸ್ತಕಗಳು, ಸಂಗಣಕಗಳು, ಜನರು, ಎಮ್ಮೆಗಳು, ಗಿಳಿಗಳು, ಊರುಗಳು ಇತ್ಯಾದಿ.

# ೧೩. ಗೋವಿನ ಹಾಡು ಭಾಗ - ೧

ಸತ್ಯವೇ ಭಗವಂತನೆಂಬ
ಪುಣ್ಯಕೋಟಿಯ ಕಥೆಯಿದು ।।ಪ।।

ಧರಣಿ ಮಂಡಲ ಮಧ್ಯದೊಳಗೆ
ಮೆರೆಯುತಿಹ ಕರ್ಣಾಟ
ದೇಶದೊಳಿರುವ
ಕಾಳಿಂಗನೆಂಬ ಗೊಲ್ಲನ
ಪರಿಯನೆಂತು ಪೇಳ್ವೆನು ।।




ಎಳೆಯ ಮಾವಿನ ಮರದ ಕೆಳಗೆ
ಕೊಳಲನೂದುತ ಗೊಲ್ಲಗೌಡನು
ಬಳಸಿನಿಂದ ತುರುಗಳನ್ನು
ಬಳಿಗೆ ಕರೆದನು ಹರುಷದಿ।।

ಗಂಗೆ ಬಾರೆ ಗೌರಿ ಬಾರೆ
ತುಂಗಭದ್ರೆ ತಾಯಿ ಬಾರೆ
ಪುಣ್ಯಕೋಟಿ ನೀನು ಬಾರೆ
ಎಂದು ಗೊಲ್ಲನು ಕರೆದನು ।।

ಗೊಲ್ಲ ಕರೆದ ದನಿಯ ಕೇಳಿ
ಎಲ್ಲ ಹಸುಗಳು ಬಂದು ನಿಂದು
ಚೆಲ್ಲಿ ಸೂಸಿ ಹಾಲು ಕರೆಯಲು
ಅಲ್ಲಿ ತುಂಬಿತು ಬಿಂದಿಗೆ ।।

ಪುಣ್ಯಕೋಟಿ ಎಂಬ ಹಸುವು
ತನ್ನ ಕಂದನ ನೆನೆದುಕೊಂಡು
ಮುನ್ನ ಹಾಲನು ಕೊಡುವೆನೆನುತ
ಚೆಂದದಿ ತಾ ಬರುತಿರೆ ॥

ಇಂದೆನಗೆ ಆಹಾರ ಸಿಕ್ಕಿತು
ಎಂದು ಬೇಗನೆ ದುಷ್ಟ ವ್ಯಾಘ್ರನು
ಬಂದು ಬಳಸಿ ಅಡ್ಡಗಟ್ಟಿ
ನಿಂದನಾ ಹುಲಿರಾಯನು॥



ಒಂದು ಬಿನ್ನಹ ಹುಲಿಯೇ ಕೇಳು
ಕಂದನಿರುವನು ದೊಡ್ಡಿಯೊಳಗೆ
ಒಂದು ನಿಮಿಷದಿ ಮೊಲೆಯ ಕೊಟ್ಟು
ಬಂದು ಸೇರುವೆ ನಿಲ್ಲಿಗೆ ॥

ಹಸಿದ ವೇಳೆಗೆ ಸಿಕ್ಕಿದೊಡವೆಯ
ವಶವ ಮಾಡದೆ ಬಿಡಲು ನೀನು
ನುಸುಳಿ ಹೋಗುವೆ ಮತ್ತೆ ಬರುವೆಯ
ಹುಸಿಯ ನುಡಿಯುವೆನೆಂದಿತು॥

ಸತ್ಯವೇ ನಮ್ಮ ತಾಯಿ ತಂದೆ
ಸತ್ಯವೇ ನಮ್ಮ ಬಂಧು ಬಳಗ
ಸತ್ಯ ವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು॥

## ಶಬ್ದಗಳ ಅರ್ಥ

ಧರಣಿ – ಭೂಮಿ, ಪೃಥ್ವಿ; ತುರು – ಹಸು ; ವ್ಯಾಘ್ರ – ಹುಲಿ ; ಬಿನ್ನಹ – ಬೇಡಿಕೊಳ್ಳು

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಒಂದೇ ವಾಕ್ಯದಲ್ಲಿ ಉತ್ತರ ಬರೆಯಿರಿ.

ಅ) ಕಾಳಿಂಗನು ಕೊಳಲನ್ನು ಊದಿ ಯಾರನ್ನು ಕರೆದನು ?

______________________________

ಆ) ಬಿಂದಿಗೆ ಹೇಗೆ ತುಂಬಿತು ?

______________________________

ಇ) ವ್ಯಾಘ್ರನು ಎಲ್ಲಿ ವಾಸಿಸುತ್ತಿದ್ದನು ?

______________________________

ಈ) ಪುಣ್ಯಕೋಟಿ ಹಸುವು ಯಾರನ್ನು ನೆನೆಯುತ್ತಿತ್ತು ?

______________________________

ಉ) ಪರಮಾತ್ಮನು ಯಾವ ಮಾತಿಗೆ ಮೆಚ್ಚಲಾರನು ?

______________________________

ಪ್ರಶ್ನೆ ೨) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಕಾಳಿಂಗನು ಹಸುಗಳನ್ನು ಯಾವ ಯಾವ ಹೆಸರುಗಳಿಂದ ಕರೆದನು ?

______________________________

______________________________

ಆ) ವ್ಯಾಘ್ರನು ಅಡ್ಡಗಟ್ಟಿ ಏಕೆ ನಿಂತನು ?

______________________________

______________________________

ಇ) ಪುಣ್ಯಕೋಟಿಯು ಹುಲಿರಾಯನಲ್ಲಿ ಏನೆಂದು ಬೇಡಿಕೊಂಡಿತು ?

______________________________

______________________________

ಪ್ರಶ್ನೆ ೩) ಕೆಳಗಿನ ಪದ್ಯಗಳ ಸಾಲುಗಳನ್ನು ಪೂರ್ಣಗೊಳಿಸಿರಿ.

ಹಸಿದ ವೇಳೆಗೆ ................

................................

................................

.......... ನುಡಿಯುವೆನೆಂದಿತು ||

## ಉಪಕ್ರಮ

೧) ಸತ್ಯಮೇವ ಜಯತೆ – ಈ ಗಾದೆಮಾತಿನ ಮಹತ್ವವನ್ನು ಶಿಕ್ಷಕರಿಂದ / ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.

೨) ಕೆಳಗಿನ ಚಿತ್ರದಲ್ಲಿರುವ ಅಕ್ಷರಗಳಿಂದ ಕಾಡುಪ್ರಾಣಿ ಮತ್ತು ಸಾಕುಪ್ರಾಣಿಗಳನ್ನು ವಿಂಗಡಿಸಿ ಬರೆಯಿರಿ.


**ಸಾಕುಪ್ರಾಣಿಗಳು**

______________
______________

______________
______________

______________
______________

______________
______________




**ಕಾಡುಪ್ರಾಣಿಗಳು**

______________
______________

______________
______________

______________
______________

______________
______________

• ನುಡಿಮುತ್ತು •

ತಾಳ್ಮೆಗೂ ಮಿತಿ ಇದೆ. ಆದರಿಂದಾಚೆಗೆ ಅದು ಸದ್ಗುಣವೆನಿಸದು

ನುಡಿದಂತೆ ನಡೆ

## ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ......................

  ೧) ಸುಖವಿದೆ ೨) ಹಿತವಿಲ್ಲ ೩) ಸುಖವಿಲ್ಲ ೪) ದು:ಖವಿಲ್ಲ

- ಶ್ರೀಕೃಷ್ಣನಿಗೆ ಕರೆಯುವ ಇನ್ನೊಂದು ಹೆಸರು ಯಾವುದು ?

  ೧) ಸುದಾಮ ೨) ಗೋಪಾಲ ೩) ಸಾಂದೀಪ ೪) ಬಲರಾಮ



# ೧೪. ಬಸವಣ್ಣನವರು



ನಮ್ಮ ಭರತಭೂಮಿಯಲ್ಲಿ ಅನೇಕ ಮಹಾಪುರುಷರು ಆಗಿ ಹೋಗಿದ್ದಾರೆ. ಅವರಲ್ಲಿ ಕೆಲವರು ಸಮಾಜ ಸುಧಾರಕರು, ಕೆಲವರು ಧಾರ್ಮಿಕ ಪುರುಷರೆಂದು ಕೀರ್ತಿವಂತರಾಗಿದ್ದಾರೆ. ಇಂತಹ ಮಹಾನ್ ವ್ಯಕ್ತಿಗಳಲ್ಲಿ ಮಾನವ ಜನಾಂಗದ ಉನ್ನತಿಗೆ ಕಾರಣರಾದ ಬಸವಣ್ಣನವರು ಅಗ್ರಗಣ್ಯರಾಗಿದ್ದಾರೆ.

ಹನ್ನೆರಡನೆಯ ಶತಮಾನದ ಮಧ್ಯದಲ್ಲಿ ವಿಜಾಪೂರ ಜಿಲ್ಲೆಯ ಬಾಗೇವಾಡಿಯಲ್ಲಿಯ ಇಂಗಳೇಶ್ವರ ಗ್ರಾಮದಲ್ಲಿ ಬಸವಣ್ಣನವರು ಜನಿಸಿದರು. ಇವರ ತಂದೆ ಮಾದರಸ, ತಾಯಿ ಮಾದಲಾಂಬಿಕೆ.

ಮಲಪ್ರಭಾ, ಕೃಷ್ಣಾನದಿಗಳ ಸಂಗಮದಲ್ಲಿ ಕಪ್ಪಡಿ ಸಂಗಮ ಎಂಬ ಸ್ಥಳವಿದೆ. ಅಲ್ಲಿ ಸಂಗಮೇಶ್ವರ ದೇವಾಲಯವಿದೆ. ಬಸವಣ್ಣನವರು ಚಿಕ್ಕವರಿದ್ದಾಗಲೇ ಅಲ್ಲಿಗೆ ಹೋಗಿ ಸಂಗಮನಾಥನ ಭಕ್ತರಾದರು. ದೇವಾಲಯದಲ್ಲಿಯೇ ಅವರ ವಿದ್ಯಾಭ್ಯಾಸ ಮುಂದುವರೆಯಿತು. ಬಾಲಕ ಬಸವಣ್ಣನವರು ಬಲು ಚುರುಕು ಬುದ್ಧಿಯವರು. ಆದುದರಿಂದ ಓದು-ಬರಹ-ಲೆಕ್ಕ ಪತ್ರಗಳನ್ನು ಅಲ್ಪಾವಧಿಯಲ್ಲಿಯೇ ಕಲಿತು ಎಲ್ಲರ ಮೆಚ್ಚುಗೆ ಗಳಿಸಿದರು. ಅಲ್ಲಿಯ ಜನರಿಗೆ ಬಸವಣ್ಣನವರ ಪವಿತ್ರ ಆಚರಣೆಗಳು ಬಲು ಹಿಡಿಸಿದವು. ಅವರ ಜಾಣ್ಮೆಯೂ, ಕೀರ್ತಿಯೂ ಎಲ್ಲೆಡೆಗೆ ಹಬ್ಬಿದವು.

ಆಗ ಕಲ್ಯಾಣದಲ್ಲಿ ಕಲಚೂರಿ ಮನೆತನದ ಅರಸು ಬಿಜ್ಜಳ ಮಹಾರಾಜರು ರಾಜ್ಯವಾಳುತ್ತಿದ್ದರು. ಬಲದೇವನು ಅವರ ಮಂತ್ರಿಯಾಗಿದ್ದನು. ಬಸವಣ್ಣನವರು ಬಲದೇವನ ಸೋದರಳಿಯ. ಬಲದೇವನು ಬಸವಣ್ಣನವರ ಬುದ್ಧಿಗೆ ಮೆಚ್ಚಿ ತನ್ನ ಮಗಳಾದ ಗಂಗಾಂಬಿಕೆಯನ್ನು ಅವರಿಗೆ ಕೊಟ್ಟು ಮದುವೆ ಮಾಡಿದನು. ಮುಂದೆ ಕೆಲವು ದಿನಗಳಲ್ಲಿಯೇ ಬಲದೇವನು ಕೈಲಾಸವಾಸಿಯಾದನು.

ಬಳಿಕ ಬಿಜ್ಜಳ ಮಹಾರಾಜರು ಬಸವಣ್ಣನವರನ್ನು ತಮ್ಮ ಮುಖ್ಯ ಮಂತ್ರಿಯನ್ನಾಗಿ ನೇಮಿಸಿಕೊಂಡರು. ಮಂತ್ರಿ ಬಸವಣ್ಣನವರು ರಾಜನೀತಿಯ ವಿಷಯಗಳಲ್ಲಿ ನುರಿತವರಾಗಿ ರಾಜನ ಮೆಚ್ಚುಗೆಗೆ ಪಾತ್ರರಾದರು. ಜನಹಿತ ಕಾರ್ಯಗಳನ್ನು ಮಾಡಿ ಪ್ರಜೆಗಳ ಪ್ರೀತಿಯನ್ನು ಗಳಿಸಿದರು. ತಮ್ಮ ತನು-ಮನ-ಧನಗಳನ್ನು ಜನತೆಯ ಉನ್ನತಿಗಾಗಿ ವಿನಿಯೋಗಿಸಿದರು.

ಬಸವಣ್ಣನವರು ಒಬ್ಬ ಧಾರ್ಮಿಕ ಮಹಾಪುರುಷರೆಂದೂ ಹೆಸರುವಾಸಿಯಾದರು. 'ದಯವೇ ಧರ್ಮದ ಮೂಲವಯ್ಯಾ' ಎಂದು ಹೇಳಿದರು. ಧರ್ಮದ ಹೆಸರಿನಲ್ಲಿ ಪ್ರಾಣಿ-ಪಕ್ಷಿಗಳಿಗೆ ಕೊಡುವ ಹಿಂಸೆಯನ್ನು ತಡೆದರು. ಬಡಬಗ್ಗರಿಗೆ, ಅಂಗವಿಕಲರಿಗೆ ದಾನ ಮಾಡಬೇಕೆಂದೂ, ಪಶು-ಪಕ್ಷಿಗಳಲ್ಲಿ ದಯೆ ತೋರಬೇಕೆಂದೂ ಜನರಿಗೆ ತಿಳಿಸಿದರು. 'ದೇವನೊಬ್ಬ ನಾಮ ಹಲವು' - ಎಂದು ಹೇಳಿ, ದೇವನು ಒಬ್ಬನೇ ಆತನನ್ನು ಯಾವ ಹೆಸರಿನಿಂದ ಪೂಜಿಸಿದರು ಒಂದೇ ಎಂದು ಬೋಧಿಸಿದರು. ಎಲ್ಲ ಧರ್ಮದವರಲ್ಲಿ ಐಕ್ಯವನ್ನು ಸ್ಥಾಪಿಸಲು ಪ್ರಯತ್ನಿಸಿದರು. ಸಮಾಜದಲ್ಲಿ ಒಗ್ಗಟ್ಟನ್ನು ಬೆಳೆಸಲು ಮುಂದಾದರು. 'ಕಾಯಕವೇ ಕೈಲಾಸ' ಎಂಬ ವಚನ ಸಾರಿ ದುಡಿಮೆಯ ಮಹತ್ವವನ್ನು ತಿಳಿಸಿದರು. ಪ್ರತಿಯೊಬ್ಬನೂ ದುಡಿಯಬೇಕು. ಸೋಮಾರಿಯಾಗಬಾರದು. ದುಡಿತದ ಹಣದಲ್ಲಿ ಹೆಚ್ಚಾದುದನ್ನು ದಾನ ಮಾಡಬೇಕು. ಮಾನವರೆಲ್ಲರೂ ಸಮಾನರು. ಅವರಲ್ಲಿ ಜಾತಿ-ಭೇದ, ಮೇಲು-ಕೀಳು, ಹೆಣ್ಣು-ಗಂಡು ಎಂಬ ಭೇದ ಸಲ್ಲದು ಎಂದು ಸಾರಿದರು.

ಬಸವಣ್ಣನವರು 'ಅನುಭವ ಮಂಟಪ'ವನ್ನು ಸ್ಥಾಪಿಸಿದರು. ದೂರ-ದೂರ ಪ್ರದೇಶಗಳಿಂದ ಶರಣರು ಬಂದು ಅನುಭವ ಮಂಟಪವನ್ನು ಸೇರಿದರು. ಅಲ್ಲಿ ಧಾರ್ಮಿಕ ಮತ್ತು ಕಾಯಕದ ಮಹತ್ವ, ಸಾಮಾಜಿಕ ಶೋಷಣೆ, ಸಮಾನತಾವಾದ ಮುಂತಾದ ವಿಷಯಗಳ ಮೇಲೆ ಚರ್ಚೆ ನಡೆಯುತ್ತಿತ್ತು. ಬಸವಣ್ಣನವರು ಧಾರ್ಮಿಕ, ಸಾಮಾಜಿಕ ವಿಷಯಗಳ ಕುರಿತು ಸುಲಭ ಕನ್ನಡ ನುಡಿಯಲ್ಲಿ 'ವಚನ'ಗಳನ್ನು ಬರೆದರು. ಈ ವಚನಗಳು ಧಾರ್ಮಿಕ ಸುಧಾರಣೆಗೆ ದಾರಿ ಮಾಡಿಕೊಟ್ಟವು. ಅವರ ವಚನಗಳ ಅಂಕಿತನಾಮ 'ಕೂಡಲ ಸಂಗಮದೇವ' ಎಂದಿದೆ.

ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಕಪ್ಪಡಿ ಸಂಗಮಕ್ಕೆ ಮರಳಿದರು. ಮುಂದೆ ಅಲ್ಲಿಯೇ ಸಂಗಮೇಶ್ವರನಲ್ಲಿ ಐಕ್ಯ ಹೊಂದಿದರು. ಬಸವಣ್ಣನವರು ಗತಿಸಿ ಶತಮಾನಗಳೇ ಕಳೆದರೂ ಅವರ ತತ್ವಗಳು ಅಚ್ಚಳಿಯದೇ ಉಳಿದಿವೆ. ಅವು ಅಮರವಾಗಿವೆ.

## ಶಬ್ದಗಳ ಅರ್ಥ

ಉನ್ನತಿ - ಏಳಿಗೆ ; ಗಣ್ಯ - ಪ್ರಮುಖ ; ಜಾಣ್ಮೆ - ಜಾಣತನ ; ತನು - ಶರೀರ ; ಧನ- ಹಣ ; ವಿನಿಯೋಗಿಸು - ಖರ್ಚು ಮಾಡು ; ನಾಮ - ಹೆಸರು

# ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಬಸವಣ್ಣನವರ ತಂದೆ ತಾಯಿಯರ ಹೆಸರು ಬರೆಯಿರಿ.

______________________________

______________________________

ಆ) ಬಸವಣ್ಣನವರು ಎಲ್ಲಿ ವಿದ್ಯಾಭ್ಯಾಸ ಮಾಡಿದರು ?

______________________________

______________________________

ಇ) ಯಾರ ಜೊತೆಗೆ ಬಸವಣ್ಣನವರ ಮದುವೆ ಆಯಿತು ?

______________________________

______________________________

ಈ) ಬಸವಣ್ಣನವರು ಏನೆಂದು ಬೋಧಿಸಿದರು ?

______________________________

______________________________

ಉ) ಅನುಭವ ಮಂಟಪದಲ್ಲಿ ಯಾವ ಚರ್ಚೆ ನಡೆಯುತ್ತಿತ್ತು ?

______________________________

______________________________

ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿರಿ.

ಅ) ವಿಜಾಪೂರ ಜಿಲ್ಲೆಯ ........... ಬಸವಣ್ಣನವರು ಜನಿಸಿದರು.

ಆ) ಬಲದೇವನು ಅವರ ...........

ಇ) ದಯವೇ .......... ಮೂಲವಯ್ಯ

ಈ) ........... ಅನುಭವ ಮಂಟಪವನ್ನು ಸ್ಥಾಪಿಸಿದರು.

ಪ್ರಶ್ನೆ ೩) ಸರಿ / ತಪ್ಪು ಹೇಳಿರಿ.

ಅ) ತಂದೆ ತಾಯಿಗಳು ಪರಮ ಶಿವಭಕ್ತರಾಗಿದ್ದರು.

ಆ) ಭೀಮಾ-ಕೃಷ್ಣಾ ಸಂಗಮದಲ್ಲಿ ಕಪ್ಪಡಿಸಂಗಮ ಸ್ಥಳವಿದೆ.

ಇ) ಕಲ್ಯಾಣದಲ್ಲಿ ಚಾಲುಕ್ಯ ಮನೆತನದ ಅರಸರು ರಾಜ್ಯವಾಳುತ್ತಿದ್ದರು.

ಈ) ಬಸವಣ್ಣನವರು ಬಲದೇವನ ಸೋದರಳಿಯ ಆಗಿದ್ದರು.

ಉ) ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಕಪ್ಪಡಿ ಸಂಗಮಕ್ಕೆ ಬಂದರು.

ಪ್ರಶ್ನೆ ೪) ಕೆಳಗಿನ ಶಬ್ದಗಳನ್ನು ವಾಕ್ಯದಲ್ಲಿ ಉಪಯೋಗಿಸಿರಿ.

ಅ) ಉನ್ನತಿ ಆ) ಆಚರಣೆ ಇ) ಭೇದ

## ಉಪಕ್ರಮ

೧) ಕೆಳಗಿನ ವಾಕ್ಯಗಳನ್ನು ಪೂರ್ಣಗೊಳಿಸಿರಿ.

ಅ) ಆಚಾರವೇ ಸ್ವರ್ಗ ..................

ಆ) ....................... ಕೈಲಾಸ

ಇ) ನುಡಿದಂತೆ ನಡೆ ..................

ಈ) .............. ಮುತ್ತಿನ ಹಾರದಂತಿರಬೇಕು

ಉ) ನೀನೊಲಿದರೆ ಕೊರಡು .....................

೨) ಶರಣ-ಶರಣೆಯರ ಜೀವನಚರಿತ್ರೆಯನ್ನು ಮತ್ತು ವಚನಗಳನ್ನು ಶಿಕ್ಷಕರಿಂದ/ ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.

**• ನುಡಿಮುತ್ತು •**

ಶ್ರೇಷ್ಠ ಚಿಂತನೆ ವ್ಯಕ್ತಿಯನ್ನು ಯೋಗ್ಯ ವ್ಯಕ್ತಿಯನ್ನಾಗಿ ಮಾಡುತ್ತದೆ

AX6M5E

## ದುಡಿಮೆಯೇ ದೇವರು

## ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- ಬಸವಣ್ಣನವರ ಅಂಕಿತನಾಮ ಯಾವುದು ? ☐

  ೧) ರಾಮನಾಥ ೨) ಗುಹೇಶ್ವರಾ ೩) ಸಂಗಮನಾಥ ೪) ಕೂಡಲಸಂಗಮದೇವ

- ಕೆಳಗಿನವುಗಳಲ್ಲಿಯ ಸ್ತ್ರೀಲಿಂಗ ಶಬ್ದ ಗುರುತಿಸಿರಿ. ☐

  ೧) ರಾಜಕುಮಾರ ೨) ಸೋನಾಲಿ ೩) ಸೀನೆಮಾ ೪) ಅಜ್ಜ

### ಗಮನಿಸಿರಿ

**ಲಿಂಗಗಳು :** ಲಿಂಗಗಳಲ್ಲಿ ಮುಖ್ಯವಾಗಿ ಮೂರು ಪ್ರಕಾರಗಳಿರುತ್ತವೆ.

**೧) ಪುಲ್ಲಿಂಗ ೨) ಸ್ತ್ರೀಲಿಂಗ ೩) ನಪುಂಸಕಲಿಂಗ**

**ಪುಲ್ಲಿಂಗ :** ಪುರುಷ ಪದದ ಅರ್ಥವನ್ನು ಸೂಚಿಸುವ ಶಬ್ದಕ್ಕೆ 'ಪುಲ್ಲಿಂಗ' ಎನ್ನುವರು.

ಉದಾ. : ರಾಮ, ಎತ್ತು, ಹುಂಜ ಇತ್ಯಾದಿ.

**ಸ್ತ್ರೀಲಿಂಗ :** ಸ್ತ್ರೀ ಪದದ ಅರ್ಥವನ್ನು ಸೂಚಿಸುವ ಶಬ್ದಕ್ಕೆ 'ಸ್ತ್ರೀಲಿಂಗ' ಎನ್ನುವರು.

ಉದಾ. : ಕಾವೇರಿ, ಆಕಳು, ಕುರಿ

**ನಪುಂಸಕ ಲಿಂಗ :** ಪುರುಷ ಪದ ಮತ್ತು ಸ್ತ್ರೀ ಪದಗಳನ್ನು ಹೊರತುಪಡಿಸಿ ಉಳಿದೆಲ್ಲ ಪದಗಳಿಗೆ 'ನಪುಂಸಕಲಿಂಗ' ಎನ್ನುವರು.

ಉದಾ. : ಚೆಂಡು, ಪುಸ್ತಕ, ನಾಣ್ಯ, ಗಿಡ

# ೧೫. ಸಂಸ್ಕಾರ



ಒಂದು ಊರಿನಲ್ಲಿ ಒಬ್ಬ ಸಾಧು ಇದ್ದನು. ಅವನು ಒಂದು ಆಶ್ರಮವನ್ನು ಸ್ಥಾಪಿಸಿಕೊಂಡು ಊರವರಿಗೆ ಜ್ಞಾನ, ತಿಳುವಳಿಕೆ ನೀಡುವ ಸೇವೆಗೈಯುತ್ತಿದ್ದನು. ಆತ ಬಹಳ ಜಾಣನೆಂದು ಹಾಗೂ ಮಮತೆಯ ಸ್ವಭಾವದ ಸರಳ ವ್ಯಕ್ತಿಯೆಂದು ಹೆಸರು ವಾಸಿಯಾಗಿದ್ದನು. ಜನರು ತಮ್ಮ ಸುಖ ದು:ಖದ ಸಂಗತಿಗಳನ್ನು ತೋಡಿಕೊಂಡು ಆತನ ಕಡೆಯಿಂದ ಸುಲಭದಲ್ಲಿ ತಮ್ಮ ಸಂದೇಹ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಿದ್ದರು.

ಹೀಗಿರುತ್ತ ಒಂದು ಸಲ ಒಬ್ಬ ಯುವಕನು ಆ ಗುರುವಿನ ಬಳಿಗೆ ಬಂದು,

'ಸ್ವಾಮಿಜೀ, ಸಂಸ್ಕಾರ ಎಂದರೇನು ? ಸಂಸ್ಕೃತಿ ಎಂದರೇನು ? ನಾವು ಸುಸಂಸ್ಕೃತರಾಗಬೇಕೆಂದು ಎಲ್ಲರೂ ಉಪದೇಶವನ್ನೇನೋ ನೀಡುತ್ತಾರೆ. ಆದರೆ ಅದರರ್ಥ ಏನೆಂಬುದು ನನಗೆ ತಿಳಿದಿಲ್ಲ. ನನಗೆ ತಿಳಿಯುವ ಹಾಗೆ ಹೇಳುವ ಸಾಮರ್ಥ್ಯ ನಿಮ್ಮಲ್ಲಿದೆ ಎಂದು ಬಗೆದು ತಮ್ಮ ಬಳಿಗೆ ಬಂದಿರುವೆ. ನನ್ನ ಸಮಸ್ಯೆಯನ್ನು ಬಗೆಹರಿಸಿ ಉಪಕರಿಸಿರಿ' ಎಂದು ಬಹಳ ಕಳಕಳಿಯಿಂದ ಕೇಳಿಕೊಂಡನು.

ಗುರುಗಳಿಗೆ ಆ ಯುವಕನ ಕಳಕಳಿ ಅರ್ಥವಾಯಿತು. ಗುರುಗಳು ತಮ್ಮೆದುರು ಬಿದ್ದುಕೊಂಡಿದ್ದ ಒಂದು ಕಬ್ಬಿಣದ ತುಂಡನ್ನು ಕೈಗೆ ಎತ್ತಿಕೊಂಡು ಆ ತರುಣನಿಗೆ ಅಂದರು :

'ತಮ್ಮಾ, ಈ ಕಬ್ಬಿಣದ ತುಂಡನ್ನು ತಗೋ. ಇದನ್ನು ಮಾರಬೇಕೆಂದಿದ್ದೇನೆ. ಇದಕ್ಕೆ ಎಷ್ಟು ಬೆಲೆ ಬರಬಹುದು ಎಂದು ನೀನು ಅಂದಾಜು ಕಟ್ಟಬಲ್ಲೆಯಾ ?'

ಆ ತರುಣನು ಆ ಕಬ್ಬಿಣದ ತುಂಡನ್ನು ಕೈಯಲ್ಲಿ ತೆಗೆದುಕೊಂಡು ನೋಡಿದನು. ತುಕ್ಕು ಹಿಡಿದು ಬಿದ್ದ ಕಬ್ಬಿಣದ ತುಂಡದು. ಗುಜರಿಯಲ್ಲಿ ಮಾರಿದಲ್ಲಿ ಒಂದರ್ಧ ರೂಪಾಯಿಯಾದರೂ ಬಂದೀತೋ ಇಲ್ಲವೋ ! ಆತ ಅಳುಕುತ್ತ ಗುರುವಿಗೆ,

'ಸ್ವಾಮಿಜೀ, ಇದಕ್ಕೇನು ಬೆಲೆ ಬಂದೀತು ? ಗುಜರಿಯವನಿಗೆ ಕೊಟ್ಟರೆ ಐವತ್ತು ಪೈಸೆ ಕೊಟ್ಟಾನು; ಅಷ್ಟು ದಕ್ಕಿದರೂ ಹೆಚ್ಚೇ. ತುಕ್ಕು ಹಿಡಿದು ಪುಡಿಪುಡಿಯಾಗುವ ಅವಸ್ಥೆಯಲ್ಲಿದೆ' ಎಂದು ನಿವೇದಿಸಿದನು.

‘ಹೌದೌದು, ಸರಿ ; ಈ ತುಕ್ಕು ಹಿಡಿದು ಕಳೆಗೆಟ್ಟ ಕಬ್ಬಿಣವನ್ನು ಕಮ್ಮಾರನಲ್ಲಿಗೆ ಒಯ್ದು ಕಾಯಿಸಿ, ಬಡಿಸಿ ಒಂದು ಕುಡುಗೋಲಾಗಿ ಪರಿವರ್ತಿಸಿದರೆ ಅದಕ್ಕೆ ಎಷ್ಟು ಬೆಲೆ ಬಂದೀತು ?’ ಗುರುಗಳು ಮತ್ತೆ ಪ್ರಶ್ನೆ ಹಾಕಿದರು.

‘ಹಾಗೆ ಮಾರ್ಪಡಿಸಿದಲ್ಲಿ ಅದಕ್ಕೆ ಇಪ್ಪತ್ತು – ಇಪ್ಪತ್ತೈದು ರೂಪಾಯಿಗಳಾದರೂ ಬರಬಹುದಲ್ಲವೇ ಗುರುಗಳೇ’ ಕಂಗಳಲ್ಲಿ ಹೊಳಹು ಮಿಂಚಿಸುತ್ತ ಆ ತರುಣ ಉತ್ತರಿಸಿದನು.

‘ಸರಿ, ಸರಿ ! ಕುಡುಗೋಲಿಗೆ ಬದಲಾಗಿ ಈ ಕಬ್ಬಿಣಕ್ಕೆ ಬೇರೆ ಅನುಕೂಲಕರವಾದ, ಯೋಗ್ಯವಾದ ಲೋಹವನ್ನು ಸೇರಿಸಿ ಮನೆಯ ಕಟಾಂಜನದ ಕಬ್ಬಿಣದ ಚೌಕಟ್ಟನ್ನಾಗಿ ತಯಾರಿಸಿದರೆ ಅದಕ್ಕೆ ಎಷ್ಟು ಬೆಲೆ ಬರಬಹುದು. ಹೇಳು ನೋಡೋಣ ತಮ್ಮಾ ?’ ಗುರುಗಳು ಮೂರನೆಯ ಸಲ ಜಿಜ್ಞಾಸೆಯ ಪ್ರಶ್ನೆಯನ್ನು ಕೇಳಿದರು.

ಈ ಸಲ ಆ ತರುಣನ ಕಂಗಳು ಮತ್ತಷ್ಟು ಅರಳಿ, ಆತನ ಕುತೂಹಲ ಇನ್ನಷ್ಟು ಕೆರಳಿ,

‘ಆಹಾ, ಅದನ್ನು ಅಲಂಕರಣದ ಕಟಾಂಜನದ ಚೌಕಟ್ಟು ಮಾಡಿಸಿದಲ್ಲಿ ನೂರಿನ್ನೂರು ರೂಪಾಯಿಗಳಿಗೂ ಮಿಕ್ಕಿ ಬೆಲೆ ನಿಶ್ಚಿತವಾಗಿ ಬಂದೀತು ಗುರುಗಳೇ’ ಎಂದು ಉದ್ಗರಿಸಿದನು ಆ ತರುಣ.

‘ಹೀಗೇನು ? ಈ ಕಬ್ಬಿಣವನ್ನು ಪರಿಷ್ಕರಿಸಿ ಸೂಕ್ತ ಪ್ರಮಾಣದಲ್ಲಿ ಉತ್ತಮ ಧಾತುವಿನ ಜತೆಗೆ ಸೇರ್ಪಡಿಸಿ ಗಡಿಯಾರ, ವಾಚುಗಳ ಸೂಕ್ಷ್ಮ ಸ್ಪ್ರಿಂಗುಗಳನ್ನಾಗಿ ಮಾರ್ಪಾಡಿಸಿದಲ್ಲಿ ಎಷ್ಟು ಬೆಲೆ ಪಡೆಯಬಹುದು ?’ ಗುರುಗಳು ಮತ್ತೆ ಕೇಳಿದರು.

‘ಓ, ಹಾಗೆ ಸೂಕ್ಷ್ಮವಾದ ಯಾಂತ್ರಿಕ ಬಿಡಿಭಾಗಗಳನ್ನಾಗಿ ಮಾರ್ಪಡಿಸಿದಲ್ಲಿ ಸಾವಿರಾರು ರೂಪಾಯಿಗಳನ್ನು ಬೆಲೆಯಾಗಿ ಗಿಟ್ಟಿಸಿ ಕೊಳ್ಳಬಹುದು ಗುರುಗಳೇ !’ ಎಂದು ಆ ತರುಣ ಉತ್ಸಾಹಿತನಾಗಿ ನುಡಿದನು.

‘ನೋಡಿದೆಯಾ ಈ ಐಂದ್ರಜಾಲಿಕ ಬದಲಾವಣೆಯ ಪರಿಣಾಮವನ್ನು ? ಹೇಗೆ ಸಾಧ್ಯವಾಗಬಹುದು ಇಷ್ಟೊಂದು ಅಜಗಜಾಂತರದ ಸುಧಾರಣೆ ಎಂಬುದು ಅರಿವಾಯಿತೆ ?’ ಸಂಸ್ಕಾರದಿಂದಾಗಿ ಈ ತುಕ್ಕು ಹಿಡಿದ ತುಂಡನ್ನು ಯಾವುದೇ ಉನ್ನತ ಮಟ್ಟಕ್ಕೂ ಏರಿಸುವುದು ಸಾಧ್ಯವಿದೆ. ಅದರ ತುಕ್ಕನ್ನು ಹೋಗಲಾಡಿಸಿ, ಅದರಲ್ಲಿಯ ಕೊಳೆ, ಕಸವನ್ನು ಬೇರ್ಪಡಿಸಿ ಅದಕ್ಕೆ ಒಳ್ಳೆಯ ಪ್ರಯೋಜನಕಾರಿ ಗುಣಗಳುಳ್ಳ ಲೋಹಗಳನ್ನು ಸೇರ್ಪಡಿಸಿ ಯೋಗ್ಯವಾದ ಆಕಾರ, ಆಕೃತಿಗಳಲ್ಲಿ ಮಾರ್ಪಡಿಸಿದಾಗ ಅದರ ಬೆಲೆಯು ಐವತ್ತು ಪೈಸೆಯ ಹಂತದಿಂದ ಹತ್ತಾರು ಸಾವಿರ ರೂಪಾಯಿಗಳ ಮಟ್ಟಕ್ಕೆ ಏರುವಂತಾಯ್ತಲ್ಲವೇ ಸಂಸ್ಕರಣದಿಂದ ? ಸಂಸ್ಕಾರವನ್ನು ನೀಡಿ ಮನುಜನ ಬದುಕನ್ನು ಹೀಗೆ ಬೆಲೆಯುಳ್ಳದ್ದನ್ನಾಗಿ ಮಾರ್ಪಡಿಸುವ ವಿಧಾನವೇ ಸಂಸ್ಕೃತಿ. ತಮ್ಮಲ್ಲಿದ್ದ ಅರೆಕೊರೆಗಳನ್ನು ಅರಿತು ಅವುಗಳನ್ನು ನೀಗಿಕೊಂಡು ಸದ್ಗುಣಗಳನ್ನು ಅಂಗೀಕರಿಸಿಕೊಂಡು, ಸುಸಂಸ್ಕೃತನಾಗಿ ಸಮಾಜಕ್ಕೆ ಹೆಚ್ಚು ಹೆಚ್ಚು ಪ್ರಯೋಜನಕಾರಿಯಾದರೆ ಬದುಕಿಗೆ ಬೆಲೆ ಬರುತ್ತದೆ. ಹಾಗೆ ಆಗುಗೊಳಿಸುವ ವಿಧಾನವೇ ಸಂಸ್ಕಾರ, ಸಂಸ್ಕೃತಿ, ಈಗ ಅರ್ಥವಾಯಿತೇ ? ಎಂದು ಗುರುಗಳು ಕೇಳಿದರು.

ಆ ಯುವಕ ನಗೆಮೊಗದಿಂದ 'ತಿಳಿಯಿತು, ತಿಳಿಯಿತು' ಎಂಬಂತೆ ಗೋಣು ಹಾಕಿ ನಮಸ್ಕರಿಸಿ ಅವರ ನಿರೋಪ ಪಡೆದು ನಡೆದ. ಆತನ ಮನಸ್ಸಿನಲ್ಲಿ ಮತ್ತೆ ಮತ್ತೆ ಆ ತುಕ್ಕು ಹಿಡಿದು ಬಿದ್ದ ಕಬ್ಬಿಣದ ತುಂಡು ಕಾಣಿಸಿಕೊಂಡಿತು. ಅದು ಕೆಂಡಕ್ಕೆ ಕಾಯ್ದು ಕಮ್ಮಾರ ಶಾಲೆಯಲ್ಲಿ ಸುತ್ತಿಗೆ ಪೆಟ್ಟು ತಿಂದು, ಪರಿಷ್ಕರಣಗೊಳ್ಳಲೆಂದು ವಿವಿಧ ಗುಣಗಳ ಲೋಹಗಳೊಂದಿಗೆ ಬೆರೆತು, ಸೂಕ್ತ ಆಕೃತಿ, ಆಕಾರಗೊಳ್ಳುವಂತೆ ಕೊರೆತ, ಸಾಣೆಗಳಿಗೆ ಒಡ್ಡಿಕೊಂಡು ಅಮೂಲ್ಯ ವಸ್ತುವಾಗಿ ಹೊರಹೊಮ್ಮುವುದೇ ಬದುಕಿನ ಉದ್ದೇಶವಾಗಿದೆ ಎಂಬುದನ್ನು ಮನಗಂಡನು. ಆಗ ಆತನಿಗೆ ಸಂಸ್ಕಾರ ಮತ್ತು ಸಂಸ್ಕೃತಿಗಳ ಅರ್ಥ ಮತ್ತು ಮಹತ್ವ ಹೊಳೆದಂತಾಯಿತು.

– ಅನಂತ ಕಲ್ಲೋಳ

## ಶಬ್ದಗಳ ಅರ್ಥ

ಗುಜರಿ – ಹಳೆಯ ಸಾಮಾನುಗಳನ್ನು ಮಾರುವ ; ಕಂಗಳು – ಕಣ್ಣುಗಳು ; ತುಕ್ಕು – ಜಂಗುತಿಂದ, ನಿಷ್ಪ್ರಯೋಜಕ; ಸಂದೇಹ – ಸಂಶಯ ; ಹೊಳಹು – ಪ್ರಕಾಶ ; ನಗೆಮೊಗ – ನಗೆಮುಖ ; ಪರಿಷ್ಕರಣ – ಸರಿಪಡಿಸಿದ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಜನರು ಸಾಧುವಿನ ಬಳಿಗೆ ಏಕೆ ಹೋಗುತ್ತಿದ್ದರು ?

______________________________

______________________________

ಆ) ಯುವಕನು ಗುರುಗಳಿಗೆ ಯಾವ ಪ್ರಶ್ನೆ ಕೇಳಿದನು ?

______________________________

______________________________

ಇ) ಗುರುಗಳು ಮೂರನೆಯ ಸಲ ಯಾವ ಪ್ರಶ್ನೆ ಕೇಳಿದರು ?

______________________________

______________________________

ಈ) ಕಬ್ಬಿಣದಲ್ಲಾದ ಐಂದ್ರಜಾಲಿಕ ಬದಲಾವಣೆಗಳನ್ನು ಹೇಳಿರಿ.

______________________________

______________________________

ಉ) ಸಂಸ್ಕಾರ ಎಂದರೇನು ?

______________________________

______________________________

ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿರಿ.

ಅ) ಒಂದು ಊರಿನಲ್ಲಿ ಒಬ್ಬ .......... ಇದ್ದನು.

ಆ) ಗುರುಗಳು ತಮ್ಮೆದುರು ಬಿದ್ದುಕೊಂಡಿದ್ದ ಒಂದು ........... ಕೈಗೆ ಎತ್ತಿಕೊಂಡರು.

ಇ) ......... ಕೊಟ್ಟರೆ ಐವತ್ತು ಪೈಸೆ ಕೊಟ್ಟಾನು.

ಈ) ನೋಡಿದೆಯಾ ಈ ........... ಬದಲಾವಣೆಯ ಪರಿಣಾಮವನ್ನು ?

ಉ) ಆಗ ಆತನಿಗೆ ಸಂಸ್ಕಾರ ಮತ್ತು .............. ಅರ್ಥ ಮತ್ತು ಮಹತ್ವ ಹೊಳೆದಂತಾಯಿತು.

ಪ್ರಶ್ನೆ ೩) ಕೆಳಗಿನ ಪ್ರಸಂಗಗಳಲ್ಲಿ ಏನಾಗುತ್ತದೆ ಎಂಬುದನ್ನು ಬರೆಯಿರಿ.

ಅ) ಕಬ್ಬಿಣದ ತುಂಡನ್ನು ಮೂಲೆಯಲ್ಲಿ ಎಸೆದರೆ ...................

ಆ) ಕಬ್ಬಿಣದ ತುಂಡನ್ನು ಕಮ್ಮಾರನ ಬಳಿ ಒಯ್ದರೆ ..................

ಇ) ಕಬ್ಬಿಣದಲ್ಲಿ ಯೋಗ್ಯವಾದ ಲೋಹವನ್ನು ಬೆರೆಸಿದರೆ ...........

ಈ) ಕಬ್ಬಿಣದಲ್ಲಿ ಉತ್ತಮ ಧಾತುವನ್ನು ಸೇರ್ಪಡಿಸಿದರೆ .............

ಪ್ರಶ್ನೆ ೪) ಕೆಳಗಿನ ಶಬ್ದಗಳನ್ನು ವಾಕ್ಯದಲ್ಲಿ ಉಪಯೋಗಿಸಿರಿ.

ಅ) ಉಪದೇಶ - ..........................................................

ಆ) ಸಾಮರ್ಥ್ಯ - ......................................................

ಇ) ಪರಿವರ್ತನೆ - ......................................................

ಈ) ಸಮಾಜ - ..........................................................

ಪ್ರಶ್ನೆ ೫) ಕೆಳಗಿನ ವಾಕ್ಯಗಳಲ್ಲಿಯ ಗೆರೆ ಹೊಡೆದ ಶಬ್ದಗಳ ಲಿಂಗ, ವಚನಗಳನ್ನು ಗುರುತಿಸಿರಿ.

ಅ) ಕುದುರೆಗಳು ವೇಗವಾಗಿ ಓಡುತ್ತವೆ. ..................

ಆ) ರಾಧೆಯು ಬೆಂಗಳೂರಿಗೆ ಹೋದಳು. .....................

ಇ) ಸೋಮನು ಜಾತ್ರೆಯಲ್ಲಿ ಚೆಂಡುಗಳನ್ನು ಕೊಂಡನು ............

ಈ) ವ್ಯಾಪಾರಿಯು ಬಟ್ಟೆಗಳನ್ನು ಮಾರಿದನು ..................

ಉ) ಎಮ್ಮೆ ಹುಲ್ಲು ತಿನ್ನುತ್ತದೆ ...................

## ಉಪಕ್ರಮ

ಕೆಳಗಿನ ವಿಧಾನವನ್ನು ಪೂರ್ಣಗೊಳಿಸಿರಿ.

ನೀರು
- ಅತಿಯಾಗಿ ಕಾಯಿಸಿದರೆ ..................................
- ಅತಿಯಾಗಿ ತಂಪುಗೊಳಿಸಿದರೆ ..............................

ಜೋಳ
- ಬೀಸಿದರೆ ..................................................
- ಹುರಿದರೆ ..................................................
- ಕುದಿಸಿದರೆ ................................................

ಬಟ್ಟೆ
- ಹುಡುಗರಿಗೆ ...............................................
- ಹುಡುಗಿಯರಿಗೆ ...........................................
- ಯುವಕರಿಗೆ ...............................................
- ಯುವತಿಯರಿಗೆ ............................................
- ಅಜ್ಜನಿಗೆ ..................................................
- ಅಜ್ಜಿಗೆ ....................................................

### • ನುಡಿಮುತ್ತು •

ಸಂಸ್ಕಾರದಿಂದ ಪರಿಪೂರ್ಣತೆ ಲಭಿಸುತ್ತದೆ.

ಸಜ್ಜನರ ಸಂಗ ಹೆಜ್ಜೇನು ಸವಿದಂತೆ

AXFIU2

## ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- ಕೆಳಗಿನವುಗಳಲ್ಲಿಯ ದ್ರವರೂಪದ ವಸ್ತುವನ್ನು ಗುರುತಿಸಿರಿ. [ ]

  ೧) ಹಾಲು ೨) ಬೆಲ್ಲ ೩) ಸಕ್ಕರೆ ೪) ಕಲ್ಲು


- 'ವದನ' ಈ ಶಬ್ದದಲ್ಲಿಯ ಅಕ್ಷರಗಳಿಂದ ಎಷ್ಟು ಅರ್ಥಪೂರ್ಣ ಶಬ್ದಗಳು ತಯಾರಾಗುತ್ತವೆ ? [ ]

  ೧) ಒಂದು ೨) ನಾಲ್ಕು ೩) ಎರಡು ೪) ಮೂರು

# ೧೬. ಗೋವಿನ ಹಾಡು - ಭಾಗ ೨

ಕೊಂದು ತಿನ್ನುವೆನೆಂಬ ಹುಲಿಗೆ
ಚೆಂದದಿಂದ ಭಾಷೆ ಕೊಟ್ಟು
ಕಂದ ನಿನ್ನನು ನೋಡಿ ಹೋಗುವೆ
ನೆಂದು ಬಂದೆನು ದೊಡ್ಡಿಗೆ ॥

ಆರ ಮೊಲೆಯನು ಕುಡಿಯಲಮ್ಮ
ಆರ ಬಳಿಯಲಿ ಮಲಗಲಮ್ಮ
ಆರ ಸೇರಿ ಬದುಕಲಮ್ಮ
ಆರು ನನಗೆ ಹಿತವರು ॥



ಅಮ್ಮಗಳಿರಾ ಅಕ್ಕಗಳಿರಾ
ಎನ್ನ ತಾಯೊಡ ಹುಟ್ಟಕ್ಕಗಳಿರಾ
ಕಂದ ನಿಮ್ಮವನೆಂದು ಕಾಣಿರಿ
ತಬ್ಬಲಿಯನೀ ಕರುವನು ॥


ಮುಂದೆ ಬಂದರೆ ಹಾಯಬೇಡಿ
ಹಿಂದೆ ಬಂದರೆ ಒದೆಯಬೇಡಿ
ಕಂದ ನಿಮ್ಮವನೆಂದು ಕಾಣಿರಿ
ತಬ್ಬಲಿಯನೀ ಕರುವನು ॥

ತಬ್ಬಲಿಯು ನೀನಾದೆ ಮಗನೆ
ಹೆಬ್ಬುಲಿಯ ಬಾಯನ್ನು ಹೊಗುವೆನು
ಇಬ್ಬರ ಋಣ ತೀರಿತೆಂದು
ತಬ್ಬಿಕೊಂಡಿತು ಕಂದನ ॥

ಖಂಡವಿದೆಕೋ ಮಾಂಸವಿದೆಕೋ
ಗುಂಡಿಗೆಯ ಬಿಸಿರಕ್ತವಿದೆಕೋ
ಚಂಡ ವ್ಯಾಘ್ರನೆ ನೀನಿದೆಲ್ಲವ
ನುಂಡು ಸಂತಸದಿಂದಿರು ॥

ಪುಣ್ಯಕೋಟಿಯ ಮಾತು ಕೇಳಿ
ಕಣ್ಣನೀರನು ಸುರಿಸಿ ನೊಂದು
ಕನ್ನೆಯಿವಳನು ಕೊಂದು ತಿಂದರೆ
ಮೆಚ್ಚನಾ ಪರಮಾತ್ಮನು ॥

ಎನ್ನ ಒಡಹುಟ್ಟಕ್ಕ ನೀನು
ನಿನ್ನ ಕೊಂದು ನಾನೇನ ಪಡೆವೆನು
ಎನ್ನುತಾ ಹುಲಿ ಹಾರಿ ನೆಗೆದು
ತನ್ನ ಪ್ರಾಣವ ಬಿಟ್ಟಿತು ॥



## ಶಬ್ದಗಳ ಅರ್ಥ

ಭಾಷೆ – ವಚನ ; ತಬ್ಬಲಿ – ಅನಾಥ ; ಚಂಡ – ಕ್ರೂರ ; ಕನ್ನೆ – ಹೆಣ್ಣುಮಗಳು

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಕರುವು ಪುಣ್ಯಕೋಟಿಗೆ ಏನೆಂದು ಕೇಳಿತು ?

______________________________

______________________________

ಆ) ಪುಣ್ಯಕೋಟಿಯು ಉಳಿದ ಹಸುಗಳಿಗೆ ಏನೆಂದು ಬೇಡಿಕೊಂಡಿತು ?

______________________________

______________________________

ಇ) ಕರುವನ್ನು ತಬ್ಬಿಕೊಂಡು ಪುಣ್ಯಕೋಟಿ ಏನೆಂದು ದು:ಖಿಸಿತು ?

______________________________

______________________________

ಈ) ಹುಲಿಯ ಗವಿಗೆ ಬಂದು ಪುಣ್ಯಕೋಟಿಯು ಏನು ಹೇಳಿತು ?

______________________________

______________________________

ಉ) ಈ ಕವಿತೆಯಿಂದ ತಿಳಿದು ಬರುವ ನೀತಿ ಯಾವುದು ?

______________________________

______________________________

ಪ್ರಶ್ನೆ ೨) ಈ ಮಾತನ್ನು ಯಾರು ಯಾರಿಗೆ ಹೇಳಿದರು.

ಅ) ಆರ ಮೊಲೆಯನು ಕುಡಿಯಲಮ್ಮ

______________________________

ಆ) ಕಂದ ನಿಮ್ಮವನೆಂದು ಕಾಣಿರಿ ತಬ್ಬಲಿಯನೀ ಕರುವನು

______________________________

ಇ) ಎನ್ನ ಒಡಹುಟ್ಟಕ್ಕ ನೀನು

______________________________

ಪ್ರಶ್ನೆ ೩) ಕವಿತೆಯ ಬಿಟ್ಟ ಸಾಲುಗಳನ್ನು ಪೂರ್ಣಗೊಳಿಸಿರಿ.

ಪುಣ್ಯಕೋಟಿಯ .............


..............................

..............................

............. ಪರಮಾತ್ಮನು ||

ಪ್ರಶ್ನೆ ೪) ಈ ಕವಿತೆಯನ್ನು ಕಂಠಪಾಠ ಮಾಡಿರಿ.

## ಉಪಕ್ರಮ



೧) ಸತ್ಯ ಹರಿಶ್ಚಂದ್ರ ಮಹಾರಾಜರ ಕಥೆಯನ್ನು ಶಿಕ್ಷಕರಿಂದ / ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ. ನಿತ್ಯ ಜೀವನದಲ್ಲಿ ಸತ್ಯ ಪರಿಪಾಲನೆ ಮಾಡಿರಿ.

೨) ಈ ಕವಿತೆಯನ್ನು ಸಾಭಿನಯದೊಂದಿಗೆ ಹಾಡಿರಿ.

### • ನುಡಿಮುತ್ತು •

ಇನ್ನೊಬ್ಬರಿಗೆ ಕೆಟ್ಟದ್ದನ್ನು ಮಾಡುವವನು, ತನಗೆ ಕೆಟ್ಟದ್ದನ್ನು ಮಾಡಿಕೊಳ್ಳುತ್ತಾನೆ.

### ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ

AXPEVP

## ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- 'ಗೆಳತಿ' ಈ ಶಬ್ದದ ಬಹುವಚನ ಶಬ್ದ ಗುರುತಿಸಿರಿ. ☐

  ೧) ಗೆಳೆಯ ೨) ಗೆಳತಿಯರು ೩) ಗೆಳೆಯರು ೪) ಯಾವುದು ಇಲ್ಲ

- ಆಕಳು ಕೊಟ್ಟಿಗೆಯಲ್ಲಿ, ಹಾಗಾದರೆ ಸಿಂಹ ☐

  ೧) ಗುಹೆಯಲ್ಲಿ ೨) ಮನೆಯಲ್ಲಿ ೩) ಲಾಯದಲ್ಲಿ ೪) ಬಿಲದಲ್ಲಿ

# ೧೭. ಪ್ರಥಮ ಚಿಕಿತ್ಸೆ





ಅಂದು ನಾಲ್ಕನೇ ತರಗತಿಯ ವಿದ್ಯಾರ್ಥಿಗಳು ಆಟದ ಅವಧಿಯಲ್ಲಿ ಕ್ರಿಕೆಟ್ ಆಡುತ್ತಿದ್ದರು. ಬೌಲಿಂಗ್ ಮಾಡುತ್ತಿದ್ದ ಚೇತನ ಒಮ್ಮೆಲೆ ತಲೆ ಸುತ್ತಿ ಬಿದ್ದನು ! ವಿದ್ಯಾರ್ಥಿಗಳೆಲ್ಲಾ ಓಡಿ ಬಂದು ಅವನನ್ನು ಸುತ್ತುವರಿದು, 'ಚೇತನ', 'ಚೇತನ' ಎಂದು ಕೂಗತೊಡಗಿದರು. ಶಿಕ್ಷಕರು ಕೂಡಲೇ ಅಲ್ಲಿಗೆ ಬಂದು 'ಎಲ್ಲರೂ ದೂರ ನಡೆಯಿರಿ. ಗಾಳಿ ಬಿಡಿ', 'ಯಾರೂ ಗಾಬರಿಯಾಗಬೇಡಿ', 'ಏನೂ ಆಗಿಲ್ಲ! ಭಯ ಇಲ್ಲ' ಎನ್ನುತ್ತಾ ಅವನನ್ನು ಮೆಲ್ಲನೆ ಎಬ್ಬಿಸಿ, ನೆರಳಿಗೆ ಕರೆದೊಯ್ದರು. ಅವನ ಮೊಣಕೈಗೆ ತರಚು ಗಾಯವಾಗಿ, ರಕ್ತ ಸೋರುತ್ತಿತ್ತು. ಜಯಾ ನೀರು ತಂದಳು. ಶಿಕ್ಷಕರು ಆತನಿಗೆ ನೀರು ಕುಡಿಸಿದರು. ಗಾಯವನ್ನು ನೀರಿನಿಂದ ತೊಳೆದರು. ತಮ್ಮ ಕರವಸ್ತ್ರವನ್ನು ತೊಳೆದು ಗಾಯದ ಮೇಲೆ ಪಟ್ಟಿ ಕಟ್ಟಿದರು. ಆಮೇಲೆ ಅವನನ್ನು ವೈದ್ಯರಲ್ಲಿಗೆ ಕರೆದೊಯ್ದು ಚುಚ್ಚುಮದ್ದನ್ನು ಹಾಕಿಸಿ, ಕರೆತರಲು ಸಹಾಯಕನೊಡನೆ ಪಕ್ಕದಲ್ಲಿದ್ದ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ವಿದ್ಯಾರ್ಥಿಗಳೆಲ್ಲ ತರಗತಿಗೆ ಹಿಂತಿರುಗಿದರು. ಅವರೊಡನೆ ಹಿಂತಿರುಗಿದ ಶಿಕ್ಷಕರು ವರ್ಗದ ಕೋಣೆಗೆ ಬಂದರು. 'ಮಕ್ಕಳೇ, ಹೀಗೆ ನೀವು ಆಟ ಆಡುತ್ತಾ ಬಿದ್ದು ಗಾಯವಾದಾಗ, ಪೆನ್ಸಿಲ್ ಹೆರೆಯುವಾಗ ಬೆರಳು ಕೊಯ್ದುಕೊಂಡಾಗ, ಮೊಳೆ ಚುಚ್ಚಿ ಗಾಯವಾದಾಗ, ಆ ಗಾಯವನ್ನು ಸ್ವಚ್ಛವಾಗಿ ತೊಳೆದು, ಹೆಚ್ಚು ರಕ್ತಸ್ರಾವವಾಗದಂತೆ ತಣ್ಣೀರ ಪಟ್ಟಿ ಕಟ್ಟಬೇಕು. ನಂತರ ವೈದ್ಯರಲ್ಲಿಗೆ ಹೋಗಿ ಚಿಕಿತ್ಸೆ ಪಡೆಯಬೇಕು.

**ನಿಖಿಲ :** ಇಷ್ಟು ಸಣ್ಣ ಗಾಯವಾದಾಗಲೂ ಔಷಧವನ್ನು ತೆಗೆದುಕೊಳ್ಳಬೇಕೆ ?

**ರಹೀಮ :** ನೀವೇ ಗಾಯಕ್ಕೆ ಪಟ್ಟಿ ಕಟ್ಟಿದಿರಿ !

**ಶಿಕ್ಷಕರು :** ನೋಡಿ, ನಾನು ಈಗ ಮಾಡಿದ್ದು ಪ್ರಥಮ ಚಿಕಿತ್ಸೆ. ಅಂದರೆ, ಆಕಸ್ಮಿಕವಾಗಿ ಬಿದ್ದಾಗ, ಸುಟ್ಟಾಗ, ಅಪಘಾತವಾದಾಗ, ನೀರಿನಲ್ಲಿ ಮುಳುಗಿ ಉಸಿರು ಕಟ್ಟಿದಾಗ, ಸೂಕ್ತವಾದ ವೈದ್ಯಕೀಯ ನೆರವು ಸಿಗುವ ಮುನ್ನ ನೀಡುವ ತುರ್ತು ಚಿಕಿತ್ಸೆ ಅಥವಾ ನೆರವನ್ನು ಪ್ರಥಮ ಚಿಕಿತ್ಸೆ ಎನ್ನುತ್ತೇವೆ.

ಕೆಲವು ಮಕ್ಕಳು ಆಗಿಂದಾಗೆ ಮೂರ್ಛೆ ಹೋಗುವುದು ಅಥವಾ ಜ್ಞಾನತಪ್ಪುವುದನ್ನು ನೀವು ನೋಡಿರಬಹುದು. ಇದನ್ನು 'ದೆವ್ವದ ಕಾಟ' ಎಂದು ನಂಬುತ್ತಾರೆ. ಇಂತಹ ಮೂಢನಂಬಿಕೆಯಿಂದ 'ಭಸ್ಮ ಹಚ್ಚುವಿಕೆ', 'ಭೂತದ ಪೂಜೆ' ಇತ್ಯಾದಿಗಳನ್ನು ಮಾಡಿಸುವುದರಿಂದ ರೋಗವಾಸಿಯಾಗುವುದಿಲ್ಲ, ವೈದ್ಯರಿಂದ ರೋಗಿಗೆ ಸೂಕ್ತ ಚಿಕಿತ್ಸೆ ದೊರೆತಲ್ಲಿ ವಾಸಿಯಾಗುತ್ತದೆ ಎಂಬ ತಿಳಿವನ್ನು ಪೋಷಕರಿಗೆ ಸೂಚನೆಯಿತ್ತು ನೆರವಾಗಬೇಕು.

ಮೂಢನಂಬಿಕೆಯಿಂದ ರೋಗ ವಾಸಿಯಾಗುವುದಿಲ್ಲ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ.

**ಕವಿತಾ :** ಸರ್, ಚಾಕುವಿನಿಂದ ಗಾಯವಾದಾಗ ಅರಿಶಿಣಪುಡಿ ಹಾಕುತ್ತಾರಲ್ಲಾ, ಅದು ಸರಿಯೇ?

**ಶಿಕ್ಷಕರು :** 'ಅರಿಶಿಣ' ಒಂದು ಔಷಧಿ ಮೂಲಿಕೆ. ಅದರ ಪುಡಿ ಸೋಂಕು ನಿವಾರಕ ಹೌದು. ಸಣ್ಣ ಪುಟ್ಟ ಗಾಯಗಳಿಗೆ ಅದು ಸರಿ. ಆದರೆ ಆಳವಾದ ಗಾಯದಿಂದ ರಕ್ತಸ್ರಾವವಾಗುತ್ತಿರುವಾಗ ಮೊದಲು ಗಾಯವನ್ನು ಒತ್ತಿ ಹಿಡಿಯಬೇಕು. ಗಾಯದಿಂದ ಮೇಲಿನ ಭಾಗಕ್ಕೆ ಶುಭ್ರವಾದ ಬಟ್ಟೆಯ ಪಟ್ಟಿ ಕಟ್ಟುವುದರಿಂದ ರಕ್ತ ಸುರಿಯುವುದು ಕಡಿಮೆ ಆಗುತ್ತದೆ. ಅನಂತರ ಗಾಯವನ್ನು ತೊಳೆದು ಅದರ ಮೇಲೆ ಶುಭ್ರವಾದ ಬಟ್ಟೆಯಿಂದ ಪಟ್ಟಿ ಕಟ್ಟಬೇಕು. ಪಟ್ಟಿ ಹೆಚ್ಚು ಬಿಗಿಯಾಗದಂತೆ ಎಚ್ಚರಿಕೆ ವಹಿಸಬೇಕು. ಪಟ್ಟಿಯ ಕಟ್ಟನ್ನು ಆಗಾಗ ಸಡಿಲಿಸುತ್ತಿರಬೇಕು. ರೋಗಿಯನ್ನು ಜಾಗ್ರತೆಯಿಂದ ವೈದ್ಯರಲ್ಲಿಗೆ ಕರೆದೊಯ್ಯಬೇಕು.

ಅಪಘಾತವಾದಾಗ ಗಾಯಾಳುಗಳನ್ನು ಗಾಬರಿಪಡಿಸಬಾರದು.

ಸೂಕ್ತ ಸಮಯದಲ್ಲಿ ತೆಗೆದುಕೊಳ್ಳುವ ಎಚ್ಚರಿಕೆ ಕ್ರಮಗಳಿಂದ ಹೆಚ್ಚಿನ ಅಪಘಾತ ತಪ್ಪಿಸಬಹುದು.

**ವಿನುತ :** ಸರ್, ಪ್ರಥಮ ಚಿಕಿತ್ಸೆ ನೀಡಬಹುದಾದ ಇನ್ನಿತರ ಸಂದರ್ಭಗಳನ್ನು ತಿಳಿಸುತ್ತೀರಾ ?

**ನಿಖಿಲ :** ಸರ್, ಕೆಲವೊಮ್ಮೆ ಬಿದ್ದರೆ ಮೂಳೆ ಮುರಿಯುವ ಸಂಭವವಿರುತ್ತದೆ. ಆಗ ಏನು ಮಾಡಬೇಕು ?

**ಶಿಕ್ಷಕರು :** ಸೈಕಲಿನಿಂದ ಬಿದ್ದಾಗ ಇಲ್ಲವೇ ಮೇಲಿನಿಂದ ಬಿದ್ದಾಗ ಮೂಳೆಮುರಿಯುವ ಸಂದರ್ಭಗಳುಂಟು. ಇಂತಹ ಸಂದರ್ಭದಲ್ಲಿ ಆ ಭಾಗದಲ್ಲಿ ಗಾಯ ಇಲ್ಲವೆ, ಬಾವು (ಊತ) ಉಂಟಾಗಬಹುದು. ವಿಪರೀತ ನೋವು ಕಾಣಿಸಿಕೊಳ್ಳುತ್ತದೆ. ಅಂತಹ ಸಂದರ್ಭಗಳಲ್ಲಿ, ರೋಗಿಯನ್ನು ಬಹಳ ಜಾಗರೂಕತೆಯಿಂದ ನೋಡಿಕೊಳ್ಳಬೇಕು. ಕಡ್ಡಿ / ರಟ್ಟು / ಟವಲ್ ಇತ್ಯಾದಿಗಳನ್ನೂ ಬಳಸಿ ಮೂಳೆ ಮುರಿದ ಜಾಗಕ್ಕೆ ಪಟ್ಟಿ ಕಟ್ಟಿ ಅಲುಗಾಡದಂತೆ ನೋಡಿಕೊಳ್ಳಬೇಕು.

**ರಮೇಶ :** ಸರ್, ಯಾರಾದರೂ ನೀರಿನಲ್ಲಿ ಮುಳುಗಿದಾಗ ಅವರನ್ನು ಮೇಲೆತ್ತಿದ ನಂತರ ಏನು ಮಾಡಬೇಕು ?

**ಶಿಕ್ಷಕರು :** ನೀರಿನಲ್ಲಿ ಮುಳುಗಿದಾಗ ಹೆಚ್ಚು ನೀರನ್ನು ಕುಡಿದಿದ್ದರೆ ಆತನನ್ನು ಅಂಗಾತ ಮಲಗಿಸಿ ಹೊಟ್ಟೆಯ ಭಾಗವನ್ನು ನಿಧಾನವಾಗಿ ಅಮುಕಬೇಕು. ಆಗ ಕುಡಿದ ನೀರು ನಿಧಾನವಾಗಿ ಹೊರಬರುತ್ತದೆ. ನಂತರ ಬಾಯಿಂದ ರೋಗಿಯ ಬಾಯಿಯ ಮೂಲಕ ಕೃತಕ ಉಸಿರಾಟ ಉಂಟಾಗಲು ಸಹಕರಿಸಬೇಕು.

**ಉಷಾ :** ಸರ್, ಸಾಧಾರಣವಾಗಿ ಚಿಕ್ಕ ಮಕ್ಕಳಲ್ಲಿ ಭೇದಿಯಾಗುತ್ತದೆ ? ಹೀಗೆ ಆದಾಗ ಏನು ಮಾಡಬೇಕು ?

**ಶಿಕ್ಷಕರು :** ಸಣ್ಣ ಮಕ್ಕಳಲ್ಲಿ ಆಗಿಂದಾಗ್ಗೆ ಕಾಡುವ ಸಾಮಾನ್ಯ ಕಾಯಿಲೆ ಭೇದಿ ಅತಿಸಾರ. ಇದಕ್ಕೆ ಪ್ರಥಮ ಚಿಕಿತ್ಸೆಯು ಅತಿ ಅಗತ್ಯ. ಅಂತಹ ಮಕ್ಕಳಿಗೆ ತಕ್ಷಣ ಓ. ಆರ್. ಎಸ್. ದ್ರಾವಣ ತಯಾರಿಸಿ ಅವರಿಗೆ ಕುಡಿಸಬೇಕು.

**ರಮೇಶ :** ಓ. ಆರ್. ಎಸ್. ಎಂದರೇನು ?

**ಶಿಕ್ಷಕರು :** ಓ. ಆರ್. ಎಸ್. ಎಂದರೆ ಓ-ಓರಲ್, ಆರ್-ರೀಹೈಡ್ರೇಷನ್, ಎಸ್-ಸಾಲ್ಟ್ ಸಲ್ಯೂಷನ್ (ಬಾಯಿಯ ಮೂಲಕ ಕುಡಿಸುವ ಜಲೀಕರಣ ಉಪ್ಪಿನ ದ್ರಾವಣ)

**ರಮೇಶ :** ಇದನ್ನು ಕುಡಿಸದಿದ್ದರೆ ಏನಾಗುತ್ತದೆ ?

**ಶಿಕ್ಷಕರು :** ಅತಿಸಾರದಿಂದ ದೇಹದ ನೀರಿನ ಅಂಶವೆಲ್ಲಾ ಹೋಗಿ ನಿರ್ಜಲೀಕರಣ ಉಂಟಾಗಿ ಬಹಳ ಸುಸ್ತಾಗುತ್ತದೆ.

ಓ.ಆರ್.ಎಸ್. : ಕಾಯಿಸಿ ಆರಿಸಿದ ೧ ಲೋಟ ನೀರು + ೧ ಚಮಚ ಸಕ್ಕರೆ + ೧/೪ ಚಮಚ ಉಪ್ಪು + ನಾಲ್ಕು ಹನಿ ನಿಂಬೆ ರಸ - ಇವುಗಳ ಮಿಶ್ರಣವೇ ಓ.ಆರ್.ಎಸ್.

ಅತಿಸಾರ ಭೇದಿಗೆ ನೀಡುವ ಓ.ಆರ್.ಎಸ್. ನಂತಹ ಪ್ರಥಮ ಚಿಕಿತ್ಸೆಯಿಂದ ಮಕ್ಕಳನ್ನು ಪ್ರಾಣಾಪಾಯದಿಂದ ತಪ್ಪಿಸಬಹುದು.

**ಶಿಕ್ಷಕರು :** ಮಕ್ಕಳೇ ಸಾಮಾನ್ಯವಾಗಿ ಕಾಡುವ ರೋಗವೆಂದರೆ ಜ್ವರ. ಇಂತಹ ಸಂದರ್ಭದಲ್ಲಿ ನಾವು ಮಾಡಬೇಕಾದ ಪ್ರಥಮ ಚಿಕಿತ್ಸೆ ಎಂದರೆ ರೋಗಿಯನ್ನು ಚೆನ್ನಾಗಿ ಗಾಳಿಯಾಡುವ ಕೋಣೆಯಲ್ಲಿ ಮಲಗಿಸಬೇಕು. ಹಣೆಯ ಮೇಲೆ ತೇವದ ಬಟ್ಟೆಯನ್ನು ಹಾಕುತ್ತಿರಬೇಕು. ಆಗಿಂದಾಗ್ಗೆ ಜ್ವರದ ತಾಪವನ್ನು ಗುರುತಿಸಬೇಕು. ರೋಗಿಗೆ ಕಾಯಿಸಿ ಆರಿಸಿದ ನೀರು ಕುಡಿಸಬೇಕು. ವೈದ್ಯರಿಂದ ಸಕಾಲದಲ್ಲಿ ಚಿಕಿತ್ಸೆ ಮಾಡಿಸಬೇಕು.

**ವಿದ್ಯಾರ್ಥಿಗಳು :** ಇಂದು ನಾವು ಬಹಳ ವಿಷಯ ಕಲಿತೆವು.

**ಶಿಕ್ಷಕರು :** ನೀವು ಕಲಿತ ವಿಷಯಗಳನ್ನು ನೆನಪಿನಲ್ಲಿಟ್ಟುಕೊಂಡು ಸಂದರ್ಭಕ್ಕನುಸಾರವಾಗಿ ವರ್ತಿಸಿ, ಇತರರಿಗೆ ಸಹಾಯ ಮಾಡಿ.

ಮಕ್ಕಳೇ ಎಲ್ಲಾ ಸಂದರ್ಭಗಳಲ್ಲೂ ನೀವೇ ಪ್ರಥಮ ಚಿಕಿತ್ಸೆ ಮಾಡಲು ಸಾಧ್ಯವಾಗುವುದಿಲ್ಲ, ದೊಡ್ಡವರ ನೆರವು ಪಡೆಯಬೇಕಾಗುತ್ತದೆ.

## ಶಬ್ದಗಳ ಅರ್ಥ

ಮೂರ್ಛೆ – ಎಚ್ಚರ ತಪ್ಪು ; ಅಮುಕು – ಒತ್ತುವದು ; ನಿರ್ಜಲೀಕರಣ – ನೀರಿಲ್ಲದ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಪ್ರಥಮ ಚಿಕಿತ್ಸೆ ಎಂದರೇನು ?

________________________________________

________________________________________

ಆ) ಓ. ಆರ್. ಎಸ್. ಎಂದರೇನು ?

________________________________________

________________________________________

ಇ) ದೇಹದ ನಿರ್ಜಲೀಕರಣ ಎಂದರೇನು ?

________________________________________

________________________________________

ಈ) ನೀರಿನಲ್ಲಿ ಮುಳುಗಿದಾಗ ಯಾವ ರೀತಿ ಪ್ರಥಮ ಚಿಕಿತ್ಸೆ ನೀಡಬೇಕು ?

________________________________________

________________________________________

ಪ್ರಶ್ನೆ ೨) ಕೆಳಗಿನ ವಾಕ್ಯಗಳ ಸರಿ / ತಪ್ಪು ಬರೆಯಿರಿ.

ಅ) ಓ. ಆರ್. ಎಸ್. ದ್ರಾವಣ ನಿರ್ಜಲೀಕರಣ ತಪ್ಪಿಸುತ್ತದೆ. ____________

ಆ) ಅತಿ ಹೆಚ್ಚು ರಕ್ತಸ್ರಾವವಾದಾಗ ವೈದ್ಯರಲ್ಲಿಗೆ ಹೋಗುವ ಅಗತ್ಯವಿರುವುದಿಲ್ಲ. ____________


ಇ) ಮೂಳೆ ಮುರಿತಕ್ಕೆ ಪ್ರಥಮ ಚಿಕಿತ್ಸೆ ಸುಲಭ. ____________

ಈ) ಪ್ರಥಮ ಚಿಕಿತ್ಸೆ ನಡೆಸಲು ತರಬೇತಿ ಅಗತ್ಯ. ____________

## ಉಪಕ್ರಮ

ಕೆಳಗಿನ ಚಿತ್ರಗಳನ್ನು ಗಮನಿಸಿರಿ. ಪ್ರಥಮೋಪಚಾರದ ಕುರಿತು ಶಿಕ್ಷಕರಿಂದ/ಪಾಲಕರಿಂದ ಮಾಹಿತಿ ಪಡೆದುಕೊಳ್ಳಿರಿ.









• ನುಡಿಮುತ್ತು •

ಸದೃಢವಾದ ಶರೀರದಲ್ಲಿ ಸದೃಢವಾದ ಮನಸ್ಸು

## ಆರೋಗ್ಯವೇ ಭಾಗ್ಯ

### ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- ಅನಾಫೇಲಿಸ್ ಈ ಸೊಳ್ಳೆಯಿಂದ ಹರಡುವ ರೋಗ ಯಾವುದು ? ☐

  ೧) ಮಲೇರಿಯಾ ೨) ಕಾಲರಾ ೩) ಘಟಸರ್ಪ ೪) ಗಂಟಲುಮಾರಿ

- ಕೆಳಗಿನವುಗಳಲ್ಲಿ ಶುದ್ಧ ಶಬ್ದ ಯಾವುದು ? ☐

  ೧) ಉಸ್ತವ ೨) ಊಸ್ತವ ೩) ಉತ್ಸವ ೪) ಉತ್ತ್ಸವ



# ೧೮. ಸಚಿನ ರಮೇಶ ತೆಂಡೂಲ್ಕರ



ಜನ್ಮ ದಿನಾಂಕ : ೨೪ ಎಪ್ರಿಲ್, ೧೯೭೩

ಪ್ರಥಮ ಟೆಸ್ಟ್ ಮ್ಯಾಚ್ : ೧೫ ನವ್ಹೆಂಬರ್, ೧೯೮೯

ಪ್ರಥಮ ಓಡಿಐಯ್ : ೧೮ ಡಿಸೆಂಬರ್, ೧೯೮೯

ಓಡಿಐಯ್ ಶತಕಗಳು ೪೯

ಓಡಿಐಯ್ ಅರ್ಧ-ಶತಕಗಳು ೯೬

ಟೆಸ್ಟ್ ಶತಕಗಳು ೫೧




ಓಡಿಐಯ್ ರನ್ನುಗಳು ೧೮,೪೨೬

ಟೆಸ್ಟ್ ರನ್ನುಗಳು ೧೫,೯೨೧

ಕೊನೆಯ ಟೆಸ್ಟ್ ಮ್ಯಾಚ್ : ೧೪ ನವ್ಹೆಂಬರ್, ೨೦೧೩

ಕೊನೆಯ ಓಡಿಐಯ್ : ೧೮ ಮಾರ್ಚ, ೨೦೧೨





**ಸಚಿನ ತೆಂಡೂಲ್ಕರ ಅವರಿಗೆ 'ಭಾರತ ರತ್ನ' ಈ ಸರ್ವೋಚ್ಚ ನಾಗರಿಕ ಸನ್ಮಾನವನ್ನು ಕೊಟ್ಟು ಗೌರವಿಸಲಾಯಿತು.**

## ಜಾಗತಿಕ ದಾಖಲೆಗಳು

- ಪುರುಷರ ಏಕದಿನದ ಅಂತರರಾಷ್ಟ್ರೀಯ ಪಂದ್ಯದಲ್ಲಿ ದ್ವಿಶತಕ ಬಾರಿಸಿದ ಪ್ರಥಮ ಕ್ರೀಡಾಪಟು.
- ಟೆಸ್ಟ್ ಮತ್ತು ಓಡಿಐಯ್‌ಗಳಲ್ಲಿ ಅತೀ ಹೆಚ್ಚು ಆಟಗಳನ್ನು ಆಡಿದ ಕ್ರೀಡಾಪಟು.
- ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯದಲ್ಲಿ ನೂರು ಶತಕಗಳನ್ನು ಆಡಿದ ಏಕಮೇವ ಕ್ರೀಡಾಪಟು.
- ಟೆಸ್ಟ್ ಕ್ರಿಕೆಟ್ ಪಂದ್ಯಗಳಲ್ಲಿ ಐವತ್ತು ಶತಕಗಳನ್ನು ಬಾರಿಸಿದ ಏಕಮೇವ ಕ್ರೀಡಾಪಟು.
- ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ೧೫,೦೦೦ ರನ್ನುಗಳನ್ನು ಮಾಡಿದ ಪ್ರಥಮ ಬ್ಯಾಟ್ಸ್‌ಮನ.
- ಹೆಚ್ಚು ಜಾಗತಿಕ ದಾಖಲೆಗಳನ್ನು ಮಾಡಿದ ಜಾಗತಿಕ ದಾಖಲೆಯ ಪ್ರಥಮ ಕ್ರೀಡಾಪಟು.

## ಕೆಲವು ಪುರಸ್ಕಾರಗಳು

- ಅರ್ಜುನ ಪ್ರಶಸ್ತಿ
- ರಾಜೀವಗಾಂಧಿ ಖೇಲರತ್ನ
- ಪದ್ಮಶ್ರೀ
- ಮಹಾರಾಷ್ಟ್ರ ಭೂಷಣ
- ಪದ್ಮವಿಭೂಷಣ
- ಭಾರತರತ್ನ

**ಕೊಲಾಜ್ ಎಂದರೆ ಕಾಗದವನ್ನು, ಚಿತ್ರಗಳನ್ನು, ಫೋಟೊಗಳನ್ನು ಹಾಗೂ ಕೆಲವು ಬರಹಗಳನ್ನು ಕತ್ತರಿಸಿ ಒಂದೆಡೆಗೆ ಅಂಟಿಸುವ ಕಲಾವಿಷ್ಕಾರ. ನೀವು ಕೊಲಾಜನ್ನು ಒಂದು ಶಿರ್ಷಿಕೆಗಾಗಿ ಅಥವಾ ಹೆಚ್ಚು ಶಿರ್ಷಿಕೆಗಳನ್ನು ಒಂದೆಡೆ ಸೇರಿಸಿ ಮಾಡಬಹುದು.**

# ನನ್ನ ನೆಚ್ಚಿನ ಕ್ರಿಕೆಟ್‌ಪಟು







**ಬೀಳ್ಕೊಡುವ ಸಮಾರಂಭದಲ್ಲಿ ಮಾಡಿದ ಮನಮುಟ್ಟುವ ಭಾಷಣ**

ಸಚಿನ್ ಅವರ ಜೀವನದಲ್ಲಿ ಅವರಿಗೆ ಸಹಾಯ ಮಾಡಿದ – ಅವರ ತಂದೆ ತಾಯಿಗಳು, ಬಳಗದವರು, ಸಂಬಂಧಿಕರು, ಮಿತ್ರರು, ಮಾರ್ಗ ದರ್ಶಕರು, ಡಾಕ್ಟರಗಳು, ತರಬೇತಿಗಾರರು, ನಿರ್ವಹಣೆಗಾರರು, ಎಲ್ಲ ಮಾಧ್ಯಮಗಳು ಮತ್ತು ಅವರನ್ನು ಹುರಿದುಂಬಿಸಿದ ಎಲ್ಲರಿಗೂ ಅವರು ಧನ್ಯವಾದಗಳನ್ನು ಸಲ್ಲಿಸಿದರು.



ನಾವು ನಿಮ್ಮ ಬಗ್ಗೆ
ಹೆಮ್ಮೆ ಪಡುವೆವು,
ಸಚಿನ !





ಸಚಿನ ತೆಂಡೂಲ್ಕರ ಅವರ ತಂದೆ ಪ್ರೊ. ರಮೇಶ
ತೆಂಡೂಲ್ಕರ ಅವರು ೧೯೯೯ ರಲ್ಲಿ ಕ್ರಿಕೆಟ್ ವಿಶ್ವಕಪ್‌ದ ಆಟ
ಗಳು ನಡೆಯುತ್ತಿರುವಾಗ ನಿಧನರಾದರು. ಸಚಿನ ಅವರು
ಸ್ವಲ್ಪ ಅವಧಿಯ ಸಲುವಾಗಿ ಇಂಗ್ಲೆಂಡದಿಂದ ಭಾರತಕ್ಕೆ
ಬಂದು ಮತ್ತೆ ಮರಳಿ ಹೋದರು. ಅವರ ಮುಂದಿನ ಆಟ
ಕೀನ್ಯಾದ ವಿರುದ್ಧ ಇದ್ದಿತು, ಅದರಲ್ಲಿ ಅವರು ಶತಕ (೧೦೧
ಬಾಲ್‌ಗಳಲ್ಲಿ ೧೪೦ ರನ್ನುಗಳನ್ನು) ಬಾರಿಸಿದರು. ಈ ಶತಕ
ವನ್ನು ಅವರು ತಮ್ಮ ತಂದೆಗೆ ಅರ್ಪಿಸಿದರು.

ಸಚಿನ ಅವರು ತಮ್ಮ ಬೀಳ್ಕೊಡುವ ಸಮಾರಂಭದಲ್ಲಿ ತಮ್ಮ 'ಸರ ರಮಾಕಾಂತ ಆಚ್ರೇಕರ ಅವರ ಬಗೆಗೆ ಹೀಗೆ ಎಂದಿದ್ದಾರೆ :

ಮೋಜಿನಿಂದ ಹೇಳುವದಾದರೆ ಕಳೆದ ೨೯ ವರ್ಷಗಳಲ್ಲಿ ಸರ ಅವರು ನನಗೆ, ''ತುಂಬಾ ಚೆನ್ನಾಗಿ ಆಡಿದೆ'' ಎಂದು ಎಂದೂ ಹೇಳಲಿಲ್ಲ, ಏಕೆಂದರೆ ಹೀಗೆ ಹೇಳಿದ ನಂತರ ಬಹುಶ: ಅಷ್ಟಕ್ಕೇ ಸಂತೃಪ್ತನಾಗಿ ನಾನು ಮುಂದೆ ಕಷ್ಟಪಟ್ಟು ಆಡಲಿಕ್ಕಿಲ್ಲ ಎಂದು ಅವರಿಗೆ ಅನಿಸಿರಬಹುದು. ಬಹುಶ: ಈಗ, 'ಚೆನ್ನಾಗಿ ಮಾಡಿದೆ !' ಎಂದು ನನ್ನ ಇಲ್ಲಿಯವರೆಗಿನ ಆಟದ ಬಗ್ಗೆ ಹೇಳಿ, ನೀವು ನಿಮ್ಮ ಭಾಗ್ಯಕ್ಕೆ ಅಭಿನಂದನೆ ಸಲ್ಲಿಸಬಹುದು. ಏಕೆಂದರೆ ಇನ್ನು ಮುಂದೆ ಮ್ಯಾಚ್‌ಗಳೇ ಇಲ್ಲವಲ್ಲ ಸರ, ನನ್ನ ಜೀವನದಲ್ಲಿ, ಇನ್ನು ಮೇಲೆ ಕ್ರಿಕೆಟ್ ಇದು ಯಾವಾಗಲೂ ನನ್ನ ಹೃದಯದಲ್ಲಿ ಇರುವುದು, ಮತ್ತು ನಾನು ಬರೀ ಒಬ್ಬ ಪ್ರೇಕ್ಷಕನಾಗಿರುವೆನು. ಆದರೆ ನನ್ನ ಜೀವನದಲ್ಲಿ ನಿಮ್ಮ ಕೊಡುಗೆ ಬಹಳ ಶ್ರೇಷ್ಠವಾದುದು ಆಗಿದೆ. ಅದಕ್ಕಾಗಿ ನಾನು ನಿಮಗೆ ಚಿರಋಣಿಯಾಗಿದ್ದೇನೆ.





ಸಚಿನ ತೆಂಡೂಲ್ಕರ ಅವರ ಒಬ್ಬ ತರುಣಿ ಅಭಿಮಾನಿ, ಅವರ ಜೀವನ ಹಾಗೂ ಎಲ್ಲ ಆಟಗಳ ಮೇಲೆ ಆಧರಿಸಿದ 'ನನ್ನ ನೆಚ್ಚಿನ ಕ್ರಿಕೆಟ್ ಕ್ರೀಡಾಪಟು' ಎಂಬ ವಿಷಯದ ಮೇಲೆ ಈ ಕೊಲಾಜನ್ನು ಮಾಡಿರುವಳು. ನೀವೂ ಸಹ ಇಂತಹ ಕೊಲಾಜನ್ನು ನಿಮ್ಮ ನೆಚ್ಚಿನ ವ್ಯಕ್ತಿಯ ಮೇಲೆ ಮಾಡಬಹುದು.

# ‘ಭಾರತರತ್ನ’ ನಾಗರಿಕ ಸನ್ಮಾನ

‘ಭಾರತರತ್ನ’ ಇದು ಭಾರತದ ಸರ್ವೋಚ್ಚ ನಾಗರಿಕ ಸನ್ಮಾನವಾಗಿದೆ. ಈ ಸನ್ಮಾನವನ್ನು ರಾಷ್ಟ್ರೀಯ ಸೇವೆಗಾಗಿ ಕೊಡಲಾಗುತ್ತದೆ. ಈ ರಾಷ್ಟ್ರೀಯ ಸೇವೆಯಲ್ಲಿ ಕಲೆ, ಸಾಹಿತ್ಯ, ವಿಜ್ಞಾನ, ಸಾರ್ವಜನಿಕ ಸೇವೆ ಹಾಗೂ ಕ್ರೀಡೆ ಇವುಗಳ ಸಮಾವೇಶವಿದೆ. ಈ ಸನ್ಮಾನದ ಸ್ಥಾಪನೆಯು ೨ ಜನೇವರಿ ೧೯೫೪ ರಲ್ಲಿ ಅಂದಿನ ಭಾರತದ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ ಅವರ ಮೂಲಕ ಮಾಡಲಾಯಿತು.

ಆರಂಭದಲ್ಲಿ ಈ ಸರ್ವೋಚ್ಚ ನಾಗರಿಕ ಸನ್ಮಾನವನ್ನು ಮರಣೋತ್ತರವಾಗಿ ಕೊಡುವ ಪದ್ಧತಿಯು ಇರಲಿಲ್ಲ. ಕ್ರಿ.ಶ. ೧೯೫೫ ರಲ್ಲಿ ಈ ನಾಗರಿಕ ಸನ್ಮಾನವನ್ನು ಮರಣೋತ್ತರವಾಗಿಯೂ ಕೊಡುವ ಯೋಜನೆಯನ್ನು ಜಾರಿಯಲ್ಲಿ ತರಲಾಯಿತು. ಈ ನಾಗರಿಕ ಸನ್ಮಾನವನ್ನು ಒಂದು ವರ್ಷದಲ್ಲಿ ಹೆಚ್ಚಿಗೆ ಹೆಚ್ಚು ಅಂದರೆ ಮೂವರು ವ್ಯಕ್ತಿಗಳಿಗೆ ಕೊಡಲು ಬರುತ್ತದೆ. ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರಿಗೆ ಕ್ರಿ.ಶ. ೧೯೫೪ ರಲ್ಲಿ ಪ್ರಪ್ರಥಮವಾಗಿ ಭಾರತರತ್ನ ನಾಗರಿಕ ಸನ್ಮಾನವನ್ನು ಕೊಟ್ಟು ಗೌರವಿಸಲಾಯಿತು.



‘ಭಾರತರತ್ನ’ ನಾಗರಿಕ ಸನ್ಮಾನವನ್ನು ಪಡೆದ ಕರ್ನಾಟಕದ ಸನ್ಮಾನನೀಯ ವ್ಯಕ್ತಿಗಳು

| ಕ್ರ. | ಹೆಸರು | ಇಸ್ವಿ | ಕ್ಷೇತ್ರ |
|---|---|---|---|
| ೧. | ಸರ ಮೋಕ್ಷಗುಂಡಂ ವಿಶ್ವೇಶ್ವರಯ್ಯ | ೧೯೫೫ | ವಿಜ್ಞಾನ |
| ೨. | ಪಂಡಿತ ಭೀಮಸೇನ ಜೋಶಿ | ೨೦೦೮ | ಕಲೆ |
| ೩. | ಡಾ. ಸಿ. ಎನ್. ಆರ್. ರಾವ್ | ೨೦೧೪ | ವಿಜ್ಞಾನ |



## ಉಪಕ್ರಮ

'ಭಾರತರತ್ನ' ಪ್ರಶಸ್ತಿ ಪಡೆದ ಎಲ್ಲ ಗಣ್ಯ ವ್ಯಕ್ತಿಗಳ ಹೆಸರುಗಳ ಯಾದಿ ತಯಾರಿಸಿರಿ.

## • ನುಡಿಮುತ್ತು •

ಸಾಧನೆಯೇ ಯಶಸ್ಸಿನ ಗುಟ್ಟು

AY86YZ

### ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು

## ❖ ಉತ್ತರಿಸಿರಿ ಜಾಣ ಮಕ್ಕಳೆ ❖

ಸರಿ ಉತ್ತರದ ಕ್ರಮಾಂಕವನ್ನು ಚೌಕಟ್ಟಿನಲ್ಲಿ ಬರೆಯಿರಿ.

- ಹಸಿರು ಜೀವನದ .................... ☐

  ೧) ಕೆಸರು   ೨) ಹೆಸರು   ೩) ಹಸಿರು   ೪) ಉಸಿರು

- ಗುಂಪಿಗೆ ಸೇರದ ಶಬ್ದ ಗುರುತಿಸಿರಿ. ☐

  ೧) ಜೋಳ   ೨) ಕಡಲೆ   ೩) ಹೆಸರು   ೪) ಶೇಂಗಾ

## ಗಮನಿಸಿರಿ

**ಕಾಲಗಳು :** ಕಾಲಗಳಲ್ಲಿ ಮೂರು ಪ್ರಕಾರಗಳಿವೆ. ವರ್ತಮಾನ ಕಾಲ, ಭೂತಕಾಲ ಮತ್ತು ಭವಿಷತ್ ಕಾಲ.

**ವರ್ತಮಾನ ಕಾಲ :** ಈಗ ನಡೆಯುವ ಕ್ರಿಯೆಯನ್ನು ಸೂಚಿಸುವ ಕಾಲಕ್ಕೆ 'ವರ್ತಮಾನ ಕಾಲ'ದ ವಾಕ್ಯ ಎನ್ನುವರು.


ಉದಾ. : ಪಲ್ಲವಿ ಸುಂದರ ಚಿತ್ರ ತೆಗೆಯುತ್ತಿದ್ದಾಳೆ.

**ಭೂತಕಾಲ :** ಆಗಿ ಹೋದ ಕ್ರಿಯೆಯನ್ನು ಸೂಚಿಸುವ ಕಾಲಕ್ಕೆ 'ಭೂತಕಾಲ'ದ ವಾಕ್ಯ ಎನ್ನುವರು.

ಉದಾ. : ಅರ್ಜುನನು ಯುದ್ಧದಲ್ಲಿ ಹೋರಾಡಿದ್ದನು.

**ಭವಿಷತ್ ಕಾಲ :** ಮುಂದೆ ಆಗಲಿರುವ ಕ್ರಿಯೆಯನ್ನು ಸೂಚಿಸುವ ಕಾಲಕ್ಕೆ 'ಭವಿಷತ್ ಕಾಲ'ದ ವಾಕ್ಯ ಎನ್ನುವರು.

ಉದಾ. : ನಾಳೆ ಸರೋಜಾ ಪುಣೆಯಿಂದ ಬರುವವಳಿದ್ದಾಳೆ.



# इयत्ता १ ली ते ८ वी साठीची पाठ्यपुस्तक मंडळाची वैशिष्ट्यपूर्ण पुस्तके

- मुलांसाठीच्या संस्कार कथा
- बालगीते
- उपयुक्त असा मराठी भाषा शब्दार्थ संग्रह
- सर्वांच्या संग्रही असावी अशी पुस्तके
- स्फूर्तीगीत
- गीतमंजुषा
- निवडक कवी, लेखक यांच्या कथांनी युक्त पुस्तक





















**पुस्तक मागणीसाठी www.ebalbharati.in, www.balbharati.in संकेतस्थळावर भेट द्या.**

*साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.*

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು
ಅಭ್ಯಾಸಕ್ರಮ ಸಂಶೋಧನ ಮಂಡಳ ,ಪುಣೆ .
बालभारती इयत्ता ४ थी (कन्नड माध्यम) ₹ 39.00

